ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 19 ಶುಕ್ರವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 64 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪರಿಷತ್ ಫೈಟ್: ಬಿಜೆಪಿ–ಜೆಡಿಎಸ್ ಶಾಸಕರ
ಅಡ್ಡ ಮತದಾನ; ಕಾಂಗ್ರೆಸ್‌ಗೆ ವರದಾನ

ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, ಪಿ.ವಿ.ಮೋಹನ್, ಬಿ.ಎಸ್.ಶಿವಣ್ಣ, ತಿಪ್ಪಣ್ಣಪ್ಪ ಕಮಕನೂರು, ವಿನಯ ಕಾರ್ತಿಕ್; ಬಿಜೆಪಿಯ ರಘು ಕೌಟಿಲ್ಯ, ಲಿಂಗರಾಜ ಪಾಟೀಲ್ ಪರಿಷತ್ ಪ್ರವೇಶ



ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿ.ಕೆ.ಹರಿಪ್ರಸಾದ್, ಶಿವಣ್ಣ, ಬಿ.ವಿ.ಮೋಹನ್, ವಿನಯ್ ಕಾರ್ತಿಕ್, ತಿಪ್ಪಣ್ಣಪ್ಪ ಕಮಕನೂರು ಅವರನ್ನು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಭಿನಂದಿಸಿದರು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಉಪಸ್ಥಿತರಿದ್ದರು.



ವಿಧಾನ ಪರಿಷತ್ ಚುನಾವಣೆಯಲ್ಲಿ ಜಯಗಳಿಸಿದ ಬಿಜೆಪಿ ಅಭ್ಯರ್ಥಿಗಳಾದ ರಘು ಕೌಟಿಲ್ಯ, ಲಿಂಗರಾಜ ಪಾಟೀಲ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಎಸ್.ಎಸ್. ಪಾಟೀಲ್, ಕೋಲಾರದ ಮಾಜಿ ಸಂಸದ ಮುನಿಸ್ವಾಮಿ ಇತರರು ಅಭಿನಂದಿಸಿದರು.

- ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಹೀನಾಯ ಸೋಲು
- ಕಾಂಗ್ರೆಸ್‌ನದು ಬಂಪರ್ ಗೆಲುವು; ಬಿಜೆಪಿಯದು ಪ್ರಯಾಸದ ಜಯ
- ಕಾಂಗ್ರೆಸ್‌ನ ವಿನಯ ಕಾರ್ತಿಕ್‌ಗೆ ನಿರೀಕ್ಷೆಗೂ ಮೀರಿದ ಮತ

ಬೆಂಗಳೂರು, ಜೂ.18– ರಾಜ್ಯ ವಿಧಾನ ಸಭೆಯಿಂದ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಒಡೆದ ಮನೆ ಎಂಬುದು ಸಾಬೀತಾಗಿದೆ. ಅಷ್ಟೇ ಅಲ್ಲ ಜೆಡಿಎಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಗೊತ್ತಾಗಿದೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ 136 ಶಾಸಕರನ್ನು ಹೊಂದಿದೆ. ಇದರ ಜೊತೆಗೆ ಪಕ್ಷೇತರರಾದ ವೆಂಕಟರಮಣಯ್ಯ, ಲತಾ ಮಲ್ಲಿಕಾರ್ಜುನ ಮತ್ತು ದರ್ಶನ್ ಪುಟ್ಟಣ್ಣಯ್ಯ ಕಾಂಗ್ರೆಸ್ ಪಕ್ಷದ ಸಹ ಸದಸ್ಯರಾಗಿದ್ದಾರೆ. ಈ ಮೂಲಕ ಒಟ್ಟು ಕಾಂಗ್ರೆಸ್ 139 ಶಾಸಕರನ್ನು ಹೊಂದಿದೆ. ಈ ಪೈಕಿ ಈಗ ಚುನಾವಣೆಗೆ ಸ್ಪರ್ಧಿಸಿದ್ದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ 30, ಪಿ.ವಿ.ಮೋಹನ್–29, ಬಿ.ಎಸ್.ಶಿವಣ್ಣ–30, ತಿಪ್ಪಣಪ್ಪ ಕಮಕನೂರು–30 ಮತ್ತು ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್– 32 ಮತಗಳನ್ನು ಗಳಿಸಿದ್ದಾರೆ. ಈ ಮೂಲಕ ಕಾಂಗ್ರೆಸ್ 151 ಶಾಸಕರ ಬೆಂಬಲ ಪಡೆದುಕೊಂಡಿದೆ. ಇದರೊಂದಿಗೆ ಜೆಡಿಎಸ್ ಮತ್ತು ಬಿಜೆಪಿಯ ಒಟ್ಟು 11 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಒಬ್ಬ ಬಿಜೆಪಿ ಶಾಸಕರ ಮತ ಅನರ್ಹಗೊಂಡಿದೆ.

ಬಿಜೆಪಿಯಲ್ಲಿ ಮೂವರು ಉಚ್ಚಾಟಿತ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಬಸನಗೌಡ ಪಾಟೀಲ್ ಯತ್ನಾಳ್ ಜೊತೆಗೆ ಜನಾರ್ದನ ರೆಡ್ಡಿ ಅವರ ಬೆಂಬಲದೊಂದಿಗೆ 65 ಶಾಸಕರು ಇದ್ದಾರೆ. ಆದರೆ, ಈ ಪೈಕಿ ರಘು ಕೌಟಿಲ್ಯ ಅವರಿಗೆ 29 ಮತ್ತು ಲಿಂಗರಾಜ ಪಾಟೀಲ್ ಅವರಿಗೆ 27 ಮತಗಳು ಲಭ್ಯವಾಗಿವೆ. ಜೊತೆಗೆ 18 ಶಾಸಕರ ಬೆಂಬಲವಿರುವ ಜೆಡಿಎಸ್‌ಗೆ ಬಿಜೆಪಿ ಎರಡು ಹೆಚ್ಚುವರಿ ಮತಗಳನ್ನು ನೀಡಿತ್ತು. ಆದರೆ ಜೆಡಿಎಸ್ ಅಭ್ಯರ್ಥಿ ಕೇವಲ ■ 6ನೇ ಪುಟಕ್ಕೆ

ಕಾಂಗ್ರೆಸ್ ಅಭ್ಯರ್ಥಿಗಳು ಪಡೆದ ಮತಗಳು

ಬಿ.ಕೆ.ಹರಿಪ್ರಸಾದ್	– 30
ಪಿ.ವಿ.ಮೋಹನ್	– 29
ಬಿ.ಎಸ್.ಶಿವಣ್ಣ	– 30
ತಿಪ್ಪಣ್ಣಪ್ಪ ಕಮಕನೂರು	– 30
ವಿನಯ್ ಕಾರ್ತಿಕ್	– 32

ಬಿಜೆಪಿ ಅಭ್ಯರ್ಥಿಗಳು ಪಡೆದ ಮತಗಳು

ರಘು ಕೌಟಿಲ್ಯ	– 29
ಲಿಂಗರಾಜ ಪಾಟೀಲ್	– 27

ಅಡ್ಡ ಮತದಾನ
ಬಿಜೆಪಿ–ಜೆಡಿಎಸ್
7 – 4
ಒಟ್ಟು 11

ಚುನಾಯಿತ ಮತ:	– 222
ಊರ್ಜಿತ ಮತ:	– 221
ಅನೂರ್ಜಿತ ಮತ:	– 1

ಮೈಸೂರಲ್ಲಿ ರೌಡಿಗಳ ಮೇಲೆ ಆ್ಯಂಟಿ
ರೌಡಿ ಸ್ಕ್ವಾಡ್ ಹದ್ದಿನ ಕಣ್ಣು

4 ಉಪ ವಿಭಾಗ, 18 ಪೊಲೀಸ್ ಠಾಣೆಗಳಲ್ಲಿ ರೌಡಿ ಪ್ರತಿಬಂಧಕ ದಳ ರಚನೆ ; ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ

■ ರೌಡಿಸಂ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ■ ಒಟ್ಟು 108 ಅಧಿಕಾರಿ, ಸಿಬ್ಬಂದಿಯಿಂದ ರೌಡಿಗಳ ಮೇಲೆ ನಿಗಾ ■ ರೌಡಿಶೀಟರ್‌ಗಳ ಬೆರಳಚ್ಚು ದಾಖಲೀಕರಣ, ಹಣಕಾಸು ವಹಿವಾಟು ಮೇಲ್ವಿಚಾರಣೆ



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಆಯುಕ್ತರಾದ ಸೀಮಾ ಲಾಟ್ಕರ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಯಿತು.

ಮೈಸೂರು, ಜೂ.18 (ಪಿಎಂ)– ನಗರದಲ್ಲಿ ರೌಡಿಗಳ ಮೇಲೆ ಹದ್ದಿನ ಕಣ್ಣಿಡಲು ಪ್ರತಿ ಠಾಣೆಯಲ್ಲಿ ರೌಡಿ ಪ್ರತಿಬಂಧಕ ದಳ (ಆ್ಯಂಟಿ ರೌಡಿ ಸ್ಕ್ವಾಡ್) ರಚಿಸಲಾಗಿದೆ. ರೌಡಿಶೀಟರ್‌ಗಳ ಕಾನೂನುಬಾಹಿರ ಚಟುವಟಿಕೆ ನಿಯಂತ್ರಿಸಿ ಅವರ ವಿರುದ್ಧ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲು ನಗರದ 4 ಉಪ ವಿಭಾಗಗಳು ಹಾಗೂ 18 ಪೊಲೀಸ್ ಠಾಣೆಗಳಲ್ಲಿ ರೌಡಿ ಪ್ರತಿಬಂಧಕ ದಳಗಳನ್ನು ರಚನೆ ಮಾಡಲಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಗುರುವಾರ ಮಾಧ್ಯಮದವರಿಗೆ ಈ ವಿಷಯ ತಿಳಿಸಿದರು. ತಮ್ಮ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಕಮಿಷನರೇಟ್ ವ್ಯಾಪ್ತಿಯ ಉಪವಿಭಾಗಗಳು, ಠಾಣೆಗಳ ವ್ಯಾಪ್ತಿಯ ರೌಡಿ ಪ್ರತಿಬಂಧಕ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಭೆ ನಡೆಸಿದ ಪೊಲೀಸ್ ಆಯುಕ್ತರು, ಆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು.

ಪ್ರತಿ ವಿಭಾಗ, ಠಾಣೆಗಳಲ್ಲಿ ಪಿಎಸ್‌ಐ ನೇತೃತ್ವದಲ್ಲಿ ರೌಡಿ ಪ್ರತಿಬಂಧಕ ದಳಗಳನ್ನು ರಚಿಸಿದ್ದು, ನಗರದಲ್ಲಿ ಒಟ್ಟು 108 ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ. ಉಪ ಪೊಲೀಸ್ ಆಯುಕ್ತರು (ಕಾನೂನು ಸುವ್ಯವಸ್ಥೆ) ಹಾಗೂ ವಿಭಾಗದ ಎಸಿಪಿ ಅವರು ಇದರ ಮೇಲುಸ್ತುವಾರಿ ವಹಿಸಲಿದ್ದಾರೆ. ಇಂದಿನ ಸಭೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಕೈಗೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮಗಳ ಕುರಿತು ಸೂಕ್ತ ಮಾರ್ಗದರ್ಶನ ನೀಡಿದ್ದೇನೆ. ನಗರದಲ್ಲಿ ರೌಡಿ ಚಟುವಟಿಕೆಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ನಿರ್ದೇಶನದಂತೆ ಡಿಜಿ–ಐಜಿಪಿ ಅವರು ಸುತ್ತೋಲೆ ಹೊರಡಿಸಿದ್ದು, ಅದರಂತೆ ನಗರದ ಪ್ರತಿ ಠಾಣೆಯಲ್ಲಿ ಸಹ ರೌಡಿ ಪ್ರತಿಬಂಧಕ ದಳ (ಆ್ಯಂಟಿ ರೌಡಿ ಸ್ಕ್ವಾಡ್) ರಚನೆ ಮಾಡಲಾಗಿದೆ. ಆ ಮೂಲಕ ರೌಡಿಶೀಟರ್‌ಗಳ ಚಲನವಲನದ ಮೇಲೆ ಹದ್ದಿನ ಕಣ್ಣಿಡಲಾಗುವುದು. ಅವರ ಡಿಜಿಟಲ್ ಬೆರಳಚ್ಚು ದಾಖಲೀಕರಣ ■ 6ನೇ ಪುಟಕ್ಕೆ

ಡ್ರಗ್ ಪೆಡ್ಲರ್ ವಿರುದ್ಧವೂ ರೌಡಿಶೀಟ್

ಮೈಸೂರು ನಗರದಲ್ಲಿ ಒಟ್ಟು 700 ರೌಡಿಶೀಟರ್; ಪೊಲೀಸ್ ಆಯುಕ್ತರ ಮಾಹಿತಿ

ಮೈಸೂರು, ಜೂ.18(ಪಿಎಂ)– ಡ್ರಗ್ ಪೆಡ್ಲರ್‌ಗಳ ವಿರುದ್ಧವೂ ರೌಡಿಶೀಟ್ ತೆರೆಯುವ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದರು. ಮೈಸೂರು ನಗರದಲ್ಲಿ ಒಟ್ಟು 700 ಮಂದಿ ರೌಡಿಶೀಟರ್‌ಗಳು ಇದ್ದಾರೆ. ಈ ಪೈಕಿ ಯಾರು ರೌಡಿ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದರೋ ಅವರನ್ನು ಮಾತ್ರ ಮೇಲ್ವಿಚಾರಣೆ ಮಾಡಲಿದ್ದೇವೆ. ಜಾಮೀನು ರಹಿತ ವಾರಂಟ್ ಇದ್ದವರನ್ನು ಶೋಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದೇವೆ. ಈ ವರ್ಷದಲ್ಲಿ ಎರಡು ಪ್ರಕರಣದಲ್ಲಿ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗಿದೆ. ಮಾದಕ ವಸ್ತು ಪೂರೈಕೆದಾರರು (ಡ್ರಗ್ ಪೆಡ್ಲರ್) ಹಾಗೂ ರೌಡಿಶೀಟರ್‌ಗಳು ಸೇರಿದಂತೆ 20ಕ್ಕೂ ಹೆಚ್ಚು ಮಂದಿಯನ್ನು ಈ ವರ್ಷ ಗಡಿಪಾರು ಮಾಡಿದ್ದೇವೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಸಂಚಾರ ದಂಡ ಶೇ.50ರಷ್ಟು ರಿಯಾಯಿತಿ

1991ರಿಂದ ದಾಖಲಾಗಿರುವ ಪ್ರಕರಣಗಳಿಗೂ ಅನ್ವಯ;
ಪಾವತಿಗೆ ಜೂ.21ರಿಂದ ಜು. 10ರವರೆಗೆ ಅವಕಾಶ



ಬೆಂಗಳೂರು, ಜೂ.18– ಸಾರಿಗೆ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಬಾಕಿ ಉಳಿದಿರುವ ದಂಡಗಳನ್ನು ಪಾವತಿಸಲು ವಾಹನ ಮಾಲೀಕರಿಗೆ ರಾಜ್ಯ ಸಾರಿಗೆ ಇಲಾಖೆ ಮತ್ತೊಮ್ಮೆ ಸುವರ್ಣಾವಕಾಶ ನೀಡಿದೆ.

ಜೂನ್ 21ರಿಂದ ಜುಲೈ 10ರವರೆಗೆ ಬಾಕಿ ಇರುವ ದಂಡದ ಮೊತ್ತದ ಮೇಲೆ ಶೇ.50ರಷ್ಟು ರಿಯಾಯಿತಿ ನೀಡುವ ವಿಶೇಷ ಯೋಜನೆ ಜಾರಿಯಾಗಲಿದೆ.

ಈ ಯೋಜನೆಯಡಿ 1991ರಿಂದ 2022ರವರೆಗೆ ದಾಖಲಾಗಿರುವ 1.87 ಲಕ್ಷಕ್ಕೂ ಹೆಚ್ಚು ಡಿಪಾರ್ಟ್‌ಮೆಂಟ್ ಸ್ಟ್ಯಾಟ್ಯುಟರಿ ಆಕ್ಷನ್ ಪ್ರಕರಣಗಳು ಒಳಪಡಲಿವೆ. ಪರವಾನಗಿ ಷರತ್ತು ಉಲ್ಲಂಘನೆ, ಅವಧಿ ಮುಗಿದ ಅಥವಾ ಅಮಾನ್ಯ ಚಾಲನಾ ಪರವಾನಗಿ, ಫಿಟ್ನೆಸ್ ಸರ್ಟಿಫಿಕೇಟ್, ವಿಮೆ ಹಾಗೂ ಮಾಲಿನ್ಯ ಪರೀಕ್ಷಾ ಪ್ರಮಾಣಪತ್ರ ಸಂಬಂಧಿತ ಪ್ರಕರಣಗಳಿಗೆ ಈ ರಿಯಾಯಿತಿ ಅನ್ವಯವಾಗಲಿದೆ.

ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತೆ (ಜಾರಿ–ದಕ್ಷಿಣ) ಹಾಗೂ ಯೋಜನೆಯ ನೋಡಲ್ ಅಧಿಕಾರಿ ಓಂಕಾರೇಶ್ವರಿ ಅವರು ಮಾತನಾಡಿ, ಉಲ್ಲಂಘನೆ ನಡೆದ ಸಮಯದಲ್ಲಿ ಜಾರಿಯಲ್ಲಿದ್ದ ದಂಡದ ದರದ ಆಧಾರದ ಮೇಲೆ ಮೊತ್ತವನ್ನು ಲೆಕ್ಕ ಹಾಕಲಾಗುತ್ತದೆ. ಉದಾಹರಣೆಗೆ, 1992ರಲ್ಲಿ ಪ್ರಕರಣ ದಾಖಲಾಗಿದ್ದರೆ, ಅಂದಿನ ದಂಡದ ದರವೇ ಅನ್ವಯವಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಈ ಒಂದು ಬಾರಿಯ ಇತ್ಯರ್ಥ ಯೋಜನೆಯ ಮೂಲಕ ವಾಹನ ಮಾಲೀಕರು ಬಾಕಿ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಅವಕಾಶ ಸಿಗಲಿದೆ. ಬಾಕಿ ಪ್ರಕರಣಗಳನ್ನು ಹೊಂದಿರುವ ಎಲ್ಲರೂ ಮುಂದೆ ಬಂದರೆ ಸುಮಾರು ರೂ.74.44 ಕೋಟಿ ಆದಾಯ ಸಂಗ್ರಹವಾಗುವ ನಿರೀಕ್ಷೆಯಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ. ಅಂಕಿ–ಅಂಶಗಳ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯಲ್ಲಿ 76,487 ಬಾಕಿ ಪ್ರಕರಣಗಳಿದ್ದು, ಸುಮಾರು ರೂ.21.59 ಕೋಟಿ ಸಂಗ್ರಹವಾಗುವ ನಿರೀಕ್ಷೆ ಇದೆ. ■ 6ನೇ ಪುಟಕ್ಕೆ

ಮೇಲುಕೋಟೆ ಯೋಗಾನರಸಿಂಹಸ್ವಾಮಿ ದೇವಾಲಯದ ಹುಂಡಿ ಹಣ ಕಳ್ಳತನ ಹಿನ್ನೆಲೆ

ಅರ್ಚಕರು ಸೇರಿ 6 ಮಂದಿ ಅಮಾನತು

ಮೇಲುಕೋಟೆ, ಜೂ.18– ಮೇಲುಕೋಟೆ ಯೋಗಾನರಸಿಂಹಸ್ವಾಮಿ ಬೆಟ್ಟದ ದೇವಾಲಯದ ಹುಂಡಿ ಹಣ ಕಳ್ಳತನದ ಹಿನ್ನೆಲೆಯಲ್ಲಿ ಪ್ರಧಾನ ಅರ್ಚಕ ಸೇರಿದಂತೆ 6 ಮಂದಿಯನ್ನು ಕರ್ತವ್ಯ ಲೋಪದ ಆರೋಪದ ಮೇಲೆ ಅಮಾನತು ಮಾಡಲಾಗಿದೆ ಎಂದು ದೇವಾಲಯ ಕಾರ್ಯ ನಿರ್ವಾಹಕಾಧಿಕಾರಿ ಶೀಲಾ ತಿಳಿಸಿದ್ದಾರೆ.

ಜ.11ರಂದು ಬೆಟ್ಟದ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಸಿಸಿ ಕ್ಯಾಮರಾಗಳು ಹಾಗೂ ರಹಸ್ಯ ಕ್ಯಾಮರಾದ ಡಿವಿಆರ್ ನಾಶಪಡಿಸಿ ಹುಂಡಿ ಹಣ ಕಳ್ಳತನದ ಹಿನ್ನೆಲೆಯಲ್ಲಿ ದೇವಾಲಯದ ಅರ್ಚಕ, ಪಾರುಪತ್ತೇಗಾರ, ಮಣೆಗಾರ ಹಾಗೂ ಇಬ್ಬರು ಕಾವಲುಗಾರರು ಸೇರಿ ಒಟ್ಟು 6 ಮಂದಿ ವಿರುದ್ಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದೇವಾಲಯ ಇಓ ದೂರು ದಾಖಲಿಸಿದ್ದರು.

ಜೊತೆಗೆ ಬುಧವಾರ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ದೇವಾಲಯದ ಆಡಳಿತ ಮಂಡಳಿ ಸಭೆ ನಡೆಸಿ ಘಟನೆ ಸಂಬಂಧ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು. ಅದರಂತೆ ಗುರುವಾರ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಅರ್ಚಕ ನಾರಾಯಣಭಟ್, ಪಾರುಪತ್ತೇಗಾರ್ ಶ್ರೀಧರ, ಪರಿಚಾರಕ ತಿರುವೇಂಗಡಾಚಾರ್, ಕಾವಲುಗಾರ ಎಂ.ಬಿ.ಗಂಗಾಧರ, ಬಸವರಾಜು, ಮಣೇಗಾರ್ ಕಸ್ತೂರಿ ಶ್ರೀನಿವಾಸನ್ ಅವರನ್ನು ಅಮಾನತು ಮಾಡಲಾಗಿದೆ ಎಂದು ದೇವಾಲಯ ಕಾರ್ಯ ನಿರ್ವಾಹಕಾಧಿಕಾರಿ ಶೀಲಾ ತಿಳಿಸಿದ್ದಾರೆ.

ಬದಲೀ ವ್ಯವಸ್ಥೆ: ಜಿಲ್ಲಾಧಿಕಾರಿಗಳ ಆದೇಶದಂತೆ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಶೀಲಾ ಅವರು ಯೋಗಾನರಸಿಂಹಸ್ವಾಮಿ ಬೆಟ್ಟದ ಸುಗಮ ಆಡಳಿತ ನಿರ್ವಹಣೆಗಾಗಿ ಅರ್ಚಕ ನಾರಾಯಣಭಟ್ ಬದಲಿಗೆ ಬಿ.ವಿ.ಆನಂದಳ್ವಾರ್, ಪಾರುಪತ್ತೇಗಾರ್ ಶ್ರೀಧರ ಬದಲಿಗೆ ಸ್ಥಾನಿಕ ಶ್ರೀರಾಮನ್, ಪರಿಚಾರಕ ತಿರುವೇಂಗಡಾಚಾರ್ ಬದಲಿಗೆ ಸ್ಥಾನೀಕಂ ಸಂಪತ್ಕುಮಾರನ್, ಮಣೆಗಾರ ಕಸ್ತೂರಿ ಶ್ರೀನಿವಾಸನ್ ಬದಲಿಗೆ ನರಸಿಂಹನ್, ಕಾವಲುಗಾರ ಎಂ.ಬಿ.ಗಂಗಾಧರ್ ಮತ್ತು ಬಸವರಾಜು ಬದಲಿಗೆ ನಾರಾಯಣ ಮತ್ತು ಕಿಶೋರನನ್ನು ನೇಮಿಸಿ, ಗುರುವಾರ ಸಂಜೆಯೇ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ್ದಾರೆ. ಈ ವೇಳೆ ಮೇಲುಕೋಟೆ ಪೊಲೀಸರು ಭದ್ರತೆ ಕಲ್ಪಿಸಿದ್ದರು.

ರೈಲ್ವೆ ಹಳಿಗಳ ಪಕ್ಕ ಮರಗಳ ಕಡಿತ ಸಂಬಂಧ ದಾಖಲೆಗಳ ಬಹಿರಂಗಕ್ಕೆ ಆಗ್ರಹ

ಮೈಸೂರು, ಜೂ.18(ವಿವಿಹೆಚ್)– ಕುಕ್ಕರಹಳ್ಳಿ ಕೆರೆ ಸಮೀಪದ ರೈಲ್ವೆ ಮಾರ್ಗದ ಆಜುಬಾಜಿನಲ್ಲಿದ್ದ ಮರಗಳ ಹನನಕ್ಕೆ ಸಂಬಂಧಿಸಿದಂತೆ ಎಲ್ಲಾ ಆದೇಶಗಳು, ತಾಂತ್ರಿಕ ವರದಿಗಳು, ಅನುಮೋದನೆಗಳು ಹಾಗೂ ಪರಿಸರ ಮೌಲ್ಯಮಾಪನ ದಾಖಲೆಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತೆ ಪರಿಸರಕ್ಕಾಗಿ ನಾವು ಸಂಘಟನೆ, ದಕ್ಷಿಣ ಪಶ್ಚಿಮ ರೈಲ್ವೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕುಕ್ಕರಹಳ್ಳಿ ಕೆರೆಯ ಪಕ್ಕದಲ್ಲಿರುವ ಲೆವೆಲ್ ಕ್ರಾಸಿಂಗ್ ಸಮೀಪ ಹಲವು ಪ್ರೌಢ ಹಾಗೂ ಆರೋಗ್ಯಕರ ಮರಗಳನ್ನು ಕಡಿದು ಹಾಕಿರುವುದು ಗಮನಕ್ಕೆ ಬಂದಿದ್ದು, ಈ ಕ್ರಮ ಪರಿಸರ ಪ್ರೇಮಿಗಳು ಹಾಗೂ ನಾಗರಿಕರಲ್ಲಿ ಆತಂಕ ಉಂಟುಮಾಡಿದೆ. ರೈಲ್ವೆ ಸುರಕ್ಷತೆ ಮತ್ತು ನಿರಂತರ ರೈಲು ಸಂಚಾರದ ಸುರಕ್ಷತಾ ಕಾರಣಗಳಿಂದ ಮರಗಳ ನಿರ್ವಹಣೆ ಅಗತ್ಯವಾದರೂ ಅದು ವೈಜ್ಞಾನಿಕ ಆಧಾರದ ಮೇಲೆ ಹಾಗೂ ಅಗತ್ಯವಿರುವ ಮಟ್ಟಿಗೆ ಮಾತ್ರ ನಡೆಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮರಗಳನ್ನು ಕಡಿತಗೊಳಿಸಲು ನೀಡಲಾದ ಆದೇಶಗಳು, ಪರಿಶೀಲನಾ ವರದಿಗಳು, ಅಪಾಯ ಮೌಲ್ಯಮಾಪನ ದಾಖಲೆಗಳು, ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳ ವಿವರಗಳು, ಮರಗಳನ್ನು ಸಂಪೂರ್ಣ ತೆರವುಗೊಳಿಸುವ ಬದಲು ಕೊಂಬೆ ಕತ್ತರಿಸುವ ಪರ್ಯಾಯ ಕ್ರಮಗಳನ್ನು ಪರಿಗಣಿಸಲಾಗಿದೆಯೇ ಎಂಬ ಮಾಹಿತಿ ಸೇರಿದಂತೆ ಹಲವು ದಾಖಲೆಗಳನ್ನು ಬಹಿರಂಗಪಡಿಸುವಂತೆ ಅವರು ಒತ್ತಾಯಿಸಿದ್ದಾರೆ.

ಇದಲ್ಲದೆ, ಅರಣ್ಯ ಇಲಾಖೆ ಅಥವಾ ಇತರೆ ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯಲಾದ ಅನುಮತಿಗಳ ವಿವರ, ಕಡಿದು ಹಾಕಲಾದ ಮರಗಳ ಸಂಖ್ಯೆ, ಜಾತಿವಾರು ಮಾಹಿತಿ, ಅವುಗಳ ಅಂದಾಜು ವಯಸ್ಸು ಹಾಗೂ ಸುತ್ತಳತೆ ಮತ್ತು ಪರಿಹಾರಾತ್ಮಕ ವೃಕ್ಷಾರೋಪಣಾ ಯೋಜನೆಗಳ ಮಾಹಿತಿಯನ್ನು ನೀಡುವಂತೆ ಮನವಿ ಮಾಡಿದ್ದಾರೆ.

ರೈಲ್ವೆ ಆಡಳಿತವು ಮರಗಳ ತೆರವು ಕಾರ್ಯವನ್ನು ಕೊನೆಯ ಆಯ್ಕೆಯಾಗಿ ಮಾತ್ರ ಪರಿಗಣಿಸಬೇಕು, ಸಾಧ್ಯವಾದಲ್ಲಿ ಕೊಂಬೆ ಕತ್ತರಿಸುವ ಕ್ರಮಕ್ಕೆ ಆದ್ಯತೆ ನೀಡಬೇಕು ಹಾಗೂ ವೃಕ್ಷ ನಿರ್ವಹಣಾ ಕಾರ್ಯಗಳನ್ನು ಪರಿಣಿತ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ನಡೆಸಬೇಕು ಎಂದು ಮನವಿಯಲ್ಲಿ ಸೂಚಿಸಲಾಗಿದೆ.

ಈ ವಿಷಯದ ಕುರಿತು ಸಮಗ್ರ ಪರಿಶೀಲನೆ ನಡೆಸುವವರೆಗೆ ದಾಖಲೆ ಬದ್ಧ ತುರ್ತು ಸುರಕ್ಷತಾ ಪರಿಸ್ಥಿತಿಗಳನ್ನು ಹೊರತುಪಡಿಸಿ ಆರೋಗ್ಯಕರ ಮರಗಳ ಮತ್ತಷ್ಟು ಕಡಿತವನ್ನು ತಡೆಯುವಂತೆ ಆಗ್ರಹಿಸಿದ್ದಾರೆ.

ಕುಕ್ಕರಹಳ್ಳಿ ಕೆರೆ ಸುತ್ತಮುತ್ತಲಿನ ಹಸಿರು ವಲಯವು ಮೈಸೂರಿನ ಪ್ರಮುಖ ಪರಿಸರ ಸಂಪತ್ತಾಗಿದ್ದು, ರೈಲ್ವೆ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಯನ್ನು ಸಮನ್ವಯಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪತ್ರದ ಮೂಲಕ ಒತ್ತಾಯಿಸಿದ್ದಾರೆ.

ಜೋಯಾಲುಕ್ಕಾಸ್‌ನಿಂದ ರಕ್ತದಾನ ಶಿಬಿರ



ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೋಯಾಲುಕ್ಕಾಸ್ ಗ್ರೂಪ್‌ನಿಂದ ದೇಶಾದ್ಯಂತ ರಕ್ತದಾನ ಶಿಬಿರ ಆಯೋಜಿಸಿತ್ತು.

ತ್ರಿಶೂರ್,ಜೂ.18–ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೋಯಾಲುಕ್ಕಾಸ್ ಗ್ರೂಪ್ ತನ್ನ ಶೋರೂಮ್‌ಗಳಲ್ಲಿ ದೇಶಾದ್ಯಂತ ಮಳಿಗೆಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿತ್ತು.

ಈ ರಾಷ್ಟ್ರವ್ಯಾಪಿ ರಕ್ತದಾನ ಅಭಿಯಾನವನ್ನು ಗ್ರೂಪ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ವಿಭಾಗವಾದ ಜೋಯಾಲುಕ್ಕಾಸ್ ಫೌಂಡೇಶನ್ ಹಮ್ಮಿಕೊಂಡಿತ್ತು. ಇದರಲ್ಲಿ ಉದ್ಯೋಗಿಗಳು ಸಹ ಭಾಗವಹಿಸಿದ್ದರು. ತ್ರಿಶೂರ್‌ನಲ್ಲಿರುವ ಜೋಯಾಲುಕ್ಕಾಸ್ ಕಾರ್ಪೊರೇಟ್ ಕಚೇರಿಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಜೋಯಾಲುಕ್ಕಾಸ್ ಗ್ರೂಪ್‌ನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕ ಜೋಯಾಆಲುಕ್ಕಾಸ್ ಉದ್ಘಾಟಿಸಿ ಮಾತನಾಡಿ, ರಕ್ತದಾನವು ಮಾನವೀಯ ಕಾರ್ಯಗಳಲ್ಲಿ ಅತ್ಯಂತ ಶ್ರೇಷ್ಠವಾದುದು; ಪ್ರಾಣವನ್ನು ಉಳಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು.

ಸ್ವಯಂಪ್ರೇರಿತ ರಕ್ತದಾನದ ಮೂಲಕ ಸಾವಿರಾರು ಜನರಿಗೆ ಪ್ರಯೋಜನ ನೀಡುವಲ್ಲಿ ಗ್ರೂಪ್ ದೇಶಾದ್ಯಂತ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಲು ಸಾಧ್ಯವಾದ ಬಗ್ಗೆ ಅವರು ಸಂತೋಷ ವ್ಯಕ್ತಪಡಿಸಿದರು. ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಬ್ಲಡ್ ಬ್ಯಾಂಕ್ ನಿರ್ದೇಶಕ ಡಾ.ಗೋಪಿನಾಥ್, ಐಎಂಎ ಜಿಲ್ಲಾ ಸಂಚಾಲಕರಾದ ಡಾ. ಜೋಸೆಫ್ ಜೋರ್ಜ್, ಜೋಯಾಲುಕ್ಕಾಸ್ ಗ್ರೂಪ್ ನಿರ್ದೇಶಕರಾದ ಜೋಲಿ ಜೋಯ್ ಆಲುಕ್ಕಾಸ್ ಮತ್ತು ಗ್ರೂಪ್‌ನ ಇತರ ಹಿರಿಯ ಅಧಿಕಾರಿಗಳು ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪರಮೇಶಿ ಪ್ರೇಮಪ್ರಸಂಗ ಹಾಸ್ಯ ನಾಟಕ ಪ್ರದರ್ಶನ



ಮೈಸೂರು, ಜೂ. 18– ಮೈಸೂರಿನ ರಂಗವಲ್ಲಿ ಸಂಸ್ಥೆ ವತಿಯಿಂದ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಜೂ.21ರಂದು ಸಂಜೆ 6.30ಕ್ಕೆ ಹೆಸರಾಂತ ರಂಗನಿರ್ದೇಶಕ ಶ್ರೀನಿವಾಸ ಪ್ರಭು ಅವರು ರಚಿಸಿರುವ ಸಂಪೂರ್ಣ ಹಾಸ್ಯಮಯ ನಾಟಕ 'ಪರಮೇಶಿ ಪ್ರೇಮ ಪ್ರಸಂಗ'ವನ್ನು ಪ್ರಸ್ತುತಪಡಿಸಲಿದೆ. ಈ ನಾಟಕವನ್ನು ರವಿಪ್ರಸಾದ್ ನಿರ್ದೇಶಿಸಿದ್ದಾರೆ.


ಪಾಲಹಳ್ಳಿ ಚಂದ್ರಶೇಖರ್ ನಿಧನ



ಮೈಸೂರು,ಜೂ.18–ಹಿರಿಯ ಜೆಡಿಎಸ್ ಮುಖಂಡರು ಹಾಗೂ ಹೆಸರಾಂತ ಸಮಾಜ ಸೇವಕರಾದ ಪಾಲಹಳ್ಳಿ ಚಂದ್ರಶೇಖರ್ (75) ಅವರು ಇಂದು ಮಧ್ಯಾಹ್ನ ಹೃದಯಾಘಾತದಿಂದ ಮಣಿಪಾಲ್‌ನಲ್ಲಿ ನಿಧನರಾದರು.

ಮೃತರು ತಾಯಿ ಗೌರಮ್ಮ, ಪತ್ನಿ ಶ್ರೀಮತಿ ಕುಸುಮಾ, ಪುತ್ರರಾದ ನವೀನ್, ನಂದನ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದ ಇವರು ರೆಬೆಲ್ ಸ್ಟಾರ್ ಅಂಬರೀಶ್ ಅವರ ಆಪ್ತರಾಗಿದ್ದರು. ಬಳಿಕ ಈಗ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದರು. ಇವರ ಪಾರ್ಥಿವ ಶರೀರವನ್ನು ಇಂದು ಸಂಜೆ ಮೈಸೂರಿನ ಗೋಕುಲಂನಲ್ಲಿರುವ ನಿವಾಸದಲ್ಲಿ ತಂದಿರಿಸಲಾಗಿದೆ. ನಾಳೆ (ಶುಕ್ರವಾರ) ಮಧ್ಯಾಹ್ನ 2 ಗಂಟೆವರೆಗೆ ಇಲ್ಲಿಯೇ ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತಿದ್ದು, ಬಳಿಕ ಅವರ ಸ್ವಗ್ರಾಮ ಪಾಲಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ನಾಗರಾಜ್ ಜಟ್ಟಪ್ಪ



ಮೈಸೂರು, ಜೂ.18– ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ಆರ್. ನಾಗರಾಜ್ ಜಟ್ಟಪ್ಪ(65) ಅವರು ಬುಧವಾರ(ಜೂ.17) ನಿಧನರಾದರು.

ಇವರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಸಹೋದರರು ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಅಬಕಾರಿ ಡಿಸಿ ಅಮಾನತಿಗೆ ಸರ್ಕಾರಕ್ಕೆ ಶಿಫಾರಸು

ಅಬಕಾರಿ ಆಯುಕ್ತ ವೆಂಕಟೇಶ್‌ಕುಮಾರ್ ಸ್ಪಷ್ಟನೆ

ಮೈಸೂರು, ಜೂ.18(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಅಗ್ನಿ ಅವಘಡದಲ್ಲಿ ಇಬ್ಬರು ಸಾವನ್ನಪ್ಪಿದ ಪ್ರಕರಣ ಸಂಬಂಧ ಮೈಸೂರು ಅಬಕಾರಿ ಜಿಲ್ಲಾಧಿಕಾರಿ ಅವರನ್ನು ಅಮಾನತು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ರಾಜ್ಯ ಅಬಕಾರಿ ಆಯುಕ್ತ ಆರ್.ವೆಂಕಟೇಶ್‌ಕುಮಾರ್ ತಿಳಿಸಿದರು.



ವೆಂಕಟೇಶ್‌ಕುಮಾರ್

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಸರ್ಕಾರದ ಸೂಚನೆ ಮೇರೆಗೆ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಕರ್ತವ್ಯ ಲೋಪ ಎಸಗಿರುವ ಉಪ ಅಧೀಕ್ಷಕ ಸೇರಿದಂತೆ ಐವರು ಅಧಿಕಾರಿಗಳನ್ನು ಈಗಾಗಲೇ ಅಮಾನತು ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಆದರೆ, ಅಬಕಾರಿ ಡಿಸಿ ಅವರನ್ನು ಅಮಾನತು ಮಾಡುವ ಅಧಿಕಾರ ಸರ್ಕಾರಕ್ಕೆ ಮಾತ್ರ ಇದೆ. ಈ ಹಿನ್ನೆಲೆಯಲ್ಲಿ ಅಬಕಾರಿ ಡಿಸಿಯನ್ನು ಅಮಾನತು ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ವೆಂಕಟೇಶ್‌ಕುಮಾರ್ ತಿಳಿಸಿದರು.

ಮೈಸೂರಿನಲ್ಲಿ ಅಂದು ಎಸ್.ಎಂ.ಕೃಷ್ಣ ಕೈಗೊಂಡ ಕಠಿಣ ಕ್ರಮ–ಒಂದು ನೆನಪು

ಮೈಸೂರಿಗೆ ಮೊನ್ನೆ ಭೇಟಿ ನೀಡಿದ್ದ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ, ಅಬಕಾರಿ ಜಿಲ್ಲಾಧಿಕಾರಿಯನ್ನು ಅಮಾನತು ಮಾಡಲಾಗುವುದು. ಈ ಸಂಬಂಧ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಕೂಡ ಸ್ಪಷ್ಟಪಡಿಸಿದ್ದರು.



ಆದರೆ, ಪ್ರಕರಣ ನಡೆದು ಮೂರು ದಿನವಾದರೂ ಅಬಕಾರಿ ಡಿಸಿ ವಿರುದ್ಧ ಯಾವುದೇ ಕ್ರಮ ಆಗಿಲ್ಲ. ಅಬಕಾರಿ ಡಿಸಿ ವಿರುದ್ಧ ಕ್ರಮ ಕೈಗೊಳ್ಳದಂತೆ ಸರ್ಕಾರದ ಮೇಲೆ ಪ್ರಭಾವ ವಿದೆಯೇ, ಪ್ರಭಾವಿಗಳು ಅವರ ರಕ್ಷಣೆಗೆ ನಿಂತಿದ್ದಾರೆಯೇ ಎಂಬ ಅನುಮಾನಗಳು ಕಾಡಿದೆ.

ಹಲವು ವರ್ಷಗಳ ಹಿಂದೆ ಮೈಸೂರು ನಗರದಲ್ಲಿ ಎಡಿಬಿ ಯೋಜನೆಯಡಿ ರಿಂಗ್ ರಸ್ತೆ ನಿರ್ಮಾಣ ಮಾಡಲಾಗುತ್ತಿತ್ತು. ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ರಿಂಗ್ ರಸ್ತೆ ಕಾಮಗಾರಿ ಪರಿಶೀಲನೆಗೆ ಬಂದ ವೇಳೆ ಅಂದಿನ ಮುಡಾ ಆಯುಕ್ತ ಅಶೋಕ್ ಕುಮಾರ್ ಸ್ಥಳದಲ್ಲೇ ಇರಲಿಲ್ಲ.

ತರುವಾಯ ಅಂದಿನ ಮುಡಾ ಅಧ್ಯಕ್ಷ ಸಂದೇಶ್ ನಾಗರಾಜ್ ಮೂಲಕ ಅಶೋಕ್‌ಕುಮಾರ್‌ಗೆ ಫೋನ್ ಮಾಡಿಸಿದರು. 'ಎಲ್ಲಿದ್ದೀರಾ' ಎಂದು ಎಸ್.ಎಂ.ಕೃಷ್ಣ ಅವರು ಕೇಳಿದ್ದಾಗ ನಾನು 'ಮನೆಯಲ್ಲಿದ್ದೇನೆ' ಎಂದು ಅಶೋಕ್‌ಕುಮಾರ್ ತಿಳಿಸಿದರು.

'ಹಾಗಾದರೆ ನೀವು ಮನೆಯಲ್ಲೇ ಇರಿ' ಎಂದು ಸಿಟ್ಟಿನಿಂದ ಹೇಳಿದ ಎಸ್.ಎಂ.ಕೃಷ್ಣ ಅವರು ಸ್ಥಳದಲ್ಲೇ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಫೋನ್ ಮಾಡಿ ಕೂಡಲೇ ಅಶೋಕ್ ಕುಮಾರ್ ಅವರನ್ನು ಅಮಾನತು ಮಾಡಿ. ನಾನು ಮೈಸೂರಿನಲ್ಲೇ ಇರುತ್ತೇನೆ. ಸಂಜೆ ವೇಳೆ ಅಮಾನತು ಆದೇಶ ಪ್ರಕಟಿಸಿ ಎಂದು ಸೂಚಿಸಿದರು.

ಎಸ್.ಎಂ.ಕೃಷ್ಣ ಅವರು ಮೈಸೂರಿನಲ್ಲಿ ಇರುವ ಸಂದರ್ಭದಲ್ಲಿ ಸಂಜೆ ವೇಳೆಗೆ ಅಶೋಕ್‌ಕುಮಾರ್ ಅಮಾನತು ಆದೇಶವನ್ನು ಸರ್ಕಾರ ಹೊರಡಿಸಿತ್ತು. ಹೀಗೆ ಹಿಂದಿನ ಸರ್ಕಾರಗಳಲ್ಲಿ ಅಧಿಕಾರಿಗಳ ಮೇಲೆ ಹಿಡಿತವಿತ್ತು. ಆದರೆ, ಇಂದು ವರ್ಗಾವಣೆ ದಂಧೆಯ ಕಾರಣ ಅಧಿಕಾರಿಗಳ ಮೇಲೆ ಲಂಗು–ಲಗಾಮು ಇಲ್ಲ. ಈ ಕಾರಣದಿಂದಲೇ ಅಧಿಕಾರಿಗಳು, ಸರ್ಕಾರವೇ ಆಗಲಿ, ಜನಪ್ರತಿನಿಧಿಗಳೇ ಆಗಲಿ 'ಡೋಂಟ್ ಕೇರ್' ಎನ್ನುತ್ತಾರೆ. ಸರ್ಕಾರ ಹಾಗೂ ಜನಪ್ರತಿನಿಧಿಗಳ ಪರಿಸ್ಥಿತಿಯೇ ಹೀಗಾದರೆ ಜನ ಸಾಮಾನ್ಯರ ಸ್ಥಿತಿ ಏನು ಎಂಬ ಸಹಜ ಪ್ರಶ್ನೆ ಕಾಡಿದೆ. ಈ ಕಾರಣದಿಂದಲೇ ಜನಸಾಮಾನ್ಯರ ಕೆಲಸ ಕಾರ್ಯಗಳು ವಿಳಂಬವಾಗುತ್ತಿದೆ.

ದಟ್ಟಗಳ್ಳಿ ರೆಸ್ಟೋಬಾರ್ ದುರಂತದ ಹಿನ್ನೆಲೆ

ಫೀಲ್ಡ್‌ಗಿಳಿದ ಅಬಕಾರಿ ಅಧಿಕಾರಿಗಳು; ಬಾರ್ ಅಂಡ್ ರೆಸ್ಟೋರೆಂಟ್, ಪಬ್‌ಗಳ ಪರಿಶೀಲನೆ

ಮೈಸೂರು, ಜೂ.18(ಎಸ್‌ಪಿಎನ್)– ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ 'ಮಾರಾ' ರೆಸ್ಟೋಬಾರ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಅಗ್ನಿ ಅವಘಡದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಅಬಕಾರಿ ಮತ್ತು ಸಿಬ್ಬಂದಿ ನಗರದ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಡಿಸಿ ನಾಗರಾಜ್ ನೇತೃತ್ವದಲ್ಲಿ ಇಲಾಖೆ ಡಿವೈಎಸ್‌ಪಿಗಳು, ಇನ್ಸ್‌ಪೆಕ್ಟರ್‌ಗಳು ಹಾಗೂ ಇತರೆ ಸಿಬ್ಬಂದಿ ಮೈಸೂರು ಅಬಕಾರಿ ರೇಂಜ್ 3ರ ವ್ಯಾಪ್ತಿಯ ಕೋಸ್ಟಲ್ ರಾಕ್ ಡಾಬಾ, ಬೈಪಾಸ್ ಡಾಬಾ, ಕೋರ್ಟ್ ಯಾರ್ಡ್ ಡಾಬಾ ಹಾಗೂ ಕೋಕೋ ಗ್ರೋವ್ ಡಾಬಾ ಸೇರಿದಂತೆ ಇತರೆ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿದರು. ಈ ವೇಳೆ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ರಹದಾರಿ(ಲೈಸನ್ಸ್) ಪಡೆದಿದ್ದಾರೆಯೇ? ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ, ಎಚ್ಚರಿಸಿದ್ದಾರೆ.



ಮೈಸೂರು ನಗರ ಹಾಗೂ ವಿವಿಧ ಠಾಣಾ ವ್ಯಾಪ್ತಿಯ ವಿವಿಧ ಬಾರ್ & ರೆಸ್ಟೋರೆಂಟ್‌ಗಳಿಗೆ ಅಬಕಾರಿ ಅಧಿಕಾರಿ, ನೌಕರರು ಭೇಟಿ ನೀಡಿ ಪರಿಶೀಲಿಸಿದರು.

ಎಲ್ಲಾ ಠಾಣಾ ವ್ಯಾಪ್ತಿಯಲ್ಲೂ ಪರಿಶೀಲನೆ: 'ಮಾರಾ' ರೆಸ್ಟೋಬಾರ್‌ನಲ್ಲಿ ಅಗ್ನಿ ಅವಘಡದ ಹಿನ್ನೆಲೆಯಲ್ಲಿ ಎಚ್ಚೆತ್ತಿರುವ ನಗರ ಪೊಲೀಸ್ ಇಲಾಖೆ, ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬಾರ್ ಅಂಡ್ ರೆಸ್ಟೋರೆಂಟ್, ಪಬ್ ಹಾಗೂ ಇತರೆ ಲಿಕ್ಕರ್ ಶಾಪ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದು, ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಬಂಧಪಟ್ಟ ಮಾಲೀಕರಿಗೆ ಸೂಚನೆ ನೀಡಿದ್ದಾರೆ. ಈ ನಡುವೆ ಠಾಣಾ ವ್ಯಾಪ್ತಿಯಲ್ಲಿ ಹೋಟೆಲ್ ಉದ್ಯಮಿಗಳ ಸಭೆ ನಡೆಸಿ, ಅಗ್ನಿ ಅವಘಡಗಳ ಕುರಿತು ಜಾಗೃತಿ ಮೂಡಿಸಿದ್ದಾರೆ.

ಮದ್ಯಪಾನ ಇತರೆ ವ್ಯಸನವುಳ್ಳ ಕೆಎಸ್‌ಆರ್‌ಪಿ ಸಿಬ್ಬಂದಿಗೆ ಮಾರ್ಗದರ್ಶನ ನಿರ್ಧಾರ

ಮೈಸೂರು,ಜೂ.18(ಎಸ್‌ಪಿಎನ್)–ಮದ್ಯಪಾನ ಅಥವಾ ಇತರೆ ವ್ಯಸನಗಳಿಗೆ ಒಳಗಾಗಿರುವ ಕೆಎಸ್‌ಆರ್‌ಪಿ ಸಿಬ್ಬಂದಿಗೆ ಅಗತ್ಯ ಸಲಹೆ, ಮಾರ್ಗದರ್ಶನ ಮತ್ತು ವ್ಯಸನಮುಕ್ತಿ ಚಿಕಿತ್ಸೆ ಒದಗಿಸುವಂತೆ ರಾಜ್ಯ ಮೀಸಲು ಪೊಲೀಸ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಸ್.ರವಿ ಆದೇಶಿಸಿದ್ದಾರೆ.

ರಾಜ್ಯದ ಕೆಎಸ್‌ಆರ್‌ಪಿ, ಐಆರ್‌ಬಿ ಪಡೆಗಳ ಕಮಾಂಡೆಂಟ್‌ಗಳು, ರಾಜ್ಯದ ಎಲ್ಲಾ ಕಮಾಂಡೆಂಟ್ ಪಡೆಯ ಸಿಬ್ಬಂದಿಗಳಲ್ಲಿ ಮದ್ಯಪಾನ ಅಥವಾ ಇತರೆ ವ್ಯಸನ ಸಮಸ್ಯೆ ಇರುವುದು ಕಂಡು ಬಂದಿದೆ. ಅಂತಹ ಸಿಬ್ಬಂದಿಗೆ ಅಗತ್ಯ ಸಮಾಲೋಚನೆ ಮತ್ತು ವೈದ್ಯಕೀಯ ನೆರವು ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಹಂತದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮದ್ಯಪಾನ ವ್ಯಸನಿಗಳಾಗಿರುವ ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರಲ್ಲಿ ವ್ಯಸನದ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಬೇಕು. ಇತ್ತೀಚೆಗೆ ಕೆಎಸ್‌ಆರ್‌ಪಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮದ್ಯಪಾನ ವ್ಯಸನಿ ಸಿಬ್ಬಂದಿ, ಅದರ ದುಷ್ಪರಿಣಾಮಗಳಿಂದ ಮೃತಪಟ್ಟಿರುವುದು ವಿಷಾದನೀಯ. ಹಾಗಾಗಿ ಇತರೆ ಸಿಬ್ಬಂದಿಗೆ ವ್ಯಸನಮುಕ್ತಿ ಚಿಕಿತ್ಸೆ ಹಾಗೂ ಸಮಾಲೋಚನೆ ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದಿದ್ದಾರೆ. ಈ ವಿಷಯ ಕುರಿತು ಹೆಚ್ಚಿನ ಸಹಾಯದ ಅಗತ್ಯವಿದ್ದಲ್ಲಿ ಜಿಲ್ಲಾ ಹಂತದ ಕಮಾಂಡೆಂಟ್‌ಗಳು, ಕೇಂದ್ರ ಕಚೇರಿಯನ್ನು ಸಂಪರ್ಕಿಸಬೇಕು. ಈ ಸಂಬಂಧ ಕೇಂದ್ರ ಕಚೇರಿಯಿಂದ ಅಗತ್ಯವಾದ ಎಲ್ಲಾ ಸಹಕಾರ ಒದಗಿಸಲಾಗುವುದು. ಹಾಗಾಗಿ ಎಲ್ಲಾ ಕಮಾಂಡೆಂಟ್‌ಗಳು ತಮ್ಮ ಪಡೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಯ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಮೈಸೂರು ಮಣಿಪಾಲ್ ಆಸ್ಪತ್ರೆಯಿಂದ ಲೂಪಸ್ ಬಗ್ಗೆ ಮಾಹಿತಿ ಕಾರ್ಯಕ್ರಮ

ಮೈಸೂರು,ಜೂ.18–ಲೂಪಸ್ ಎನ್ನುವುದು ವಿರಳವಾದ ಹಾಗೂ ಅತ್ಯಂತ ಗಂಭೀರವಾದ ಆಟೋಇಮ್ಯೂನ್ (ರೋಗನಿರೋಧಕ ಶಕ್ತಿಯ ವೈಫಲ್ಯ) ಕಾಯಿಲೆಯಾಗಿದ್ದು, ಆರಂಭಿಕ ಹಂತದಲ್ಲಿ ಇದನ್ನು ಪತ್ತೆಹಚ್ಚುವುದು ವೈದ್ಯಕೀಯ ಲೋಕಕ್ಕೇ ಒಂದು ಸವಾಲು. ರೋಗಿಗಳಲ್ಲಿ ಭಿನ್ನ ರೀತಿಯ ಲಕ್ಷಣಗಳು ಕಾಣಿಸಿಕೊಳ್ಳುವುದರಿಂದ ಇದು ಬೇಗನೆ ಗುರುತಿಗೆ ಸಿಗುವುದಿಲ್ಲ. ಸಕಾಲದಲ್ಲಿ ಚಿಕಿತ್ಸೆ ದೊರೆಯದಿದ್ದರೆ ಇದು ಕಿಡ್ನಿ, ಮೆದುಳು, ರಕ್ತನಾಳಗಳು ಹಾಗೂ ಗರ್ಭಧಾರಣೆಯ ಮೇಲೂ ಗಂಭೀರ ಪರಿಣಾಮ ಬೀರಬಲ್ಲದು. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮೈಸೂರು ಮಣಿಪಾಲ್ ಆಸ್ಪತ್ರೆಯು ವಿಶೇಷ 'ಲೂಪಸ್ ಕೇರ್ ಕಮ್ಯುನಿಟಿ ಮೀಟ್' ಆಯೋಜಿಸಿತ್ತು.



ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಬುಧವಾರ ವಿಶೇಷ 'ಲೂಪಸ್ ಕೇರ್ ಕಮ್ಯುನಿಟಿ ಮೀಟ್' ಆಯೋಜಿಸಲಾಗಿತ್ತು.

ಕಾರ್ಯಕ್ರಮದ ನೇತೃತ್ವವನ್ನು ಮೈಸೂರು ಮಣಿಪಾಲ್ ಆಸ್ಪತ್ರೆಯ ರೂಮಟಾಲಜಿ ವಿಭಾಗದ ಕನ್ಸಲ್ಟೆಂಟ್ ಡಾ.ಸಂಗೀತ ಕೆಎಸ್., ನ್ಯೂರಾಲಜಿ ವಿಭಾಗದ ಅಸೋಸಿಯೇಟ್ ಕನ್ಸಲ್ಟೆಂಟ್ ಡಾ.ಸುಚರಿತಾ ಎಂ.ವಿ. ಹಾಗೂ ಆಸ್ಪತ್ರೆ ನಿರ್ದೇಶಕ ಸಂದೀಪ್ ಪಟೇಲ್ ಬಿ.ಜೆ. ವಹಿಸಿದ್ದರು. ರೋಗಿಗಳು, ಅವರ ಆರೈಕೆದಾರರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ತಜ್ಞರು ನಿಜ ಜೀವನದ ಪ್ರಕರಣಗಳ ಉದಾಹರಣೆಗಳೊಂದಿಗೆ ಲೂಪಸ್ ಕಾಯಿಲೆಯ ಎಚ್ಚರಿಕಾ ಲಕ್ಷಣಗಳ ಬಗ್ಗೆ ಅರಿವು ಮೂಡಿಸಿದರು.

ಈ ವೇಳೆ ಮಾತನಾಡಿದ ಡಾ. ಸಂಗೀತ, ಲೂಪಸ್ ಕಾಯಿಲೆಯು ಕೀಲು, ಚರ್ಮ, ಮೂತ್ರಪಿಂಡ, ಮೆದುಳು, ಹೃದಯ ಮತ್ತು ಶ್ವಾಸಕೋಶ ಸೇರಿದಂತೆ ದೇಹದ ವಿವಿಧ ಅಂಗಗಳ ಮೇಲೆ ಪ್ರಭಾವ ಬೀರುತ್ತದೆ. ರೋಗಿಗಳಲ್ಲಿ ದೀರ್ಘಕಾಲದ ಜ್ವರ, ಕೆಮ್ಮು, ಉಸಿರಾಟದ ತೊಂದರೆ ಅಥವಾ ನರವೈಜ್ಞಾನಿಕ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇವು ಸಾಮಾನ್ಯ ಸೋಂಕು ಅಥವಾ ನಡವಳಿಕೆಯ ಬದಲಾವಣೆಯಂತೆ ಕಾಣುವುದರಿಂದ ರೋಗ ಪತ್ತೆ ವಿಳಂಬವಾಗುತ್ತದೆ. ಹೀಗಾಗಿ ಆರಂಭಿಕ ಹಂತದಲ್ಲಿಯೇ ರೋಗವನ್ನು ಗುರುತಿಸಿ, ವೈದ್ಯರ ಸಲಹೆಯಂತೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಪಡೆಯುವುದು ಅತ್ಯಗತ್ಯ. ಬೇಗನೆ ರೋಗ ಪತ್ತೆಯಾದರೆ ಅಂಗಗಳಿಗೆ ಆಗುವ ಶಾಶ್ವತ ಹಾನಿ ತಪ್ಪಿಸಬಹುದು ಎಂದರು.

ನ್ಯೂರಾಲಜಿ ತಜ್ಞೆ ಡಾ.ಸುಚರಿತಾ ಮಾತನಾಡಿ, ಲೂಪಸ್ ಕಾಯಿಲೆಯು ಮೆದುಳು ಮತ್ತು ನರಮಂಡಲದ ಮೇಲೆ ಬೀರುವ ಪರಿಣಾಮಗಳ ಕುರಿತು ಬೆಳಕು ಚೆಲ್ಲಿದರು. ಕೇವಲ ಮೂರ್ಛೆ ರೋಗದಂತಹ ಲಕ್ಷಣಗಳೊಂದಿಗೆ ಬಂದಿದ್ದ ಬಾಲಕಿಯೊಬ್ಬಳಲ್ಲಿ ನ್ಯೂರೋ ಸೈಕಿಯಾಟ್ರಿಕ್ ಲೂಪಸ್ ಪತ್ತೆಯಾದ ಬಗ್ಗೆ ಮಾಹಿತಿ ನೀಡಿದರು. ಜಾಗೃತಿ ಮತ್ತು ರೋಗಿಗಳಿಗೆ ಸತತ ನೆರವು ನೀಡುವ ಅಗತ್ಯತೆ ಬಗ್ಗೆ ಮಾತನಾಡಿದ ಸಂದೀಪ್ ಪಟೇಲ್, ಲೂಪಸ್ ಕಾಯಿಲೆಗೆ ಕೇವಲ ಸಮಯಕ್ಕೆ ಸರಿಯಾದ ಚಿಕಿತ್ಸೆ ಮತ್ತು ವೈದ್ಯಕೀಯ ಆರೈಕೆ ಮಾತ್ರವಲ್ಲದೆ, ಸಮಾಜದ ಬೆಂಬಲ ಮತ್ತು ನಿರಂತರ ಜಾಗೃತಿಯೂ ಅಗತ್ಯ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.06.2026 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್, ಕುತ್ತಿಗೆ ನೋವು ಹಾಗೂ ಬೆನ್ನು ನೋವಿಗೆ ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ. ಬೆಳಗ್ಗೆ 9.30ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್:** ವಿಜ್ಞಾನ–ತಂತ್ರಜ್ಞಾನ ಕನ್ನಡೋತ್ಸವ ಹಾಗೂ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಉಪಸ್ಥಿತರು: ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿರ್ದೇಶಕ ಡಾ.ಎಂ.ಎಸ್.ಗೋವಿಂದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಎಂ.ಪ್ರದೀಪ್‌ಕುಮಾರ್, ಕೇಂದ್ರ ಕಾರಾಗೃಹ ಮತ್ತು ಸುಧಾರಣೆ ಸೇವೆ ಸದಸ್ಯ ಜಾಕೀರ್ ಹುಸೇನ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎ.ಸಿ. ಮಂಜುನಾಥ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಡೈರಿ ವೆಂಕಟೇಶ್, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ, ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈತ್ರಿ ಚಾರಿಟಬಲ್ ಟ್ರಸ್ಟ್, ಮೈತ್ರಿ ವಿಶೇಷ ಮಕ್ಕಳ ಶಾಲೆ** : ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಶಾಲೆಯ ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ, ಯೋಗದ ಮಹತ್ವ ಕುರಿತು ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಖ್ಯ ಅತಿಥಿಗಳು : ಡಾ.ಪಿ.ಎನ್.ಗಣೇಶ್‌ಕುಮಾರ್, ಭಾಸ್ಕರ್, ಸ್ಥಳ: ವಿಜಯನಗರ ಪಾರ್ಕ್ (ಯೋಗನರಸಿಂಹ ದೇವಸ್ಥಾನದ ಎದುರು), ಬೆಳಗ್ಗೆ 11ಕ್ಕೆ.

■ **ಯೇಸುವಿನ ಪವಿತ್ರ ಹೃದಯ ದೇವಾಲಯ:** ದೇವಾಲಯದ ವಾರ್ಷಿಕೋತ್ಸವ, ಮೈಸೂರು ಧರ್ಮಪ್ರಾಂತ್ಯದ ಕುಲಪತಿ ಗುರು ಅಂತೋನಿರಾಜ್ ಜೆ. ಅವರಿಂದ ದಿವ್ಯ ಬಲಿಪೂಜೆ, ಸ್ಥಳ: ಯೇಸುವಿನ ಪವಿತ್ರ ಹೃದಯ ದೇವಾಲಯ, ಯಾದವಗಿರಿ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ: ಬಿ.ಕೆ.ಮೀನಾಕ್ಷಿ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಕಾಡುಕಲಿಸುವ ಪಾಠ', ಪ್ರಾಯೋಜಕರು Prabha Super Specialty Eye Clinic, Bengaluru & Vittala Institute of Ophthalmology, Bengaluru. ಪ್ರಸ್ತುತಿ–ಟಿ.ಎಸ್.ಗೋಪಾಲ್, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಕನ್ನಡ ಚಿತ್ರಗೀತೆಗಳು, 9.00 'ಯೋಗವಾಣಿ' ನಿತ್ಯಯೋಗ ಕುರಿತ ಬಾನುಲಿ ಸರಣಿ–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ 'ಜಲಯೋಗ' ಈ ಕುರಿತು ಶ್ರೀರಂಗಪಟ್ಟಣದ DMS ಚಂದ್ರವನ ಆಶ್ರಮದ ಡಾ. ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಎನ್.ಕೇಶವಮೂರ್ತಿ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಾತಂಗಿ ಸತ್ಯಮೂರ್ತಿ–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಕಾಮನ ಬಿಲ್ಲು' ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ 'ಕೆನ್ನಾಯಿಯ ಜಾಡಿನಲಿ' ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ, ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಹಾರಾಜಪುರಂ ಸಂತಾನಂ–ಹಾಡುಗಾರಿಕೆ, 4.00 ಮಹಿಳಾರಂಗ, ಸಖೀ ಸಂವಾದ–ಮಹಿಳಾ ಬರಹಗಾರರೊಂದಿಗೆ ಮಾತುಕತೆ, ಪ್ರಸ್ತುತಿ–ನೇತ್ರಾ 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಸಾವಯವ ಕೃಷಿಯ ಮಹತ್ವ ಹಾಗೂ ಸವಾಲುಗಳು ಈ ಕುರಿತು ಬೆಂಗಳೂರು ಕೃಷಿ ವಿವಿ ನಿವೃತ್ತ ವಿಸ್ತರಣಾ ನಿರ್ದೇಶಕ ಡಾ.ಎನ್.ದೇವಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ನಾರಾಯಣ ಅಯ್ಯಂಗಾರ್. ಗೋಟುವಾದ್ಯ ವಾದನ–ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿಗೆ ಉತ್ತಮ ಸ್ಪಂದನೆ

ಎರಡೂವರೆ ತಿಂಗಳಲ್ಲಿ 168 ಕೋಟಿ ಆಸ್ತಿ ತೆರಿಗೆ ದಾಖಲೆ ಸಂಗ್ರಹ

ಮೈಸೂರು,ಜೂ.18(ಎಂಟಿವೈ)– ಆಸ್ತಿ ತೆರಿಗೆ ಮೇಲೆ ಶೇ.5ರಷ್ಟು ರಿಯಾಯಿತಿ ಆಫರ್ ನೀಡಿದ್ದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಎರಡೂವರೆ ತಿಂಗಳಲ್ಲಿ ಬರೋಬ್ಬರಿ 168.84 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ.



ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೈಸೂರು ಮಹಾನಗರ ಪಾಲಿಕೆ 265 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದು, ಈಗಾಗಲೇ ಶೇ.64ರಷ್ಟು ಗುರಿ ಸಾಧನೆಯಾದಂತಾಗಿದೆ.

ಪ್ರತಿ ವರ್ಷದಂತೆ ರಾಜ್ಯ ಸರ್ಕಾರ ಏ.1ರಿಂದ 30ರವರೆಗೆ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ನೀಡಿತ್ತು. ಈ ಅವಧಿಯಲ್ಲಿ ಮಹಾನಗರ ಪಾಲಿಕೆ 113 ಕೋಟಿ ರೂ. ತೆರಿಗೆ ಸಂಗ್ರಹಿಸಿತ್ತು. ವಿವಿಧ ಸ್ಥಳೀಯ ಸಂಸ್ಥೆಗಳ ಮನವಿ ಮೇರೆಗೆ ಸರ್ಕಾರ ಈ ತೆರಿಗೆ ರಿಯಾಯಿತಿಯನ್ನು ಇನ್ನೊಂದು ತಿಂಗಳು ವಿಸ್ತರಿಸಿತ್ತು. ಹಾಗಾಗಿ ಮೇ ತಿಂಗಳಲ್ಲಿ 40 ಕೋಟಿ ರೂ. ಸಂಗ್ರಹವಾಗಿದೆ. ಒಟ್ಟಾರೆ ಏ.1ರಿಂದ ಜೂ.16ರವರೆಗೆ ಒಟ್ಟು 168.84 ರೂ. ಸಂಗ್ರಹವಾಗಿದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2,11,491 ಅಧಿಕೃತ ಖಾತೆದಾರರು ಹಾಗೂ 21,321 ಅನಧಿಕೃತ ಖಾತೆದಾರರು ಸೇರಿದಂತೆ 2,32,812 ಆಸ್ತಿ ತೆರಿಗೆದಾರರಿದ್ದಾರೆ. ಇವರಲ್ಲಿ 65,913 ಎ–ಖಾತೆದಾರರು, 6,173 ಬಿ–ಖಾತೆದಾರರು ಸೇರಿದಂತೆ ಒಟ್ಟು 72,086 ಖಾತೆದಾರರಿದ್ದಾರೆ. ಇವರಲ್ಲಿ ಶೇ.32.3ರಷ್ಟು ಮಂದಿ ಈಗಾಗಲೇ ತೆರಿಗೆ ಪಾವತಿಸಿದ್ದಾರೆ.

ದಾಖಲೆ ಪ್ರಮಾಣದ ತೆರಿಗೆ ಸಂಗ್ರಹ

"ಮೈಸೂರು ಮಹಾನಗರ ಪಾಲಿಕೆಯಲ್ಲಿ ಶೇ.5ರಷ್ಟು ತೆರಿಗೆ ರಿಯಾಯಿತಿ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಏ.1ರಿಂದ ಜೂ.16ರವರೆಗೆ ಆಸ್ತಿ ತೆರಿಗೆ 168.84 ಕೋಟಿ ರೂ. ಹಾಗೂ ನೀರು, ಒಳಚರಂಡಿ ಶುಲ್ಕ 17.1 ಕೋಟಿ ರೂ. ಸೇರಿದಂತೆ ಒಟ್ಟು 184.94 ಕೋಟಿ ರೂ. ಸಂಗ್ರಹವಾಗಿದೆ.

–ನಿತೇಶ್ ಪಾಟೀಲ್, ಪ್ರಾದೇಶಿಕ ಆಯುಕ್ತರು, ಮತ್ತು ಮಹಾನಗರ ಪಾಲಿಕೆ ಆಡಳಿತಾಧಿಕಾರಿ

ನೀರು, ಯುಜಿಡಿ ಶುಲ್ಕ 17 ಕೋಟಿ ಸಂಗ್ರಹ

ಆಸ್ತಿ ತೆರಿಗೆಯೊಂದಿಗೆ ಇದೇ ಅವಧಿಯಲ್ಲಿ ಮೈಸೂರು ನಗರ ಪಾಲಿಕೆ 17.1 ಕೋಟಿ ರೂ. ನೀರು ಮತ್ತು ಒಳಚರಂಡಿ ಶುಲ್ಕ ಸಂಗ್ರಹಿಸಿದೆ. 2021–22ರಲ್ಲಿ 61.26 ಕೋಟಿ ರೂ., 2022–23ರಲ್ಲಿ 78.2 ಕೋಟಿ, 2023–24ರಲ್ಲಿ 73.52 ಕೋಟಿ, 2024–25ರಲ್ಲಿ 75.51 ಕೋಟಿ ಹಾಗೂ 2025–26ರಲ್ಲಿ 82.88 ಕೋಟಿ ರೂ. ಸಂಗ್ರಹಿಸಿತ್ತು. ಪ್ರಸಕ್ತ ಸಾಲಿನಲ್ಲಿ ಈವರೆಗೆ 17.1 ಕೋಟಿ ರೂ. ನೀರು ಮತ್ತು ಯುಜಿಡಿ ಶುಲ್ಕ ಸಂಗ್ರಹವಾಗಿದೆ. ಒಟ್ಟಾರೆ ಪ್ರಸಕ್ತ ಆರ್ಥಿಕ ವರ್ಷದ ಆರಂಭಿಕ ಎರಡೂವರೆ ತಿಂಗಳಲ್ಲಿ ಆಸ್ತಿ ತೆರಿಗೆ ಹಾಗೂ ನೀರು–ಒಳಚರಂಡಿ ಶುಲ್ಕದಿಂದ ಪಾಲಿಕೆಗೆ ಒಟ್ಟು 184.94 ಕೋಟಿ ರೂ. ಕ್ರೋಢೀಕರಣವಾಗಿದೆ.

ಆಸ್ತಿಗೆ ತೆರಿಗೆ ಸಂಗ್ರಹ ವಿವರ: ಮೈಸೂರು ಮಹಾನಗರ ಪಾಲಿಕೆ 2020–21ರಲ್ಲಿ 120.16 ಕೋಟಿ ರೂ., 2021–22ರಲ್ಲಿ 162.43 ಕೋಟಿ, 2022–23ರಲ್ಲಿ 168.56 ಕೋಟಿ, 2023–24ರಲ್ಲಿ 183.93 ಕೋಟಿ, 2024–25ರಲ್ಲಿ 229.11 ಕೋಟಿ ಹಾಗೂ 2025–26ನೇ ಸಾಲಿನಲ್ಲಿ 241.40 ಕೋಟಿ ರೂ. ಆದಾಯ ಸಂಗ್ರಹಿಸಿತ್ತು. ಪ್ರಸಕ್ತ ವರ್ಷ 265 ಕೋಟಿ ರೂ. ಸಂಗ್ರಹದ ಗುರಿ ಹೊಂದಿರುವ ಪಾಲಿಕೆ ಎರಡೇ ತಿಂಗಳಲ್ಲಿ 168.84 ಕೋಟಿ ರೂ. ತೆರಿಗೆ ಸಂಗ್ರಹಿಸಿದ್ದು, ಇನ್ನುಳಿದ ತೆರಿಗೆದಾರರಿಂದಲೂ ದಂಡ ರಹಿತ ಮತ್ತು ದಂಡ ಸಹಿತವಾಗಿ ತೆರಿಗೆ ಸಂಗ್ರಹಿಸಲು ಪಾಲಿಕೆ ವಿವಿಧ ಕ್ರಮ ಕೈಗೊಂಡಿದೆ.

ಟಿಎಂಸಿಯ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿ; ಎಚ್‌ಡಿಎಫ್‌ಸಿಗೆ ಟಿಎಂಸಿ ಪತ್ರ

ಕೋಲ್ಕತ್ತಾ, ಜೂ.18– ಟಿಎಂಸಿಯ ಬಂಡಾಯ ನಾಯಕರು ಹಣ ಲೂಟಿ ಮಾಡಬಹುದು. ಹಾಗಾಗಿ ಪಕ್ಷದ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡುವಂತೆ ಎಚ್‌ಡಿಎಫ್‌ಸಿಗೆ ತೃಣಮೂಲ ಕಾಂಗ್ರೆಸ್ ಪತ್ರ ಬರೆದಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಕಳಪೆ ಪ್ರದರ್ಶನ ನೀಡಿದ ಬೆನ್ನಲ್ಲೇ ತೃಣಮೂಲ ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಬಿಕ್ಕಟ್ಟು ಮತ್ತು ಬಂಡಾಯ ಬಾವುಟ ಎದ್ದಿದೆ.

ಇದರ ನಡುವೆ ಬಂಡಾಯಗಾರರು ಪಕ್ಷದ ಬಹುಕೋಟಿ ನಿಧಿಯನ್ನು ಲೂಟಿ ಮಾಡಬಹುದು ಅಥವಾ ಬೇರೆಡೆಗೆ ವರ್ಗಾಯಿಸಬಹುದು ಎಂಬ ಭೀತಿಯಿಂದ ಪಕ್ಷದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಕೋಲ್ಕತ್ತಾದ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಟಿಎಂಸಿ ನಾಯಕರು ಪತ್ರ ಬರೆದಿದ್ದಾರೆ.

ಪಕ್ಷದೊಳಗಿನ ಅಧಿಕಾರ ಮತ್ತು ನಾಯಕತ್ವದ ವಿವಾದ ಸಂಪೂರ್ಣವಾಗಿ ಬಗೆಹರಿಯುವವರೆಗೆ ಬ್ಯಾಂಕ್ ಖಾತೆಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಮನವಿ ಮಾಡಲಾಗಿದೆ. ಯಾವುದೇ ರೀತಿಯ ಹಣ ವರ್ಗಾವಣೆ, ಡೆಬಿಟ್ ವಹಿವಾಟುಗಳು ಅಥವಾ ಖಾತೆಯ ಕಾರ್ಯಾಚರಣೆಯ ಆದೇಶಗಳಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶ ನೀಡಬಾರದು ಎಂದು ಬ್ಯಾಂಕ್ ಅನ್ನು ಒತ್ತಾಯಿಸಲಾಗಿದೆ.

ಕಾಲೇಜು ಆವರಣದಲ್ಲಿ ಪ್ರಜ್ಞೆತಪ್ಪಿ ಬಿದ್ದ ವಿದ್ಯಾರ್ಥಿ ಸಾವು

ಮೈಸೂರು, ಜೂ.18(ಪಿಎಂ)– ಕಾಲೇಜು ಆವರಣದಲ್ಲಿ ಪ್ರಜ್ಞಾಹೀನನಾಗಿ ಕುಸಿದು ಬಿದ್ದು ದ್ವಿತೀಯ ಪಿಯುಸಿ ವಿದ್ಯಾರ್ಥಿಯೊಬ್ಬ ಸಾವನ್ನಪ್ಪಿರುವ ಘಟನೆ ಗುರುವಾರ ನಡೆದಿದೆ.



ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಯರಗನಹಳ್ಳಿ ನಿವಾಸಿ ಕಾಂತಾರಾಜು ಎಂಬುವರ ಪುತ್ರ ವೈ.ಕೆ.ಮಾದೇಶ್ (17) ಮೃತ ವಿದ್ಯಾರ್ಥಿ. ಹೃದ್ರೋಗ ಸಮಸ್ಯೆಯಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಈತನು ಮೃತಪಟ್ಟಿದ್ದಾನೆ ಎಂದು ಹೇಳಲಾಗಿದೆ.

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಮಂಗಳವಾರ ಒಂದೇ ದಿನದಲ್ಲಿ 11 ಮಂದಿ ಸಾವನ್ನಪ್ಪಿದ್ದಾರೆ ಎಂಬ ಸುದ್ದಿ ಹೆಚ್ಚು ಸದ್ದು ಮಾಡಿ ಆತಂಕ ಮೂಡಿಸಿತ್ತು. ಈ ನಡುವೆ ಚಿಕ್ಕ ವಯಸ್ಸಿನ ಹುಡುಗನೊಬ್ಬ ಹೃದ್ರೋಗ ಸಮಸ್ಯೆಯಿಂದ ಸಾವನ್ನಪ್ಪಿದ್ದಾನೆ ಎಂಬ ವಿಚಾರ ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ವಿದ್ಯಾರ್ಥಿ ಸಾವು ಸಂಬಂಧ ಮಾಹಿತಿ ನೀಡಿದ ದೇವರಾಜ ಪೊಲೀಸರು, ಮೈಸೂರಿನ ಖಾಸಗಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದ ಈತನು, ಗುರುವಾರ ಮಧ್ಯಾಹ್ನ ಕಾಲೇಜು ಆವರಣದಲ್ಲಿ ಇದ್ದಕ್ಕಿದ್ದಂತೆ ಪ್ರಜ್ಞೆತಪ್ಪಿ ಕುಸಿದು ಬಿದ್ದಿದ್ದಾನೆ. ಕೂಡಲೇ ಸಹಪಾಠಿಗಳು ಹಾಗೂ ಕಾಲೇಜು ಉಪನ್ಯಾಸಕರು ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಆತನ ತಪಾಸಣೆ ನಡೆಸಿದ ವೈದ್ಯರು ಅದಾಗಲೇ ಮೃತಪಟ್ಟಿರುವುದನ್ನು ದೃಢಪಡಿಸಿದ್ದಾರೆ ಎಂದು ತಿಳಿಸಿದರು.

ಮಾದೇಶ್‌ಗೆ ಚಿಕ್ಕ ವಯಸ್ಸಿನಲ್ಲಿ ಹೃದಯದಲ್ಲಿ ರಂಧ್ರ ಇದ್ದ ಹಿನ್ನೆಲೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಈ ಸಂಬಂಧ ಎಲ್ಲಾ ವೈದ್ಯಕೀಯ ದಾಖಲಾತಿ ಇರುವುದಾಗಿ ಪೋಷಕರು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಹೃದ್ರೋಗದಿಂದ ಸಾವು ಸಂಭವಿಸಿರುವುದನ್ನು ವೈದ್ಯರು ತಿಳಿಸಿದ್ದಾರೆ. ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆಗೆ ಕ್ರಮ ವಹಿಸಿ ಕುಟುಂಬಸ್ಥರಿಗೆ ಮೃತದೇಹ ಒಪ್ಪಿಸಲಾಗಿದೆ. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ದೇವರಾಜ ಠಾಣಾ ಪೊಲೀಸರು ತಿಳಿಸಿದರು.

ಮಗನ ಸಾವಿನ ವಿಚಾರ ತಿಳಿದು ಆಸ್ಪತ್ರೆಗೆ ಆಗಮಿಸಿದ ಪೋಷಕರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಮಾದೇಶ್ ಸಾವಿಗೆ ಆತನ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಸಿಬ್ಬಂದಿ ಕಂಬನಿ ಮಿಡಿದರು.

ಮಮತಾಗೆ ಬಿಗ್ ಶಾಕ್: ಭದ್ರತಾ ಸಿಬ್ಬಂದಿ ಹಿಂಪಡೆದ ಸುವೇಂದು ಸರ್ಕಾರ

ಕೋಲ್ಕತ್ತಾ, ಜೂ.18– ಪಶ್ಚಿಮ ಬಂಗಾಳ ಸರ್ಕಾರ, ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಮತ್ತೊಂದು ಶಾಕ್ ನೀಡಿದ್ದು, ಅವರಿಗೆ ನಿಯೋಜಿಸಲಾಗಿದ್ದ ಭದ್ರತಾ ಸಿಬ್ಬಂದಿಯನ್ನು ತೆಗೆದುಹಾಕಲಾಗಿದೆ ಎಂದು ತೃಣಮೂಲ ಕಾಂಗ್ರೆಸ್(ಟಿಎಂಸಿ) ಗುರುವಾರ ಆರೋಪಿಸಿದೆ. ಅಲ್ಲದೆ ಬಿಜೆಪಿ ಸರ್ಕಾರದ ಈ ಕ್ರಮವು ರಾಜಕೀಯ ಪ್ರೇರಿತವಾಗಿದೆ ಮತ್ತು ಅವರ ಸುರಕ್ಷತೆಗೆ ಅಪಾಯವನ್ನುಂಟು ಮಾಡಿದೆ ಎಂದು ಕಿಡಿಕಾರಿದೆ.

ಸುಮಾರು ಎರಡು ದಶಕಗಳಿಂದ ಮಮತಾ ಬ್ಯಾನರ್ಜಿ ಅವರಿಗೆ ಒದಗಿಸಲಾಗಿದ್ದ ಅವರ ವೈಯಕ್ತಿಕ ಭದ್ರತಾ ಅಧಿಕಾರಿಗಳನ್ನು (ಪಿಎಸ್‌ಒಗಳು) ಬುಧವಾರ ರಾತ್ರಿ ಅವರ ಕೋಲ್ಕತ್ತಾ ನಿವಾಸದಲ್ಲಿದ್ದಾಗ ತೆಗೆದುಹಾಕಲಾಗಿದೆ ಎಂದು ಟಿಎಂಸಿ ರಾಜ್ಯಸಭಾ ಸಂಸದ ಡೆರೆಕ್ ಓ'ಬ್ರೇನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೋ ಹಂಚಿಕೊಂಡ ನಂತರ ವಿವಾದ ಭುಗಿಲೆದ್ದಿದೆ.



ವಿಡಿಯೋವನ್ನು ಪೋಸ್ಟ್ ಮಾಡಿದ ಓ'ಬ್ರೇನ್, ಅನಧಿಕೃತ ಪ್ರವೇಶವನ್ನು ತಡೆಯಲು ನನ್ನ ಕಾರನ್ನು ನಿಲ್ಲಿಸಿದ್ದೇನೆ. ಆದರೆ ಅಲ್ಲಿ ಯಾವುದೇ ಭದ್ರತೆ ಇಲ್ಲ ಎಂದು ಬರೆದಿದ್ದಾರೆ. ಇದು ಸೇಡಿನ ರಾಜಕೀಯ ಎಂದು ಟಿಎಂಸಿ, ಆಡಳಿತರೂಢ ಬಿಜೆಪಿಯ ವಿರುದ್ಧ ತೀಕ್ಷ್ಣವಾಗಿ ವಾಗ್ದಾಳಿ ನಡೆಸಿದೆ.

ನಿಮ್ಮ [ಮುಖ್ಯಮಂತ್ರಿ ಸುವೇಂದು ಅಧಿಕಾರಿ] ಅಭದ್ರತೆ–ಚಾಲಿತ ಅಧಿಕಾರ ದುರುಪಯೋಗವು ನೀವು ಯಾರೆಂದು ನಿಖರವಾಗಿ ಬಹಿರಂಗಪಡಿಸುತ್ತದೆ. ಕ್ಷುಲ್ಲಕ ರಾಜಕೀಯಕ್ಕೆ ಒಂದು ಮುಖವಿದ್ದರೆ, ಅದು ನಿಸ್ಸಂದೇಹವಾಗಿಯೂ ನಿಮ್ಮಂತೆ ಕಾಣುತ್ತದೆ ಎಂದು ಟೀಕಿಸಿದ್ದಾರೆ.

ನಾವು ಒಂದು ಬಕೆಟ್ ನೀರು ಬಳಸಲ್ಲ: ಮೇಕೆದಾಟು ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡು ರೈತರಿಗೆ ಪ್ರಯೋಜನಕಾರಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥನೆ

ಬೆಂಗಳೂರು, ಜೂ.18– ಪ್ರಸ್ತಾವಿತ ಮೇಕೆದಾಟು ಅಣೆಕಟ್ಟು ಯೋಜನೆಯನ್ನು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮತ್ತೆ ಸಮರ್ಥಿಸಿಕೊಂಡಿದ್ದು, ಇದು ಕರ್ನಾಟಕಕ್ಕಿಂತ ತಮಿಳುನಾಡಿಗೆ ಹೆಚ್ಚು ಪ್ರಯೋಜನವನ್ನು ನೀಡುತ್ತದೆ. ಸುಪ್ರೀಂ ಕೋರ್ಟ್ ಆದೇಶದಂತೆ ನೆರೆಯ ರಾಜ್ಯಕ್ಕೆ 177 ಟಿಎಂಸಿ ಕಾವೇರಿ ನೀರನ್ನು ಬಿಡುಗಡೆ ಮಾಡಲು ರಾಜ್ಯವು ಬದ್ಧವಾಗಿದೆ ಎಂದು ಪುನರುಚ್ಚರಿಸಿದರು.



ಕಾವೇರಿ ನದಿಗೆ ಮೇಕೆದಾಟು ಅಣೆಕಟ್ಟು ನಿರ್ಮಿಸುವ ಕರ್ನಾಟಕದ ಪ್ರಯತ್ನವನ್ನು ತಡೆಯುವ ಸಲುವಾಗಿ ತಮಿಳುನಾಡು ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರು ರಾಜ್ಯ ವಿಧಾನಸಭೆಯಲ್ಲಿ ಮಾಡಿದ ಭಾಷಣಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ಮೇಕೆದಾಟು ಯೋಜನೆ ದಕ್ಷಿಣ ಭಾರತದ ಹೃದಯದಂತ ಯೋಜನೆ. ಈ ಯೋಜನೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಹಿತ ಅಡಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ತಮಿಳುನಾಡು ಸರ್ಕಾರ ನಿಮ್ಮ ಹೃದಯಕ್ಕೆ ಹತ್ತಿರವಾದ ಮೇಕೆದಾಟು ಯೋಜನೆ ತಡೆಯಲು ಕಾನೂನು ಅವಕಾಶ ಹುಡುಕುತ್ತಿದೆ ಎಂದು ಕೇಳಿದಾಗ, ಮೇಕೆದಾಟು ಕೇವಲ ನನ್ನ ಹೃದಯಕ್ಕೆ ಮಾತ್ರ ಹತ್ತಿರವಾಗಿಲ್ಲ. ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ನೀಡಲಿದೆ. ತಮಿಳುನಾಡು ಪಾಲಿನ 177 ಟಿಎಂಸಿ ನೀರನ್ನು ಬಿಡಲು ನಾವು ಸಿದ್ಧವಾಗಿದ್ದೇವೆ. ಈ ಬಗ್ಗೆ ಸುಪ್ರೀಂಕೋರ್ಟ್ ಆದೇಶವೂ ಇದೆ. ಈ ಯೋಜನೆ ತೀರ್ಮಾನವನ್ನು ಕೇಂದ್ರ ಜಲ ಆಯೋಗ ಮಾಡಬೇಕು ಎಂದು ಕೋರ್ಟ್ ತಿಳಿಸಿದೆ ಎಂದು ತಿಳಿಸಿದರು.

ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ: ನಾವು ತಮಿಳುನಾಡಿನ ರೈತರ ಹಿತವನ್ನೂ ಕಾಪಾಡಬೇಕು. ಇದು ಸಮತೋಲಿತ ಜಲಾನಯನ. ಇಲ್ಲಿ ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ. ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗೆ ಮಾತ್ರ ಬಳಸಲಾಗುವುದು. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಾವು ಕೃಷ್ಣಾದಿಂದ ನೀರನ್ನು ತರಲು ಸಾಧ್ಯವಿಲ್ಲ. ಹೀಗಾಗಿ ಕಾವೇರಿ ನಮ್ಮ ಮುಂದಿರುವ ಏಕೈಕ ಆಯ್ಕೆ ಎಂದು ತಿಳಿಸಿದರು.

ಮೇಕೆದಾಟು ಯೋಜನೆ ರದ್ದುಗೊಳಿಸಲು ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿರುವ ಬಗ್ಗೆ ಕೇಳಿದಾಗ, ತಮಿಳುನಾಡಿನವರು ಕಳೆದ 40 ವರ್ಷಗಳಿಂದ ರಾಜಕೀಯ ಅಜೆಂಡಾ ಇಟ್ಟುಕೊಂಡಿದ್ದಾರೆ. ಅವರ ರಾಜಕೀಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಈ ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಕಳೆದ ವರ್ಷ 400ಕ್ಕೂ ಹೆಚ್ಚು ಟಿಎಂಸಿ ಹೆಚ್ಚುವರಿ ನೀರು ಸಮುದ್ರ ಸೇರಿದೆ. ಅವರು ಕೆಳ ಹಂತದಲ್ಲಿ ಸಾಕಷ್ಟು ಅಣೆಕಟ್ಟು ನಿರ್ಮಾಣ ಮಾಡುತ್ತಿದ್ದು, ನಾವು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಅವರ ನೆಲದಲ್ಲಿ ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ. ಇದೇ ವಿಚಾರ ಸುಪ್ರೀಂಕೋರ್ಟ್‌ನಲ್ಲೂ ಚರ್ಚೆಯಾಗಿದೆ. ಈ ಯೋಜನೆಗೆ ನಾವು ಯಾವುದೇ ಆರ್ಥಿಕ ನೆರವಾಗಲಿ ಇತರೆ ವಿಚಾರವನ್ನು ಕೇಳುತ್ತಿಲ್ಲ. ಈ ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು ಇಂಧನ ಕ್ಷೇತ್ರದಲ್ಲಿ ನಮಗೆ ಅನುಕೂಲ ಮಾಡಿಕೊಡಲಿದೆ" ಎಂದರು.

ಯಾವಾಗ ಬೇಕಾದರೂ ಚರ್ಚೆಗೆ ಸಿದ್ಧ: ಈ ವಿಚಾರವಾಗಿ ತಮಿಳುನಾಡು ಜೊತೆ ಚರ್ಚೆ ಮಾಡುತ್ತೀರಾ ಎಂದು ಕೇಳಿದಾಗ, ಯಾವಾಗ ಬೇಕಾದರೂ ಅವರ ಜೊತೆ ಮಾತನಾಡಲು ಸಿದ್ಧನಿದ್ದೇನೆ, ತಮಿಳುನಾಡು, ಕರ್ನಾಟಕದವರು ಭಾರತೀಯರು. ನಾವು ಕಾವೇರಿ ನೀರು ಕುಡಿಯಬೇಕು. ತಮಿಳುನಾಡಿನಿಂದ ಇಲ್ಲಿಗೆ ಬಂದು ವೃತ್ತಿ ಮಾಡುತ್ತಿರುವ ಅನೇಕ ಜನರಿದ್ದಾರೆ. ಇಲ್ಲಿಂದ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವವರೂ ಇದ್ದಾರೆ. ನಾವು ಅವರನ್ನು ಪ್ರತ್ಯೇಕಿಸುವುದಿಲ್ಲ. ಸಮತೋಲಿತ ಜಲಾನಯನ ನಿರ್ಮಾಣದಿಂದ ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರನ್ನು ಹರಿಸಲು ನೆರವಾಗುತ್ತದೆ. ಅತಿ ಕಡಿಮೆ ವೆಚ್ಚದಲ್ಲಿ ಯೋಜನೆ ಆಗುವ ವಿಶ್ವಾಸವಿದೆ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ಎಲ್ಲೀದ್ದೀರಿ...?
ಗಂಡ : ಆಫೀಸ್‌ನಲ್ಲಿ ಯಾಕೆ?
ಹೆಂಡ್ತಿ : ಏನಿಲ್ಲ ಮನೆ ಕೆಲಸದವಳು ಓಡಿ ಹೋಗಿದ್ದಾಳಂತೆ... ಅದಕ್ಕೇ ಕೇಳ್ದೆ...!

ಮೈಸೂರು ಮಿತ್ರ

ಶುಕ್ರವಾರ, ಜೂನ್ 19, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದೇವರು ಯಾರನ್ನು ಹರಸಬೇಕೆಂದು ತೀರ್ಮಾನಿಸುತ್ತಾನೋ ಅವರನ್ನು ಅತ್ಯಂತ ಕಠಿಣ ಪರೀಕ್ಷೆಗಳಿಗೆ ಒಳಪಡಿಸುತ್ತಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಧೈರ್ಯವಿದ್ದವನಿಗೆ ದೈವವೂ ಅನುಕೂಲ.

ನಿಮ್ಮ ಪತ್ರಗಳು

ಮೈಸೂರು-ಸರಗೂರು ಮಾರ್ಗದಲ್ಲಿ ಹೆಚ್ಚುವರಿ ಬಸ್ಸುಗಳ ಸಂಚಾರ ಸೇವೆ ಕಲ್ಪಿಸಿ

ಮಾನ್ಯರೆ,

ಮೈಸೂರು-ಸರಗೂರು ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರೂ, ಅದಕ್ಕೆ ಅನುಗುಣವಾಗಿ ಬಸ್ ಸೇವೆಗಳು ಲಭ್ಯವಿಲ್ಲದ ಕಾರಣ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಮಾರ್ಗದಲ್ಲಿ ಸಂಚರಿಸುವ ಸರ್ಕಾರಿ ಹಾಗೂ ಖಾಸಗಿ ನೌಕರರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಮಹಿಳಾ ಉದ್ಯೋಗಿಗಳು ಸೇರಿದಂತೆ ನೂರಾರು ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಅವಲಂಬಿಸಿದ್ದು, ಸಮರ್ಪಕ ಸಾರಿಗೆ ಸೌಲಭ್ಯ ಇಲ್ಲದಿರುವುದರಿಂದ ಪ್ರಯಾಣಿಕರ ಪಾಡು ಹೇಳತೀರದಾಗಿದೆ.

ಈ ಹಿಂದೆ ಮೈಸೂರು-ಸರಗೂರು ನಡುವೆ ಸಂಚರಿಸುತ್ತಿದ್ದ ನಾನ್‌ಸ್ಟಾಪ್ ಬಸ್ ಸೇವೆಯನ್ನು ಸ್ಥಗಿತಗೊಳಿಸಿರುವುದು ಪ್ರಯಾಣಿಕರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ. ಪ್ರಸ್ತುತ ಬೆಳಗಿನ ಜಾವ 5 ಗಂಟೆಗೆ ಒಂದು ಬಸ್ ಮಾತ್ರ ಲಭ್ಯವಿದ್ದು, ಅದರ ನಂತರ ಬೆಳಗ್ಗೆ 7 ಗಂಟೆಯ ಬಳಿಕವೇ ಬಸ್ ಸಂಚರಿಸುತ್ತದೆ. ಈ ಬಸ್ ಶಟಲ್ ಸೇವೆಯಾಗಿರುವುದರಿಂದ ಅಲ್ಲಲ್ಲಿ ನಿಲ್ಲುತ್ತಾ ಸಾಗುತ್ತದೆ. ಪರಿಣಾಮವಾಗಿ ಪ್ರಯಾಣಿಕರು ತಮ್ಮ ಗಮ್ಯಸ್ಥಾನವನ್ನು ತಲುಪುವಷ್ಟರಲ್ಲಿ ಕಚೇರಿ ಹಾಗೂ ಶಿಕ್ಷಣ ಸಂಸ್ಥೆಗಳ ಸಮಯ ಮೀರಿರುವ ಘಟನೆಗಳು ಸಾಮಾನ್ಯವಾಗಿವೆ.

ಪ್ರತಿದಿನ ಬೆಳಗಿನ ಜಾವದಿಂದಲೇ ನೂರಾರು ಪ್ರಯಾಣಿಕರು ಬಸ್ ನಿಲ್ದಾಣದಲ್ಲಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಹಿಳಾ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಬಸ್‌ಗಳ ಕೊರತೆಯಿಂದ ಕೆಲವೊಮ್ಮೆ ಪ್ರಯಾಣಿಕರು ನಿಂತುಕೊಂಡೇ ಪ್ರಯಾಣಿಸಬೇಕಾದ ಅನಿವಾರ್ಯತೆ ಎದುರಾಗುತ್ತಿದೆ. ಆದ್ದರಿಂದ ಮೈಸೂರು-ಸರಗೂರು ಮಾರ್ಗದಲ್ಲಿ ಈ ಹಿಂದೆ ಇದ್ದ ನಾನ್‌ಸ್ಟಾಪ್ ಬಸ್ ಸೇವೆಯನ್ನು ತಕ್ಷಣ ಪುನರಾರಂಭಿಸುವುದರ ಜೊತೆಗೆ ಬೆಳಗ್ಗೆ ಮತ್ತು ಸಂಜೆ ವೇಳೆಯಲ್ಲಿ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಬೇಕು. ಪ್ರಯಾಣಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಲ್ಲಿ ಮನವಿ.

-ಗೋವಿತ್ ಕಿರಣ್, ಪ್ರಯಾಣಿಕ, ಮೈಸೂರು

'ಗೃಹಲಕ್ಷ್ಮಿ' ಹಣ ದುರುಪಯೋಗ; ಇದು ಸರ್ಕಾರದ ವೈಫಲ್ಯವಲ್ಲವೇ?

ಮಾನ್ಯರೆ,

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಗೃಹಲಕ್ಷ್ಮಿ' ಯೋಜನೆಯನ್ನು ಕೆಲವರು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ರಾಜ್ಯ ಸರ್ಕಾರ ಈಗ ಹೇಳುತ್ತಿದೆ. ಈ ಯೋಜನೆಯ ಅಡಿಯಲ್ಲಿ ಸತ್ತವರ ಹೆಸರಿನಲ್ಲಿ, ಮನೆ ಯಜಮಾನಿ ಸೇರಿದಂತೆ ಸೊಸೆ ಅಥವಾ ಅವರ ಹೆಣ್ಣು ಮಕ್ಕಳು ಗೃಹಲಕ್ಷ್ಮಿಯ ಹಣ ಪಡೆಯುತಿದ್ದರು ಎಂದು ಹೇಳಲಾಗುತ್ತಿದೆ. ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕುಟುಂಬದಲ್ಲಿ ಸತ್ತವರು ಯಾರು ಎಂಬುದು ಗ್ರಾಮ ಪಂಚಾಯಿತಿಯ ಅಧಿಕಾರಿಗಳಿಗೆ ತಿಳಿದಿರುತ್ತದೆ. ಏಕೆಂದರೆ ಡೆತ್ ಸರ್ಟಿಫಿಕೇಟ್ ಅನ್ನು ಇವರೇ ನೀಡಿರುತ್ತಾರೆ.

ಆ ಸಂದರ್ಭದಲ್ಲಿ ಇವರ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯನ್ನು ರದ್ದು ಮಾಡಿ ಎಂದು ಅವರ ಕುಟುಂಸ್ಥರಿಗೆ ಸಲಹೆ ನೀಡಬೇಕಲ್ಲವೇ ? ಇನ್ನು ಯಾರ ಕುಟುಂಬದಲ್ಲಿ ಯಜಮಾನಿ ಯಾರು? ಅವರಿಗೆ ಸೊಸೆಯಂದಿರು ಮತ್ತು ಎಷ್ಟು ಹೆಣ್ಣು ಮಕ್ಕಳು ಇದ್ದಾರೆ. ಇವರಲ್ಲಿ ಯಾರು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ ಎಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧಿಕಾರಿಗಳೇ ಸುಲಭವಾಗಿ ಗುರುತಿಸಬಹುದು. ಕಳೆದ ಮೂರು ವರ್ಷಗಳಿಂದ ಸುಮ್ಮನಿದ್ದ ಸರ್ಕಾರ ಈಗ ಹೊಸ ಮಾರ್ಗಸೂಚಿ ಹೊರಡಿಸುತ್ತಿದೆ. ಇದು ಸರ್ಕಾರದ ವೈಫಲ್ಯವಲ್ಲವೇ? ಈಗಾಗಲೇ ಸತ್ತವರ ಹೆಸರಿನಲ್ಲಿ ಜಮೆಯಾದ ಹಣವನ್ನು ಸರ್ಕಾರ ವಾಪಸ್ ಪಡೆಯುವುದಾದರೂ ಹೇಗೆ? ಪ್ರಾಮಾಣಿಕವಾಗಿ ತೆರಿಗೆ ಕಟ್ಟುವವರ ಹಣ ಈ ರೀತಿ ದುರುಪಯೋಗ ವಾದರೆ ಅದಕ್ಕೆ ಸರ್ಕಾರವನ್ನೇ ಹೊಣೆಗಾರಿಕೆ ಮಾಡಬೇಕು.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಮೈಸೂರು ಒಡೆಯರ್ ಪೋಸ್ಟ್ ಕಾರ್ಡ್ ಬಿಡುಗಡೆ ಶ್ಲಾಘನೀಯ

ಮಾನ್ಯರೆ,

ಭಾರತೀಯ ಅಂಚೆ ಹಾಗೂ ಕರ್ನಾಟಕ ಅಂಚೆ ಚೀಟಿ ಸಂಗ್ರಹಣಾ ಸಂಘವು ಆಧುನಿಕ ಮೈಸೂರು ನಿರ್ಮಾಣಕ್ಕೆ, ಮಹತ್ವದ ಕೊಡುಗೆ ನೀಡಿರುವ ಮೈಸೂರು ಒಡೆಯರ್ ಮನೆತನವನ್ನು ಸ್ಮರಿಸಿ, ಗೌರವಿಸಿ, ಮುಂದಿನ ತಲೆಮಾರಿಗೆ ಮೈಸೂರಿನ ಇತಿಹಾಸ, ಪರಂಪರೆಯನ್ನು ತಿಳಿಸುವ ದೃಷ್ಟಿಯಿಂದ ಒಡೆಯರ್ ಅವರುಗಳ ಪೋಸ್ಟ್ ಕಾರ್ಡ್ ಹೊರತಂದಿರುವುದು ತುಂಬಾ ಶ್ಲಾಘನೀಯ. ನಾಡ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ಸಹಿತ ಅರಮನೆ ಸೇರಿದಂತೆ ಮೈಸೂರು ಒಡೆಯರ್ ಸಂಸ್ಥಾನದ ಐವರು ಮಹಾನ್ ವ್ಯಕ್ತಿಗಳಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್, ಹತ್ತನೇ ಶ್ರೀ ಚಾಮರಾಜ ಒಡೆಯರ್, ಮಹಾರಾಣಿ ಶ್ರೀಮತಿ ಕೆಂಪು ನಂಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜೇಂದ್ರ ಒಡೆಯರ್ ಅವರು ಮೈಸೂರು ಸಂಸ್ಥಾನದ ಬೆಳವಣಿಗೆಗೆ ನೀಡಿದ ಕೊಡುಗೆಗಳನ್ನು ದೇಶಕ್ಕೆ ಪರಿಚಯಿಸುವ ದೃಷ್ಟಿಯಿಂದ ಮೈಸೂರಿನ ಹಿರಿಮೆ - ಗರಿಮೆಯನ್ನು ಗೌರವಿಸುವ ಮಹತ್ಕಾರ್ಯವನ್ನು ಮಾಡಿರುವ ಭಾರತೀಯ ಅಂಚೆ ಇಲಾಖೆಯ ಕೆಲಸ ಸ್ವಾಗತಾರ್ಹ.


-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಮಧ್ಯಂತರ ಬಜೆಟ್ ಮಂಡನೆ ಹಾಸ್ಯಾಸ್ಪದ

ಮಾನ್ಯರೆ,

ಸಾರ್ವಜನಿಕ ಹಣದ ವೆಚ್ಚದಲ್ಲಿ ಪದೇ ಪದೆ ಬಜೆಟ್ ಮಂಡಿಸುವುದು ಕೇವಲ ರಾಜಕೀಯ ಹಿತಾಸಕ್ತಿಯ ಗಿಮಿಕ್ ಅಷ್ಟೇ. ಫೆಬ್ರವರಿಯಲ್ಲಿ ಈಗಾಗಲೇ ಪೂರ್ಣಪ್ರಮಾಣದ ಆಯವ್ಯಯ ಅಂಗೀಕಾರವಾಗಿದ್ದರೂ ಕೇವಲ ಅಧಿಕಾರ ಹಂಚಿಕೆಯ ಗೊಂದಲ ಮತ್ತು 2028ರ ಚುನಾವಣಾ ಸ್ವಾರ್ಥಕ್ಕಾಗಿ ಮತ್ತೊಂದು ಮಧ್ಯಂತರ ಬಜೆಟ್‌ಗೆ ಚಿಂತಿಸುವುದು ಆರ್ಥಿಕ ದುರುದ್ದೇಶವನ್ನು ತೋರಿಸುತ್ತದೆ. ಆಡಳಿತ ಯಂತ್ರದ ಚುರುಕಿಗೆ ಹೊಸ ಬಜೆಟ್ ಬೇಕೆಂಬ ವಾದ ಹಾಸ್ಯಾಸ್ಪದ. ಕೇವಲ ಜನಪ್ರಿಯ ಯೋಜನೆಗಳ ಮೂಲಕ ಬೊಕ್ಕಸ ಖಾಲಿ ಮಾಡುವ ಬದಲು ಹಾಲಿ ಯೋಜನೆಗಳಲ್ಲೇ ಸುಧಾರಣೆ ತರಬಹುದು. ಹೊಸ ಬಜೆಟ್ ಮಂಡನೆಯಿಂದ ಕನಿಷ್ಠ 15-20% ಹೆಚ್ಚುವರಿ ಆಡಳಿತಾತ್ಮಕ ವೆಚ್ಚ ಮತ್ತು ಸಮಯ ವ್ಯರ್ಥವಾಗುತ್ತದೆ. ರಾಜಕೀಯ ಮೇಲಾಟಕ್ಕಾಗಿ ತೆರಿಗೆದಾರರ ಹಣವನ್ನು ಪೋಲು ಮಾಡದೆ ಪಾರದರ್ಶಕ ಆರ್ಥಿಕ ನಿರ್ವಹಣೆ ಮಾಡಿ ನವೀನ ತಂತ್ರಜ್ಞಾನ ಬಳಸಿ ಈಗಿರುವ ಬಜೆಟ್ ಅನ್ನೇ ಜನಪರವಾಗಿ ಜಾರಿಗೊಳಿಸುವುದು ಇಂದಿನ ಅಗತ್ಯವಾಗಿದೆ.

-ಡಾ.ಎಚ್.ಕೆ. ವಿಜಯಕುಮಾರ್, ಮೈಸೂರು.



ಸದ್ಗುರು
ಸಂಸ್ಥಾಪಕರು, ಇಶಾ ಫೌಂಡೇಶನ್

ಅನುಭಾವದ ಚಿಂತನೆಗಳು

ಮಾನವ ಸಾಧ್ಯತೆಯ ಸಂಭಾವ್ಯತೆ ವೃದ್ಧಿಸುವುದು

ಮನುಷ್ಯರಾಗಿ ನಾವು ಮಾನವ ಸಾಮರ್ಥ್ಯದ ಕುರಿತು ನಿಜವಾದ ಅರ್ಥದಲ್ಲಿ ಗಮನಹರಿಸಿಯೇ ಇಲ್ಲ. ಮನುಷ್ಯರು ಪ್ರಸ್ತುತ ಇರುವ ಮಟ್ಟದಲ್ಲಿಯೇ ಇರುವತ್ತ ಹೆಚ್ಚು ಒತ್ತನ್ನು ನೀಡಿದ್ದಾರೆಯೇ ಹೊರತು, ಪರಿಪೂರ್ಣ ಸಾಮರ್ಥ್ಯದಿಂದ ಮಾನವ ಸಾಧ್ಯತೆ ಬೆಳೆಸಿ ಅರಳಿಸುವ ನಿಟ್ಟಿನಲ್ಲಿ ನಿಜವಾಗಿ ಗಮನ ಹರಿಸಿಲ್ಲ.

ಕೆಲವು ವರ್ಷಗಳ ಹಿಂದೆ, ನಾನು ಡಾವೊಸ್‌ನಲ್ಲಿ ನಡೆದ ವರ್ಲ್ಡ್ ಎಕನಾಮಿಕ್ ಫೋರಮ್‌ಗೆ ಹೋಗಿದ್ದಾಗ, ಹಾರ್ವರ್ಡ್ ಯೂನಿವರ್ಸಿಟಿಯ ಪ್ರೊಫೆಸರ್ ಒಬ್ಬರು ನನ್ನ ಬಳಿ ಬಂದು 'ಓಹ್! ನೀವು ಮರಗಳನ್ನು ನೆಡುವ ಆ ಅದ್ಭುತ ವ್ಯಕ್ತಿ' ಎಂದರು.

ನಾನೆಂದೆ, 'ನಾನು ಮರ ನೆಡುವವನಲ್ಲ'. ಆಗ ಅವರು ಹೇಳಿದರು 'ಇಲ್ಲ, ಇಲ್ಲ. ನೀವು ಲಕ್ಷಾಂತರ ಮರಗಳನ್ನು ನೆಟ್ಟಿದ್ದೀರಿ'. 'ಹೌದು ನಾವು ಆ ಕೆಲಸ ಮಾಡಿದ್ದೇವೆ. ಆದರೆ ನಾನು ಮರ ನೆಡುವವನಲ್ಲ'. 'ಮತ್ತೆ ನೀವು ಏನು ಮಾಡುತ್ತೀರ?' ಅಂತ ಕೇಳಿದರು. ಅದಕ್ಕೆ 'ನಾನು ಜನರನ್ನು ಅರಳುವಂತೆ ಮಾಡುತ್ತೇನೆ' ಎಂದೆ. ನಿಜವಾದ ಮಾನವ ಸಂಪನ್ಮೂಲ ವಿಭಾಗ ಎಂದರೆ ನಿಮಗೆ ಜನರನ್ನು ಅರಳಿಸುವುದು ಹೇಗೆ ಎಂದು ಗೊತ್ತಿರಬೇಕು. ಮನುಷ್ಯರನ್ನು ಅರಳುವಂತೆ ಮಾಡಲು ಬೇಕಾಗುವ ಅಂಶಗಳೇನು? ನಿಮ್ಮ ದೇಹ, ಮನಸ್ಸು, ಭಾವನೆಗಳು ಮತ್ತು ನಿಮ್ಮ ಚೈತನ್ಯ ಇವೆಲ್ಲವನ್ನೂ ತಮ್ಮ ಪೂರ್ಣ ವ್ಯಾಪ್ತಿ ಮತ್ತು ಆಯಾಮಗಳವರೆಗೆ ಬೆಳೆಸಬೇಕು. ನಿಮ್ಮ ವೃತ್ತಿ ಮತ್ತು ನಿಮ್ಮ ಉದ್ಯಮದ ಮೂಲಕ ನಿಮಗೆ ತಿಳಿದೇ ಇರುತ್ತದೆ-ನೀವು ಸರಿಯಾದುದನ್ನು ಮಾಡದಿದ್ದರೆ ಸರಿಯಾದ ಫಲಿತಾಂಶಗಳೂ ಸಿಗುವುದಿಲ್ಲ.

ಜೀವನ, ಕೆಲಸ ಮಾಡುವುದೇ ಹೀಗೆ. ಹೊರಗಿನ ವ್ಯವಹಾರಕ್ಕೆ ಇದು ಸತ್ಯವಾದರೆ, ಇದು ಆಂತರ್ಯಕ್ಕೂ ಸತ್ಯ. ಆದರೆ ಬೇರೆಯವರ ಜೊತೆ ನಾವು ಸರಿಯಾದ ಕೆಲಸಗಳನ್ನು ಮಾಡುವ ಮೊದಲು ನಾವು ನಮ್ಮೊಳಗೆ ಸರಿಯಾದ ಕೆಲಸವನ್ನು ಮಾಡಿಕೊಳ್ಳಬೇಕು. ನೀವು ನಿಮ್ಮೊಳಗೆ ಸರಿಯಾಗಿ ನಡೆದುಕೊಳ್ಳುತ್ತಿದ್ದರೆ, ನೀವು ಅತ್ಯಂತ ಮಧುರರಾಗಿರುತ್ತೀರಿ. ಜನರು ಯಶಸ್ಸು, ಹಣ ಅಥವಾ ಅಧಿಕಾರ ಹುಡುಕುತ್ತಿರುತ್ತಾರೋ, ಬಾರ್‌ಗೆ ಹೋಗುತ್ತಿರುತ್ತಾರೋ ಅಥವ ದೇವಸ್ಥಾನಕ್ಕೆ ಹೋಗುತ್ತಿರುತ್ತಾರೋ, ಅಥವಾ ಸ್ವರ್ಗಕ್ಕೆ ಹೋಗಲು ಬಯಸುತ್ತಿರುತ್ತಾರೋ-ಒಟ್ಟಾರೆ ನೋಡಿದರೆ ಪ್ರತಿಯೊಬ್ಬರೂ ತಮ್ಮ ಒಳಗೆ ಮತ್ತು ಹೊರಗೆ ಹುಡುಕುತ್ತಿರುವುದು ಮಧುರವಾಗಿರುವುದನ್ನೇ.

ದುರದೃಷ್ಟವಶಾತ್, ನೀವು ನಿಮ್ಮ ಹೊರಗಿನ ಪರಿಸ್ಥಿತಿಗಳಿಗೆ ಕೊಡುತ್ತಿರುವ ನಿಮ್ಮ ಪ್ರತಿಕ್ರಿಯೆಯು ನಿಮ್ಮ ಅನುಭವವನ್ನು ನಿರ್ಧರಿಸುತ್ತಿದೆ. ನೀವು ಯಾವುದೇ ಬಗೆಯ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರಬಹುದು, ನಿಮಗೆ ಬೇಕಾದಂತೆ 100% ಇರುವಂಥ ಒಬ್ಬನೇ ಒಬ್ಬ ವ್ಯಕ್ತಿಯೂ ಈ ಇಡೀ ಗ್ರಹದಲ್ಲೇ ಇಲ್ಲ. ಇದು ಹೀಗಿರುವಾಗ ಕನಿಷ್ಠ ಪಕ್ಷ ನೀವೊಬ್ಬರಾದರೂ ನಿಮಗೆ ಬೇಕಾದಂತೆ ಇರಬೇಕು.

ಆದರೆ ಇದೀಗ ನಿಮ್ಮ ಸಂತೋಷ, ಶಾಂತಿ, ಯೋಗಕ್ಷೇಮ ಎಷ್ಟು ದುರ್ಬಲವಾಗಿದೆಯೆಂದರೆ ಯಾರು ಬೇಕಾದರೂ ಅದನ್ನು ಹೊಡೆದು ಉರುಳಿಸಬಹುದು. ನಿಮ್ಮ ಯೋಗಕ್ಷೇಮ ಅಷ್ಟು ದುರ್ಬಲವಾಗಿರುವಾಗ, ಆತಂಕದಿಂದ ಇರುವುದು ಸಾಮಾನ್ಯ. ಆತಂಕ ಸಾಮಾನ್ಯ ಸ್ಥಿತಿಯಾದರೆ, ಹುಚ್ಚುತನ ಒಂದೇ ಹೆಜ್ಜೆ ದೂರವಿದೆ.

ಅದರಲ್ಲೂ ಹೊರಗಿನ ಪರಿಸ್ಥಿತಿ ಯಾವುದೇ ಕಾರಣದಿಂದ ಅಹಿತಕರವಾಗಿದ್ದರೆ, ನಿಮ್ಮ ಸುತ್ತ ಇರುವ ಜನ ಅಹಿತಕರವಾಗಿದ್ದರೆ, ನಿಮ್ಮೊಳಗೆ ನೀವು ಮಧುರತೆಯನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ನಾವು ನಿಜವಾಗಿಯೂ ಮಾನವ ಸಾಮರ್ಥ್ಯವನ್ನು ಅರಳಿಸಬೇಕು ಎಂದು ಬಯಸಿದಲ್ಲಿ ಮೂಲಭೂತವಾಗಿ ನಾವು ಎಂತಹ ಸಂದರ್ಭವನ್ನು ಸೃಷ್ಟಿಸಬೇಕೆಂದರೆ-ಮಧುರತೆ ಎನ್ನುವುದು ಪ್ರಜ್ಞಾಪೂರ್ವಕವಾದ ಆಯ್ಕೆ ಆಗಿರಬೇಕು, ಅದು ಬೇರೆ ಯಾರೋ ನಿಮ್ಮೊಡನೆ ತುಂಬಾ ಚೆನ್ನಾಗಿ ನಡೆದುಕೊಳ್ಳುತ್ತಿದ್ದಾರೆ ಎಂಬ ಕಾರಣಕ್ಕೆ ಅಲ್ಲ.

ನಿಮ್ಮಲ್ಲಿ ಅತ್ಯುತ್ತಮವಾದದ್ದು ವ್ಯಕ್ತವಾಗಬೇಕಾದರೆ ಮೊಟ್ಟ ಮೊದಲನೆಯದಾಗಿ ನಿಮ್ಮನ್ನು ನೀವು ಆನಂದವಾಗಿಟ್ಟುಕೊಳ್ಳುವುದು ಹೇಗೆಂದು ತಿಳಿದಿರಬೇಕು. ಇದರಿಂದ ನಿಮ್ಮ ಸುತ್ತ ಇರುವವರನ್ನೂ ನೀವು ಸಂತೋಷವಾಗಿ ಇಟ್ಟುಕೊಳ್ಳಬಹುದು. ನಿಮ್ಮ ಜೊತೆ ಕೆಲಸ ಮಾಡುತ್ತಿರುವವರೆಲ್ಲರೂ ನಿಜವಾಗಿ ಸಂತೋಷವಾಗಿದ್ದರೆ ಅವರನ್ನು ಹೆಚ್ಚು 'ಮ್ಯಾನೇಜ್' ಮಾಡಬೇಕಾಗಿಲ್ಲ. ಸಂತೋಷವಾಗಿರುವ ವ್ಯಕ್ತಿ ಸದಾ ಉತ್ತಮ ಮಾನವ ಸಂಪನ್ಮೂಲ. ನೀವು ಸಂತೋಷವಾಗಿರುವಾಗ ನಾನು ನಿಮ್ಮನ್ನು ಭೇಟಿ ಮಾಡಿದರೆ, ನೀವೆಲ್ಲರೂ ಅದ್ಭುತ ವ್ಯಕ್ತಿಗಳಾಗಿರುತ್ತೀರಿ! ಅದೇ ನೀವು ಕೋಪ, ಹತಾಶೆ ಅಥವಾ ದುಃಖದಲ್ಲಿದ್ದಾಗ ನಿಮ್ಮನ್ನು ಭೇಟಿ ಮಾಡಿದರೆ, ನೀವು ಭಯಂಕರವಾಗಿ ತೋರಬಹುದು. ನೀವಿರುವುದೇ ಹಾಗೇ ಎಂದಲ್ಲ, ಆದರೆ ಸಾಧ್ಯ. ಇದೇ ಮೂಲಭೂತವಾಗಿ ನಾವು ನೋಡಿಕೊಳ್ಳದೇ ಹೋಗಿರುವುದು.

ನಿಮ್ಮ ದೇಹ, ಮನಸ್ಸು, ಭಾವನೆಗಳು ಮತ್ತು ಚೈತನ್ಯ ಶಕ್ತಿಗಳನ್ನು ನಿರಂತರವಾಗಿ ವೃದ್ಧಿಸುತ್ತಾ, ಈಗ ನಿರ್ವಹಿಸುತ್ತಿರುವುದಕ್ಕಿಂತ ಉತ್ತಮವಾಗಿ ಅವುಗಳನ್ನು ಕಾರ್ಯ ನಿರ್ವಹಿಸುವಂತೆ ಮಾಡಬಹುದು. ಸೃಷ್ಟಿಯ ಮೂಲವೇ ನಿಮ್ಮೊಳಗೆ ಮಿಡಿಯುತ್ತಿದ್ದರೂ ನಿಮಗದರ ಅರಿವೇ ಇಲ್ಲ. ಈ ದೇಹ ಒಳಗಿನಿಂದ ಸೃಷ್ಟಿಯಾಗಿದ್ದು, ಹೊರಗಿನಿಂದಲ್ಲ. ನಿಮ್ಮ ದೇಹವು ಆಹಾರದ ಶೇಖರಣೆಯಿಂದ ಆಗಿರುವುದು. ನೀವು ಹೊರಗಿನಿಂದ ಕಚ್ಚಾ ವಸ್ತುವನ್ನು ಒದಗಿಸುತ್ತೀರಿ, ಆದರೆ ದೇಹದ ಬೆಳವಣಿಗೆ ಒಳಗಿನಿಂದ ಆಗುತ್ತಿದೆ. ಆಹಾರದ ಶೇಖರಣೆ ಮತ್ತು ನಿಮ್ಮ 'ಮನಸ್ಸು' ಎಂಬ ಅನಿಸಿಕೆಗಳ ಶೇಖರಣೆಯಂತೆ ನೀವು ಇಲ್ಲಿ ಜೀವಿಸುವುದರ ಬದಲಾಗಿ, ಸೃಷ್ಟಿಯ ಮೂಲವನ್ನು ಸ್ಪರ್ಶಿಸಬಲ್ಲವರಾದರೆ, ನೀವು ಬಹಳ ಉದಾತ್ತವಾದ ಜೀವನವನ್ನು ನಡೆಸಬಹುದು. ಹಾಗಾದಾಗ ಮಾತ್ರ ನಿಜವಾದ ಅರ್ಥದಲ್ಲಿ ನೀವು ಮಾನವ ಸಂಪನ್ಮೂಲವನ್ನು ಬೆಳೆಸುತ್ತಿದ್ದೀರಿ ಎಂದು ಹೇಳಬಹುದು, ಕೇವಲ ಅವರನ್ನು ಯಾವುದೋ ಕೆಲಸವನ್ನು ಮಾಡಲು ತರಬೇತಿ ಕೊಡುವುದರಿಂದ ಅಲ್ಲ.

ಇದು ಪ್ರತಿಯೊಬ್ಬರಿಗೂ ಸಾಧ್ಯವಾಗಲೇಬೇಕು. ನಿಮ್ಮ ಸಂತೋಷ, ದುಃಖ ಅಥವಾ ಭಾವಪರವಶತೆ ಸದಾ ನಿಮ್ಮೊಳಗೇ ಆಗುತ್ತವೆ. ಮನುಷ್ಯರಿಗಿರುವ ಬಿಕ್ಕಟ್ಟು ಇದೇ-ನಿಮ್ಮೆಲ್ಲಾ ಇಂದ್ರಿಯಗಳು ಹೊರಮುಖವಾಗಿವೆ. ಆದರೆ ನಿಮ್ಮ ಅನುಭವದ ನೆಲೆ ನಿಮ್ಮೊಳಗೇ ಇದೆ. ಈ ಅನುಭವದ ನೆಲೆ ಹೇಗೆ ಕೆಲಸ ಮಾಡುತ್ತದೆ ಎಂದು ನಿಮಗೆ ಅರಿವು ಇದ್ದರೆ, ನೀವು ನಿಮ್ಮ ಜೀವನದ ಅನುಭವವನ್ನು ಮಧುರವಾಗಿಸುತ್ತೀರೋ ಇಲ್ಲಾ ಕಹಿಯಾಗಿಸುತ್ತೀರೋ? ಖಂಡಿತವಾಗಿ ಮಧುರವಾಗಿ. ನೀವು ಅತ್ಯಂತ ಮಧುರತೆಯಲ್ಲಿದ್ದರೆ, ನೀವು ಅತ್ಯುತ್ತಮ ರೀತಿಯಲ್ಲಿ ಕಾರ್ಯಗಳನ್ನು ನಿರ್ವಹಿಸುತ್ತೀರಿ.

ನಾವು ಪ್ರಪಂಚದಲ್ಲಿ ಎಲ್ಲ ಬಗೆಯ ಮೂಲಸೌಕರ್ಯಗಳನ್ನು ನಿರ್ಮಿಸಿದ್ದೇವೆ ಆದರೆ ಮನುಷ್ಯನ ಆಂತರ್ಯದ ಯೋಗಕ್ಷೇಮಕ್ಕಾಗಿ ಸಾಕಷ್ಟು ಮೂಲಸೌಕರ್ಯಗಳನ್ನು ನಿರ್ಮಿಸಿಲ್ಲ. ಮಾನವರು ತಮ್ಮ ಆಂತರ್ಯದಲ್ಲಿ ಹೇಗೆ ಇರುತ್ತಾರೆ ಎನ್ನುವುದು ಅವರಲ್ಲಿರುವ ಅತ್ಯುತ್ತಮವಾದುದನ್ನು ವ್ಯಕ್ತಪಡಿಸಲು ಬಹಳ ಮುಖ್ಯವಾಗಿರುತ್ತದೆ. ಇಲ್ಲದಿದ್ದರೆ ನಾವು ವೈಕಲ್ಯತೆ ಹೊಂದಿದವರಂತೆಯೇ ಉಳಿದುಬಿಡುತ್ತೇವೆ. ನಾನು ಮಾನವ ಸಂಪನ್ಮೂಲ ವಿಭಾಗವನ್ನು ಕೇವಲ ಕಂಪನಿ ಆಡಳಿತ, ಜನರನ್ನು ಕೆಲಸಕ್ಕೆ ನೇಮಕ ಮಾಡುವುದು, ತೆಗೆದು ಹಾಕುವುದು ಇಷ್ಟಕ್ಕೇ ಸೀಮಿತಗೊಳ್ಳದೆ ಇನ್ನೂ ವಿಶಾಲವಾದ ದೃಷ್ಟಿಕೋನದೊಂದಿಗೆ ನೋಡಲು ಬಯಸುತ್ತೇನೆ. ನಾವು ನಿಜವಾಗಿಯೂ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಬೇಕೆಂದಿದ್ದರೆ, ನಾವು ಪ್ರತ್ಯೇಕ ವ್ಯಕ್ತಿಗಳಾಗಿ, ಕುಟುಂಬಗಳಾಗಿ, ಸಮಾಜಗಳಾಗಿ, ದೇಶಗಳಾಗಿ, ಒಟ್ಟಾರೆ ಮಾನವಕೋಟಿಯಾಗಿ ಜನರನ್ನು ಈಗಿರುವ ಮಟ್ಟದಿಂದ ಬಹಳಷ್ಟು ಹೆಚ್ಚಿನ ಸಾಧ್ಯತೆಯನ್ನಾಗಿ ಬೆಳೆಸಲು ಏನನ್ನಾದರೂ ಹೂಡಿಕೆ ಮಾಡಲೇಬೇಕು.



> "ನಿಮ್ಮಲ್ಲಿ ಅತ್ಯುತ್ತಮವಾದದ್ದು ವ್ಯಕ್ತವಾಗಬೇಕಾದರೆ ಮೊಟ್ಟ ಮೊದಲನೆಯದಾಗಿ ನಿಮ್ಮನ್ನು ನೀವು ಆನಂದವಾಗಿಟ್ಟುಕೊಳ್ಳುವುದು ಹೇಗೆಂದು ತಿಳಿದಿರಬೇಕು. ಇದರಿಂದ ನಿಮ್ಮ ಸುತ್ತ ಇರುವವರನ್ನೂ ನೀವು ಸಂತೋಷವಾಗಿ ಇಟ್ಟುಕೊಳ್ಳಬಹುದು. ನಿಮ್ಮ ಜೊತೆ ಕೆಲಸ ಮಾಡುತ್ತಿರುವವರೆಲ್ಲರೂ ನಿಜವಾಗಿ ಸಂತೋಷವಾಗಿದ್ದರೆ ಅವರನ್ನು ಹೆಚ್ಚು 'ಮ್ಯಾನೇಜ್' ಮಾಡಬೇಕಾಗಿಲ್ಲ. ಸಂತೋಷವಾಗಿರುವ ವ್ಯಕ್ತಿ ಸದಾ ಉತ್ತಮ ಮಾನವ ಸಂಪನ್ಮೂಲ. ನೀವು ಸಂತೋಷವಾಗಿರುವಾಗ ನಾನು ನಿಮ್ಮನ್ನು ಭೇಟಿ ಮಾಡಿದರೆ, ನೀವೆಲ್ಲರೂ ಅದ್ಭುತ ವ್ಯಕ್ತಿಗಳಾಗಿರುತ್ತೀರಿ!

ದೇಶ ವಿಭಜನೆಗೆ ಮೂಲ ಕಾರಣಕರ್ತರೇ ಸರ್ದಾರ್ ವಲ್ಲಭಭಾಯ್ ಪಟೇಲರು

● ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರ ಸ್ಪಷ್ಟನೆ ● ಮಹಾತ್ಮ ಗಾಂಧೀಜಿ ಅವರಿಗೆ ಒಪ್ಪಿಗೆ ಇರಲಿಲ್ಲ; ಪರಿಸ್ಥಿತಿ ಕೈಮೀರುವುದ ತಡೆಯಲು ಪಟೇಲ್ ಅವರನ್ನ ಒಪ್ಪಿಸಿದರು



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಆಯೋಜಿಸಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ನವೀನ್‌ಕುಮಾರ್, ಪ್ರೊ.ರಾಮನಾಥಂನಾಯ್ಡು, ಅಧ್ಯಯನ ವಿಭಾಗದ ಡೀನ್ ಎನ್.ಆನಂದಗೌಡ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಜೂ.18(ಎಂಟಿವೈ)- ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ದೇಶ ವಿಭಜನೆಗೆ ಒಪ್ಪದೆ ಇದ್ದ ಮಹಾತ್ಮ ಗಾಂಧೀಜಿ ಅವರಿಗೆ ಸಾಧಕ-ಬಾಧಕಗಳ ಮನವರಿಕೆ ಮಾಡಿಕೊಟ್ಟು ಸಮ್ಮತಿ ಸೂಚಿಸುವಂತೆ ಮನವೊಲಿಸುವಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್ ಯಶಸ್ವಿಯಾದರು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ದೇಶ ವಿಭಜನೆ ಪ್ರಸ್ತಾಪ ಎದುರಾದಾಗ ಮಹಾತ್ಮ ಗಾಂಧೀಜಿ ಒಪ್ಪಿಗೆ ಸೂಚಿಸಿರಲಿಲ್ಲ. ಇದರಿಂದ ಸಮಸ್ಯೆ ಬಿಗಡಾಯಿಸುವ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ವಿಭಜನೆ ಆಗುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಆ ನಂತರವಷ್ಟೇ ಗಾಂಧೀಜಿ ಅವರು ವಿಭಜನೆಗೆ ಸಮ್ಮತಿ ಸೂಚಿಸಿದರು ಎಂದು ತಿಳಿಸಿದರು.

ಸ್ವಾತಂತ್ರ್ಯ ದೊರೆತ ನಂತರ 570 ಪ್ರಭುತ್ವವನ್ನು ಏಕೀಕರಣ ಮಾಡುವ ಸವಾಲು ಎದುರಾಯಿತು. ಆ ಸಮಯದಲ್ಲಿ ಪಟೇಲ್ ಅವರು ಸಂಧಾನ ನಡೆಸಿ, ಅದಕ್ಕೊಪ್ಪದ ಜುನಾಗಡ, ಹೈದರಾಬಾದ್, ಕಾಶ್ಮೀರದ ರಾಜರ ಮನವೊಲಿಸಿದ್ದರು. ಆದರೂ ಸಂಧಾನಕ್ಕೆ ಒಪ್ಪದಿದ್ದ ಹೈದರಾಬಾದ್ ನಿಜಾಮರ ಆಡಳಿತ ಪ್ರದೇಶಕ್ಕೆ ಸೈನ್ಯ ನುಗ್ಗಿಸುವುದಕ್ಕೆ ನಿರ್ಧರಿಸಿದ್ದರು. ಆದರೆ, ದೇಶದ ಸೈನ್ಯದ ಬಲಕ್ಕೆ ಶರಣಾಗಿದ್ದರು. ಈ ರೀತಿಯ ನಾಯಕತ್ವ ಗುಣ ಅವರಲ್ಲಿತ್ತು. ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೆ ಸಮಗ್ರ ಭಾರತ ರೂಪಿಸುವ ಹೊಣೆಗಾರಿಕೆ ನೀಡಲಾಗಿತ್ತು. ಅವರು ಎಚ್ಚರ ತಪ್ಪಿದ್ದರೆ ಭಾರತದ ಸಮಗ್ರತೆ ಉಳಿಯುತ್ತಿರಲಿಲ್ಲ ಎಂದು ಮಾದೇಗೌಡರು ವಿಷಾದಿಸಿದರು.

ಹೈದರಾಬಾದ್ ಪ್ರಾಂತ್ಯ ಏಕೀಕರಣವಾಗದೇ ಇದ್ದರೆ ಬೀದರ್, ಬಳ್ಳಾರಿ ನಮ್ಮ ಭಾಗವಾಗುತ್ತಿರಲಿಲ್ಲ. ಹೈದರಾಬಾದ್ ಮತ್ತೊಂದು ಕಾಶ್ಮೀರವಾಗುತ್ತಿತ್ತು. ಹೀಗಾಗಿ ಕರ್ನಾಟಕವು ಆದ್ಯತೆ ಮೇಲೆ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರನ್ನು ಸ್ಮರಿಸಿಕೊಳ್ಳಬೇಕು. ಆದರೆ ನಮ್ಮಲ್ಲಿ ಅವರ ಜಯಂತಿಗಳ ಆಚರಣೆ ಬಗ್ಗೆ ನಿರ್ಲಕ್ಷ್ಯವಿರುವುದು ವಿಷಾದನೀಯ. ಅವರು ಹೋರಾಡಿದ್ದು ಕಾಂಗ್ರೆಸ್ ಪಕ್ಷದ ಮೂಲಕವೇ ಆದರೂ, ಆ ಪಕ್ಷಕ್ಕಿಂತ ಭಿನ್ನವಾಗಿರುವ ಆಡಳಿತ ಪಕ್ಷವು ಅವರ ಏಕತಾ ಪ್ರತಿಮೆ ನಿರ್ಮಿಸಿ, ಅವರು ಪಕ್ಷಾತೀತ ನಾಯಕ ಎಂದು ನಿರೂಪಿಸಿದ್ದಾರೆ ಎಂದರು.

ಖೇಡಾ ಸತ್ಯಾಗ್ರಹದ ಸಂದರ್ಭದಲ್ಲಿ ಸರ್ಕಾರ ರೈತರ ಬೇಡಿಕೆಗಳಿಗೆ ಸ್ಪಂದಿಸದೆ ಇದ್ದಾಗ, ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಜನರನ್ನು ಸಂಘಟಿಸಿ ಸರ್ಕಾರದ ವಿರುದ್ಧ ಹೋರಾಟ ನಡೆಸಿದರು. ರೈತರಿಗೆ ಪರಿಹಾರ ನೀಡುವ ಬದಲು ಅವರ ಆಸ್ತಿಗಳನ್ನು ಜಪ್ತಿ ಮಾಡಲಾಯಿತು. ಹಲವರನ್ನು ಬಂಧಿಸಲಾಯಿತು. ಆದಾಗ್ಯೂ, ಪಟೇಲ್ ಅವರು ಸರ್ಕಾರದ ಒತ್ತಡಕ್ಕೆ ಮಣಿಯದೆ ಜನರಲ್ಲಿ ಆತ್ಮವಿಶ್ವಾಸ ತುಂಬಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಅಂತಿಮವಾಗಿ ಸರ್ಕಾರ ರೈತರ ಬೇಡಿಕೆಗಳಿಗೆ ಮಣಿಯಬೇಕಾಯಿತು ಎಂದು ಹೇಳಿದರು.

ಖೇಡಾ ಹೋರಾಟದಿಂದ ಪಟೇಲ್ ಅವರು ಜನಪ್ರಿಯ ನಾಯಕರಾಗಿ ಹೊರಹೊಮ್ಮಿದರು. ನಂತರ ಅವರು ಅಹಮದಾಬಾದ್ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಆಯ್ಕೆಯಾಗಿ, ಜನಸೇವೆ ಮತ್ತು ಉತ್ತಮ ಆಡಳಿತ ಹೇಗೆ ನೀಡಬೇಕು ಎನ್ನುವುದನ್ನು ಕಾರ್ಯ ವೈಖರಿಯಲ್ಲಿ ತೋರಿಸಿದರು. ಹೋರಾಟ ನಡೆಸುವುದಷ್ಟೇ ಅಲ್ಲ, ಆಡಳಿತವನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯವೂ ಅವರಲ್ಲಿತ್ತು ಎಂಬುದನ್ನು ಸಾಬೀತುಪಡಿಸಿದರು.

ಬಾರ್ಡೋಲಿ ಸತ್ಯಾಗ್ರಹದಲ್ಲಿ ರೈತರ ಪರವಾಗಿ ಅವರು ಗಟ್ಟಿಯಾಗಿ ನಿಂತರು. ಸರ್ಕಾರದ ಅನ್ಯಾಯಕರ ತೆರಿಗೆ ಹೆಚ್ಚಳದ ವಿರುದ್ಧ ರೈತರನ್ನು ಸಂಘಟಿಸಿ ಹೋರಾಟ ನಡೆಸಿದರು. ಈ ಸತ್ಯಾಗ್ರಹವು ಐತಿಹಾಸಿಕ ಯಶಸ್ಸು ಕಂಡಿತು. ಬಾರ್ಡೋಲಿ ಸತ್ಯಾಗ್ರಹದ ವಿಜಯದ ಬಳಿಕವೇ ಅವರಿಗೆ 'ಸರ್ದಾರ್' ಎಂಬ ಗೌರವ ಬಿರುದು ಲಭಿಸಿತು. ಉಪ್ಪಿನ ಸತ್ಯಾಗ್ರಹ, ಸ್ವಾತಂತ್ರ್ಯ ಹೋರಾಟದ ಅನೇಕ ಹಂತಗಳಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು. ತಮ್ಮ ದೃಢ ನಾಯಕತ್ವ, ಸಂಘಟನಾ ಸಾಮರ್ಥ್ಯ ಮತ್ತು ಅಚಲ ದೇಶಭಕ್ತಿಯ ಮೂಲಕ ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಮುಖ ನಾಯಕರಾಗಿ ಹೊರಹೊಮ್ಮಿದರು ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಪ್ರೊ.ಎಂ.ರಾಮನಾಥಂ ನಾಯ್ಡು, ಅಧ್ಯಯನ ವಿಭಾಗದ ಡೀನ್ ಎನ್.ಆನಂದ ಗೌಡ ಇನ್ನಿತರರು ಪಾಲ್ಗೊಂಡಿದ್ದರು.

ನಾಳೆ ಗಾಂಧಿನಗರದಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು,ಜೂ.18- ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘದ ವತಿಯಿಂದ ಜೂ.20ರಂದು ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಗಾಂಧಿನಗರ 5ನೇ ಕ್ರಾಸ್‌ನಲ್ಲಿರುವ ಸಂಘದ ಸಮುದಾಯ ಭವನದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಿರುವ ಕಾರ್ಯಕ್ರಮವನ್ನು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅಧ್ಯಕ್ಷತೆ ವಹಿಸಲಿದ್ದು, ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮತ್ತಿತರ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಘದ ಅಧ್ಯಕ್ಷ ಪಿ.ಶ್ರೀಕಂಠಮೂರ್ತಿ, ಉಪಾಧ್ಯಕ್ಷ ಚೆಲುವರಾಜು, ಪ್ರಧಾನ ಕಾರ್ಯದರ್ಶಿ ಕೆ.ವಿಶ್ವರಾಜ್, ಸಹ ಕಾರ್ಯದರ್ಶಿ ಸಾಗರ್, ಖಜಾಂಚಿ ರಮೇಶ್, ಸಮಿತಿ ಸದಸ್ಯ ಮೋಹನ್‌ಕುಮಾರ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಯುವಕ ನಾಪತ್ತೆ



ಮೈಸೂರು: ಆರು ತಿಂಗಳ ಹಿಂದೆ ನಾಪತ್ತೆಯಾದ ಯುವಕನ ಪತ್ತೆಗೆ ಪೊಲೀಸರು, ಸಾರ್ವಜನಿಕರ ಸಹಕಾರ ಕೋರಿದ್ದಾರೆ. ಮೈಸೂರಿನ ಆರ್.ಎಸ್.ನಾಯ್ಡುನಗರದ ರಾಜಶೇಖರ್ ಅವರ ಪುತ್ರ ಸಂತೋಷ್ (30) 2ನೇ ಬಾರಿ ನಾಪತ್ತೆಯಾಗಿದ್ದಾರೆ. ಕಳೆದ ವರ್ಷ ನವೆಂಬರ್ 23ರಂದು ಕಾಣೆಯಾಗಿದ್ದ ಇವರನ್ನು ನರಸಿಂಹರಾಜ ಠಾಣೆ ಪೊಲೀಸರು ಡಿಸೆಂಬರ್ 4ರಂದು ಪಾಂಡವಪುರದಲ್ಲಿ ಪತ್ತೆ ಮಾಡಿ, ಕುಟುಂಬಕ್ಕೆ ಒಪ್ಪಿಸಿದ್ದರು. ಆದರೆ, ಅದೇ ತಿಂಗಳು 22ನೇ ತಾರೀಖಿನಂದು ಬೆಳಗ್ಗೆ ವಾಕಿಂಗ್‌ಗೆಂದು ಮನೆಯಿಂದ ಹೊರಹೋದವರು ಈವರೆಗೂ ಪತ್ತೆಯಾಗಿಲ್ಲ. ಇವರ ಬಗ್ಗೆ ಸುಳಿವು ಸಿಕ್ಕವರು ನರಸಿಂಹರಾಜ ಪೊಲೀಸ್ ಠಾಣೆ(0821-2418312) ಸಂಪರ್ಕಿಸುವಂತೆ ಪೊಲೀಸರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ 3.5 ಮಿ.ಮೀ. ಮಳೆ

ಇಡೀ ದಿನ ದಟ್ಟ ಮೋಡ, ಮಲೆನಾಡಿನ ತಂಪಾದ ವಾತಾವರಣ




ಮೈಸೂರು, ಜೂ.18(ಬಿಎಲ್‌ಯು)– ಮೈಸೂರು ನಗರದಲ್ಲಿ ಬುಧವಾರ 3.5 ಮಿಲಿ ಮೀಟರ್ ಮಳೆಯಾಗಿದೆ. ಮಾನ್ಸೂನ್ ಆರಂಭವಾದರೂ ವಾಡಿಕೆಯಂತೆ ಮಳೆಯಾಗದೆ ಬಿಸಿಲಿನ ಬೇಗೆಯಲ್ಲಿ ಬಸವಳಿದ್ದ ಜನರಿಗೆ ವರುಣ ದೇವ ತಂಪೆರೆದಿದ್ದಾನೆ.

ಕೇರಳಕ್ಕೆ ಮಾನ್ಸೂನ್ ಜೂನ್ 4ಕ್ಕೆ ಪ್ರವೇಶ ಮಾಡಿದರೆ, ಜೂನ್ 5ರಂದು ಕರ್ನಾಟಕ ಪ್ರವೇಶಿಸಿತ್ತು. ಮಾನ್ಸೂನ್ ಮಾರುತ ಆವರಿಸಿದರೂ ಹಳೆ ಮೈಸೂರು ಭಾಗದಲ್ಲಿ ಮಳೆಯಾಗಿರಲಿಲ್ಲ. ಮುಂಗಾರು ಮಳೆ ಆರಂಭವಾಗಿ 10 ದಿನವಾದರೂ ಮಳೆಯಾಗಲಿಲ್ಲವಲ್ಲ ಎಂಬ ಆತಂಕ ಜನರಲ್ಲಿ ಮನೆ ಮಾಡಿತ್ತು. ಆದರೆ, ಮೈಸೂರಿನಲ್ಲಿ ಬುಧವಾರ ಸುಮಾರು ಎರಡು ಗಂಟೆಗಳ ಕಾಲ ನಿರಂತರವಾಗಿ ಮಳೆ ಸುರಿಯಿತು. ಮೈಸೂರಿನ ನಾಗನಹಳ್ಳಿ ಹವಾಮಾನ ಇಲಾಖೆ ಸಹ ಸಂಶೋಧಕ ಡಾ.ಸುಮಂತ್ ನೀಡಿರುವ ಮಾಹಿತಿ ಪ್ರಕಾರ 3.5 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ.

ಗುರುವಾರ ಇಡೀ ದಿನ ನಗರದಲ್ಲಿ ದಟ್ಟ ಮೋಡ ಆವರಿಸಿತ್ತು. ಕೆಲವೆಡೆ ತುಂತುರು ಮಳೆಯಾಗಿತ್ತು. ಇದರಿಂದ ಮೈಸೂರು ನಗರದಲ್ಲಿ ಮಲೆನಾಡಿನ ತಂಪಾದ ವಾತಾವರಣವಿತ್ತು. ಇಷ್ಟು ದಿನ ಮೂಲೆ ಸೇರಿಸಿದ್ದ ಕೊಡೆ, ಜರ್ಕಿನ್, ಸ್ವೆಟರ್‌ಗಳು ಬಳಕೆಗೆ ಬಂದಿತ್ತು. ಬಹಳಷ್ಟು ಜನರು ಭಾರೀ ಮಳೆಯಾಗಬಹುದೆಂದು ಕೊಡೆ ಹಿಡಿದು, ಜರ್ಕಿನ್ ಧರಿಸಿ ಓಡಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಜೂ.21ಕ್ಕೆ ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ



ಮೈಸೂರು, ಜೂ.18(ಎಂಕೆ)– ಮೈಸೂರು ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ರಾಮ ಅಯ್ಯರ್ ರಸ್ತೆಯಲ್ಲಿರುವ ಪದ್ಮಜಾ ಶ್ರೀನಿವಾಸ ಸಭಾಂಗಣದಲ್ಲಿ ಜೂ.21ರಂದು ಸಂಜೆ 4 ಗಂಟೆಗೆ ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ವತಿಯಿಂದ ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಕೃತ ವಿದ್ವಾಂಸ ಗ.ನಾ.ಭಟ್ಟ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜರಾವ್, ವಿಜಯ ವಿಠಲ ವಿದ್ಯಾಸಂಸ್ಥೆಗಳ ಅಧ್ಯಕ್ಷ ಆರ್.ವಾಸುದೇವ ಭಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 'ಭೈರಪ್ಪ ಮತ್ತು ರಾಷ್ಟ್ರೀಯತೆ' ಕುರಿತು ಪ್ರೊ.ಅಜಕ್ಕಳ ಗಿರೀಶ್ ಭಟ್ ಮಾತನಾಡಿದರೆ, 'ಭೈರಪ್ಪನವರ ವೈಚಾರಿಕತೆ ಮತ್ತು ಚಿಂತನ–ಮಂಥನಗಳು' ಕುರಿತು ತಾವು ಮಾತನಾಡುವುದಾಗಿ ತಿಳಿಸಿದರು. ಗೀತಾ ವಿ.ಹೆಗ್ಗಡೆ, ಪ್ರಿಯದರ್ಶನ್ ಈ ವೇಳೆ ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣ ಪ್ರಸ್ತಾಪಕ್ಕೆ ರೈತ ಪರ್ವ ತೀವ್ರ ವಿರೋಧ



ರಾಜ್ಯ ರೈತ ಸಂಘ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್‌ಕುಮಾರ್ ಮಾತನಾಡಿದರು.

ಮೈಸೂರು, ಜೂ.18(ಎಂಕೆ)– ವಿದ್ಯುತ್ ಖಾಸಗೀಕರಣ ರೈತರಿಗೆ ಮರಣ ಶಾಸನವಾಗಿದ್ದು, ಸರ್ಕಾರ ಯಾವುದೇ ಕಾರಣಕ್ಕೂ ಟಾಟಾ ಕಂಪನಿಗೆ ವಿದ್ಯುತ್ ವಿತರಣಾ ಜವಾಬ್ದಾರಿ ನೀಡಬಾರದು. ಒಂದು ವೇಳೆ ನೀಡಿದಲ್ಲಿ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್‌ಕುಮಾರ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವಿದ್ಯುತ್ ಖಾಸಗೀಕರಣದಿಂದ ಜನಸಾಮಾನ್ಯರು ಹಾಗೂ ರೈತಾಪಿ ವರ್ಗದವರಿಗೆ ಆರ್ಥಿಕ ಸಂಕಷ್ಟ ಎದುರಾಗಲಿದೆ. ಉಚಿತ ಪಂಪ್‌ಸೆಟ್ ವಿದ್ಯುತ್‌ಗೆ ಕತ್ತರಿ ಬೀಳಲಿದೆ. ನಿಗದಿತ ವೇಳೆಗೆ ಬಿಲ್ ಪಾವತಿಸದಿದ್ದಲ್ಲಿ ಕೂಡಲೇ ವಿದ್ಯುತ್ ಕಡಿತಗೊಳಿಸುವ ಖಾಸಗೀಕರಣದಿಂದ ಜನರ ಬದುಕು ಕತ್ತಲೆಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು. ಹಾಗೆಯೇ ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುವ ಸಾವಿರಾರು ಉದ್ಯೋಗಿಗಳನ್ನು ಬೀದಿಪಾಲು ಮಾಡುವಂತಾಗುತ್ತದೆ. ಇದು ಎಲ್ಲರಿಗೂ ಮರಣ ಶಾಸನವಾಗುವ ಹಿನ್ನೆಲೆಯಲ್ಲಿ ರೈತ ಸಂಘಟನೆಗಳು ಆಕ್ಷೇಪ ಸಲ್ಲಿಸಿದ್ದು, ಸರ್ಕಾರ ಪುರಸ್ಕರಿಸಬೇಕೆಂದು ಆಗ್ರಹಿಸಿದರು. ಸಂಘದ ಚಾಮರಾಜ ಮಂಡಕಳ್ಳಿ, ಶ್ರೀಧರ್ ನಾಯಕ್, ಭರತ್ ಕಡಕೊಳ, ಮಂಚನಾಯಕ, ಮೀಸೆ ಮಂಜಣ್ಣ ಇದ್ದರು.

ಜೂ.22ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಜೂ.18–ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜೂನ್ 22ರಿಂದ 26ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಕಲಿಸುವ ಶಿಬಿರ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8–30 ಹಾಗೂ ಸಂಜೆ 6ರಿಂದ 8.30ವರೆಗೆ ಎರಡು ಅವಧಿಯಲ್ಲಿ ಶಿಬಿರ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಸುತ್ತೂರಲ್ಲಿ ಸಾಮೂಹಿಕ ವಿವಾಹ...



ಸುತ್ತೂರು ಶ್ರೀಮಠದಲ್ಲಿ ಜರುಗಿದ 134ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಹನ್ನೊಂದು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಹಾಗೂ ಸಂಸ್ಥೆಯ ಮುಖ್ಯಸ್ಥರನ್ನು ಕಾಣಬಹುದು.

ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಿಗೆ ಸನ್ಮಾನ



ಮೈಸೂರು, ಜೂ. 18– ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಚಂದ್ರಶೇಖರ ನುಗ್ಗಲಿ ಮತ್ತು ಪ್ರಧಾನ ಕಾರ್ಯದರ್ಶಿ ಹೆಚ್‌ಎಸ್ ಚೇತನ್ ಅವರಿಗೆ ಮೈಸೂರು ಜಿಲ್ಲಾ ಘಟಕ ಮತ್ತು ವಿವಿಧ ತಾಲೂಕು ಘಟಕಗಳ ವತಿಯಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಜಿಲ್ಲಾಧ್ಯಕ್ಷ ಕೆ.ಬಿ.ಶಶಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ನೌಕರರ ಸಂಘದ ರಾಜ್ಯ ಜಂಟಿ ಕಾರ್ಯ ದರ್ಶಿ ಡಿ.ಮಾಲೇಗೌಡ, ಮೈಸೂರು ತಾಲೂಕು ಅಧ್ಯಕ್ಷ ಸುಮತಿ, ಹುಣಸೂರು ಅಧ್ಯಕ್ಷ ಗಿರೀಶ್, ಹೆಚ್.ಡಿ.ಕೋಟೆ ಅಧ್ಯಕ್ಷ ಚಂದ್ರಕುಮಾರ್, ಟಿ.ನರಸೀಪುರ ಅಧ್ಯಕ್ಷ ಗಜೇಂದ್ರ, ಮೈಸೂರು ಉತ್ತರ ವಲಯದ ಅಧ್ಯಕ್ಷ ಮಂಜುನಾಥ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ನಾಗೇಶ್, ಜಿಲ್ಲಾ ಉಪಾಧ್ಯಕ್ಷ ರಘು ಎಸ್, ರೇಣುಕ, ಸಹ ಕಾರ್ಯದರ್ಶಿ ಮಂಜುನಾಥ್ ಮಮತಾ, ಸುಶೀಲ ಹಾಗೂ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರು ಹಾಜರಿದ್ದರು.

ವಿಜಯನಗರ 2ನೇ ಹಂತದ ರಿಂಗ್ ರಸ್ತೆಯಲ್ಲಿ ಸಿಗ್ನಲ್ ಲೈಟ್ ಅಳವಡಿಸಿದ್ದರೂ ಚಾಲೂ ಆಗಿಲ್ಲ





ದಿನ ನಿತ್ಯ ವಾಹನ ಚಾಲಕರು, ಸವಾರರು ಹೈರಾಣ

ಮೈಸೂರು,ಜೂ.18(ಎಂಕೆ)–ಮೈಸೂರಿನ ವಿಜಯನಗರ 2ನೇ ಹಂತದ ರಿಂಗ್ ರೋಡ್ ಜಂಕ್ಷನ್ (ಬಿಇಎಂಎಲ್ ಟೌನ್‌ಶಿಪ್ ಬಳಿ)ನಲ್ಲಿ ಟ್ರಾಫಿಕ್ ಸಿಗ್ನಲ್‌ಗೆ ಚಾಲನೆ ದೊರೆಯದೆ ವಾಹನಗಳ ದಟ್ಟಣೆಯಿಂದಾಗಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಎಸ್.ವಿ.ರೀಜೆನ್ಸಿ ಅಪಾರ್ಟ್‌ಮೆಂಟ್ ಸಮೀಪದ ಜಂಕ್ಷನ್ ಇದಾಗಿದ್ದು, ದಿನೇ ದಿನೇ ವಾಹನಗಳ ದಟ್ಟಣೆ ಹೆಚ್ಚಾಗುತ್ತಿರುವುದರ ಜೊತೆಗೆ ಸಿಗ್ನಲ್ ಇಲ್ಲದೆ ನಿತ್ಯವೂ ಒಂದಲ್ಲಾ ಒಂದು ಅಪಘಾತ ಸಂಭವಿಸುವಂತಾಗಿದೆ. ಈ ಜಂಕ್ಷನ್‌ನಲ್ಲಿ 7 ತಿಂಗಳ ಹಿಂದೆಯಷ್ಟೇ ಸಿಗ್ನಲ್ ಲೈಟ್ ಅಳವಡಿಸಿದ್ದರೂ ಸಿಗ್ನಲ್ ಲೈಟ್‌ಗಳು ಚಾಲು ಆಗದಿರುವುದರಿಂದ ವಾಹನ ಸವಾರರು ಪರಿತಪಿಸುವಂತಾಗಿದೆ. ಭಾರೀ ವಾಹನಗಳು ಎಲ್ಲೆಂದರಲ್ಲಿ ನುಗ್ಗುತ್ತಿದ್ದು ಕಾರು, ಸ್ಕೂಟರ್ ಸವಾರರು, ಸಾರ್ವಜನಿಕರು, ವಯೋವೃದ್ಧರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಯದಲ್ಲೇ ಜಂಕ್ಷನ್ ದಾಟಬೇಕಾದ ವಾತಾವರಣ ನಿರ್ಮಾಣವಾಗಿದೆ.

ಪ್ರಮುಖ 8 ರಸ್ತೆಗಳು ಕೂಡುವ ಈ ಜಂಕ್ಷನ್‌ನಲ್ಲಿ ಅಕ್ಕ–ಪಕ್ಕದಲ್ಲಿ ವಸತಿ ಸಮುಚ್ಚಯಗಳಿದ್ದು, ಜನಸಂಖ್ಯೆಯೂ ಹೆಚ್ಚಾಗಿದೆ. ರಿಂಗ್ ರಸ್ತೆಯಲ್ಲಿ ಖಾಸಗಿ ಮತ್ತು ಸಾರಿಗೆ ಬಸ್‌ಗಳು, ಟಿಪ್ಪರ್ ಲಾರಿಗಳು, ಟ್ರ್ಯಾಕ್ಟರ್‌ಗಳು ಹಾಗೂ ಟ್ರಕ್‌ಗಳು ಹೆಚ್ಚಾಗಿ ಸಂಚರಿಸಲಿದ್ದು, ಸಂಜೆಯಾಗುತ್ತಿದ್ದಂತೆ ವಾಹನ ದಟ್ಟಣೆ ಹೆಚ್ಚಾಗಿ ಇಡೀ ಜಂಕ್ಷನ್‌ನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗುತ್ತಿದೆ.

ಹಲವು ಬಾರಿ ಮನವಿ: ಎಸ್.ವಿ.ರೀಜೆನ್ಸಿ ಅಪಾರ್ಟ್‌ಮೆಂಟ್ ಸಮೀಪದ ಜಂಕ್ಷನ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಹಲವು ನಗರ ಪೊಲೀಸ್ ಆಯುಕ್ತರಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿಯೂ ಆ ಸಿಗ್ನಲ್ ಲೈಟ್‌ಗಳು ಯಾವಾಗ ಕಾರ್ಯಾರಂಭ ಮಾಡಲಿವೆ ಎಂಬುದನ್ನು ಚಾತಕ ಪಕ್ಷಿಯಂತೆ ಕಾಯುವಂತಾಗಿದೆ ಎಂದು ಎಸ್.ವಿ.ರೀಜೆನ್ಸಿ ಅಪಾರ್ಟ್‌ಮೆಂಟ್ ಓನರ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಪದಾಧಿಕಾರಿಗಳು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ತುರ್ತಾಗಿ ಗಮನಹರಿಸಬೇಕು: ಮೈಸೂರು ನಗರ ಪೊಲೀಸ್ ಇಲಾಖೆ ತುರ್ತಾಗಿ ಈ ಜಂಕ್ಷನ್‌ನಲ್ಲಾಗುತ್ತಿರುವ ವಾಹನ ದಟ್ಟಣೆ ಮತ್ತು ಅಪಘಾತಗಳನ್ನು ನಿಯಂತ್ರಿಸಬೇಕು. ಸಂಜೆ ವೇಳೆಯಂತೂ ಇಡೀ ಜಂಕ್ಷನ್ ವಾಹನಗಳಿಂದ ಆವರಿಸಲಿದ್ದು, ಸಿಗ್ನಲ್ ಲೈಟ್‌ನ ಮಾರ್ಗಸೂಚಿ ಇಲ್ಲದೆ ಎಲ್ಲಾ ಕಡೆಯಿಂದಲೂ ವಾಹನಗಳು ಬಂದು ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಕೂಡಲೇ ಸಂಚಾರ ಪೊಲೀಸರು ಗಮನಹರಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಕೋರಿದ್ದಾರೆ.

ಕನ್ನಡ ಚಳವಳಿ ಕೇಂದ್ರ ಸಮಿತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಪ್ರಶಸ್ತಿ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.18(ಎಂಕೆ)– ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಘದ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಸಮಾಜ ಸೇವಕ ಬಿ.ಆರ್.ನಟರಾಜ ಜೋಯಿಸ್, ಉದ್ಯಮಿ ಶ್ರೀದೇವಪ್ರಕಾಶ್, ಶಿಕ್ಷಣ ಕ್ಷೇತ್ರದ ಆದಿಶೇಷಗೌಡ, 'ಪತ್ರಕರ್ತ ಮಹೇಂದ್ರ ದೇವನೂರು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದಕ್ಕೂ ಮುನ್ನ ಪ್ರಸ್ತಾವಿಕವಾಗಿ ಮಾತನಾಡಿದ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ರಾಜ್ಯ ಸರ್ಕಾರ ರೈತರು ಹಾಗೂ ಇತರೆ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂದಕ್ಕೆ ಪಡೆದಿದೆ. ಆದರೆ, ಕನ್ನಡಪರ ಹೋರಾಟಗಾರರ ಪ್ರಕರಣಗಳನ್ನು ಮಾತ್ರ ಹಿಂದಕ್ಕೆ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಪಡೆದ ಮೈಸೂರಿಗರು ಅದೃಷ್ಟವಂತರು. ಆದರೆ, ನಾಲ್ವಡಿ ಅವರು ನತದೃಷ್ಟರು. ಅವರ ಜಯಂತಿ ಕಾರ್ಯಕ್ರಮದಲ್ಲಿ ಹೆಚ್ಚು ಮಂದಿ ಪಾಲ್ಗೊಳ್ಳದಿರುವುದು ಬೇಸರದ ಸಂಗತಿ. ಇಂದು ನೆಪ ಮಾತ್ರಕ್ಕೆ ಪ್ರಜಾಪ್ರಭುತ್ವ ಇದೆ. ಅದರೊಳಗೆ ರಾಜಪ್ರಭುತ್ವ ಎದ್ದು ಕಾಣಿಸುತ್ತಿದೆ. ಆದರೆ ನಾಲ್ವಡಿ ಅವರು ರಾಜಪ್ರಭುತ್ವದೊಳಗೆ ಪ್ರಜಾಪ್ರಭುತ್ವ ಜಾರಿಗೊಳಿಸಿದ ಮಹಾತ್ಮ ಎಂದು ಸ್ಮರಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ರಂಗಕರ್ಮಿ ರಾಜಶೇಖರ ಕದಂಬ, ಹೆಚ್.ಕೆ.ಅನಂತ, ದಾರಿಪುರ ಚಂದ್ರಶೇಖರ್, ಜೈಪ್ರಕಾಶ್, ನಾರಾಯಣರಾವ್, ರಂಗನಾಥ್ ಮತ್ತಿತರರಿದ್ದರು.

ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಸಚಿವ ಸ್ಥಾನಕ್ಕೆ ಆಗ್ರಹ



ಮೈಸೂರು, ಜೂ.18(ಎಂಕೆ)–ವೀರಶೈವ ಲಿಂಗಾಯತ ಸಮಾಜದ ಪ್ರಬಲ ಮಹಿಳಾ ನಾಯಕಿ ಹಾಗೂ ರಾಜ್ಯ ರಾಜಕಾರಣದಲ್ಲಿ ತಮ್ಮದೇ ಛಾಪು ಮೂಡಿಸಿರುವ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ರಾಜ್ಯ ಸಚಿವ ಸಂಪುಟ ವಿಸ್ತರಣೆ ವೇಳೆ ಸಚಿವ ಸ್ಥಾನ ನೀಡಿ, ಪ್ರಬಲ ಖಾತೆ ನೀಡ ಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ರಾಜ್ಯ ನಿರ್ದೇಶಕ ಕಂಚಮಳ್ಳಿ ಮಹೇಶ್‌ರೆಡ್ಡಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ, ಮಹಿಳಾ ಸಬಲೀಕರಣ ಹಾಗೂ ಜನಪರ ಆಡಳಿತಕ್ಕೆ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಇವರಿಗೆ ಆಡಳಿತಾತ್ಮಕ ಅನುಭವವಿದ್ದು, ಜನಪರ ಕಾರ್ಯವೈಖರಿಯಿಂದಲೇ ರಾಜ್ಯ ಮನೆ ಮಾತಾಗಿದ್ದಾರೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿ ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ಮಹಿಳೆಯರು, ಮಕ್ಕಳು ಹಾಗೂ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ಅನೇಕ ಯೋಜನೆ ಜಾರಿಗೊಳಿಸಿ ದ್ದಾರೆ. ಇವರ ಆಡಳಿತ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು, ಅವರ ಜನಸಂಪರ್ಕದ ಸಾಮರ್ಥ್ಯ, ಕಾಂಗ್ರೆಸ್ ಪಕ್ಷಕ್ಕೆ ಪ್ರಮುಖ ಶಕ್ತಿಯಾಗಿದೆ ಎಂದರು. ಕಾಂಗ್ರೆಸ್ ಮುಖಂಡ ಎಸ್.ಪ್ರದೀಪ್ ಕುಮಾರ್, ಮೂಗೂರು ನಂಜುಂಡಸ್ವಾಮಿ, ವೀರಶೈವ ಮೂರ್ತಿ, ಪ್ರಭುಸ್ವಾಮಿ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಪಿಎಂವಿಬಿಆರ್‌ವೈ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಬಿಡುಗಡೆ ಸಮಾರಂಭ



ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯ ಕ್ಷೇತ್ರೀಯ ಆಯುಕ್ತ (ಗ್ರೇಡ್–1) ಷಡಕ್ಷರ ರೆಡ್ಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.18(ವಿವಿಹೆಚ್)– ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ವಿಕ್ಷಿತ್ ಭಾರತ ರೋಜ್ಗಾರ್ ಯೋಜನೆಯ (ಪಿಎಂವಿಬಿಆರ್‌ವೈ) ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಬಿಡುಗಡೆ ಸಮಾರಂಭವನ್ನು ನಾಳೆ (ಶುಕ್ರವಾರ, ಜೂನ್ 19) ಮೈಸೂರಿನ ಪ್ರಾದೇಶಿಕ ಕಚೇರಿಯ ನೌಕರರ ಭವಿಷ್ಯನಿಧಿ ಸಂಘಟನೆ ವತಿಯಿಂದ (ಇಪಿಎಫ್‌ಒ) ಆಯೋಜಿಸಲಾಗಿದೆ ಎಂದು ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯ ಕ್ಷೇತ್ರೀಯ ಆಯುಕ್ತ (ಗ್ರೇಡ್–1) ಷಡಕ್ಷರ ರೆಡ್ಡಿ ತಿಳಿಸಿದರು.

ನಗರದ ಇಪಿಎಫ್‌ಒ ಕಚೇರಿಯಲ್ಲಿ ಗುರುವಾರ ಆಯೋಜಿಸಿದ್ದ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ನಗರದ ಗೋಕುಲಂನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ (ವಿವಿಸಿಇ) ಈ ಸಮಾರಂಭ ಆಯೋಜಿಸಲಾಗಿದೆ ಎಂದರು.

ಹೊಸ ಉದ್ಯೋಗಿಗಳಿಗೆ ಆರ್ಥಿಕ ನೆರವು ನೀಡುವುದು ಮತ್ತು ಹೊಸ ಉದ್ಯೋಗಾವಕಾಶ ಸೃಷ್ಟಿಸಲು ಉದ್ಯೋಗದಾತರನ್ನು ಪ್ರೋತ್ಸಾಹಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ದೇಶಾದ್ಯಂತ ಸುಮಾರು 200 ವಿವಿಧ ಕಡೆಗಳಲ್ಲಿ ಏಕಕಾಲದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಇದು ಅನುಷ್ಠಾನದ ನೋಡಲ್ ಏಜೆನ್ಸಿಯಾಗಿ ಇಪಿಎಫ್‌ಒ ಕಾರ್ಯನಿರ್ವಹಿಸುತ್ತಿದೆ ಎಂದು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಜ್ಞಾನ ಭವನದಲ್ಲಿ ಶುಕ್ರವಾರ ಸಂಜೆ 5.20ಕ್ಕೆ ನಡೆಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಹಾಗೂ ಒಟ್ಟಾರೆಯಾಗಿ 2,400 ಕೋಟಿ ರೂ. ಪ್ರೋತ್ಸಾಹ ಧನವನ್ನು ಫಲಾನುಭವಿಗಳಿಗೆ ನೇರ ವರ್ಗಾವಣೆ ಮೂಲಕ ಜಮಾ ಮಾಡಲಿದ್ದಾರೆ ಎಂದು ತಿಳಿಸಿದರು.

ಮೈಸೂರಲ್ಲಿ ಇಪಿಎಫ್‌ಒ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ, ಲೇಖಕ ಗಿರೀಶ್ ಲಿಂಗಣ್ಣ ಹಾಗೂ ವಿವಿಸಿಇ ಪ್ರಾಂಶುಪಾಲ ಪ್ರೊ.ಸದಾಶಿವೇಗೌಡ ಉಪಸ್ಥಿತರಿರಲಿದ್ದಾರೆ ಎಂದು ವಿವರಿಸಿದರು.

ಮುಂದುವರಿದು, ಈ ಯೋಜನೆಯಡಿ, ಅರ್ಹ ಸಂಸ್ಥೆಗಳಲ್ಲಿ ಸೇರುವ ಹೊಸ ಉದ್ಯೋಗಿಗಳಿಗೆ ವರ್ಷಕ್ಕೆ ಗರಿಷ್ಠ 15,000 ವರೆಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. ಉದ್ಯೋಗ ಸೃಷ್ಟಿ ಮಾಡುವ ಸಂಸ್ಥೆಗಳಿಗೂ ಪ್ರೋತ್ಸಾಹ ನೀಡಲಾಗುತ್ತದೆ. 50 ಮಂದಿಯ ವರೆಗೆ ಉದ್ಯೋಗಿಗಳ ಹೊಂದಿರುವ ಸಂಸ್ಥೆಗಳು ಕನಿಷ್ಠ 2 ಹೊಸ ಉದ್ಯೋಗಿಗಳನ್ನು, 50ಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು ಕನಿಷ್ಠ 5 ಹೊಸ ಉದ್ಯೋಗಿಗಳನ್ನು ನೇಮಕ ಮಾಡಬೇಕು. ಅರ್ಹ ಸಂಸ್ಥೆಗಳು ಪ್ರತಿ ಹೆಚ್ಚುವರಿ ಉದ್ಯೋಗಿಗೆ ತಿಂಗಳಿಗೆ ಗರಿಷ್ಠ 3,000 ವರೆಗೆ ಪ್ರೋತ್ಸಾಹ ಧನ ಪಡೆಯಬಹುದು.

ಈ ಪ್ರೋತ್ಸಾಹ ಧನವನ್ನು ಆರು ತಿಂಗಳಿಗೆ ಒಮ್ಮೆ ನೇರ ಲಾಭ ವರ್ಗಾವಣೆ ಮೂಲಕ ನೀಡಲಾಗುತ್ತದೆ. ಈ ಯೋಜನೆಯಲ್ಲಿ ಹಣಕಾಸು ಸಾಕ್ಷರತೆಗೂ ಮಹತ್ವ ನೀಡಲಾಗಿದೆ ಎಂದರು.

ಕ್ಷೇತ್ರೀಯ ಕಚೇರಿಯ ವ್ಯಾಪ್ತಿಯಲ್ಲಿ 3,351 ಸಂಸ್ಥೆಗಳು (ಉದ್ಯೋಗದಾತರು) ಹಾಗೂ 6.48 ಲಕ್ಷ ಉದ್ಯೋಗಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇವರಲ್ಲಿ 30ರಿಂದ 40 ಕಂಪನಿಗಳ ಪ್ರತಿನಿಧಿಗಳು, ಸುಮಾರು 400 ಮಂದಿ ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಹಾಗೂ 700 ಮಂದಿ ಉದ್ಯೋಗಿಗಳಿಗೆ 41 ಲಕ್ಷ ಪ್ರೋತ್ಸಾಹ ಧನ ದೊರೆಯಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಕ್ಷೇತ್ರೀಯ ಆಯುಕ್ತ (ಗ್ರೇಡ್–2) ಮುರಳೀಧರ್ ಉಪಸ್ಥಿತರಿದ್ದರು.

ಜೆಎಸ್‌ಎಸ್ ಮಹಿಳಾ ಪಿಯು ಕಾಲೇಜಲ್ಲಿ ಪ್ರತಿಭಾ ಪುರಸ್ಕಾರ



ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಜೂ.18–ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಜಿಲ್ಲೆ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತೆ ಶ್ರೀಮತಿ ಟಿ.ರಮ್ಯ ಮಾತನಾಡಿ, ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ನಿರ್ದಿಷ್ಟ ಗುರಿ, ದೃಢ ಸಂಕಲ್ಪವಿದ್ದರೆ ಮಾತ್ರ ಯಶಸ್ಸು ಸಾಧ್ಯ ಎಂದು ಹೇಳಿದ ಅವರು ಯಾವ ಕೋರ್ಸ್ ಆಯ್ಕೆ ಮಾಡಿದರೆ ಉದ್ಯೋಗಗಳನ್ನು ಪಡೆಯಬಹುದು ಎಂಬ ಪ್ರಶ್ನೆಗಳಿಗೆ ಗುರು–ಹಿರಿಯರ ಮಾರ್ಗದರ್ಶನ, ಪೋಷಕರ ಬೆಂಬಲ ಬಹಳ ಮುಖ್ಯ ಎಂಬುದನ್ನು ಮನವರಿಕೆ ಮಾಡಿದರು. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯವಾಗಿ ಕಾಲಹರಣ ಮಾಡದೆ ಅದನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಮಾಹಿತಿಗಾಗಿ ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಬದುಕು ಸುಂದರವಾಗುವಲ್ಲಿ ಶೈಕ್ಷಣಿಕ ಹಂತದಲ್ಲಿ ನಾವು ಪಡೆಯುವ ಅತ್ಯುನ್ನತ ಸ್ಥಾನ ಕೂಡ ಮುಖ್ಯ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅತ್ಯುನ್ನತ ಶ್ರೇಣಿ ಪಡೆಯುವುದು ಸಾಮಾನ್ಯ. ಆದರೆ ಇಂದು ಮಾನವಿಕ ಜಗತ್ತನ್ನು ನಿರ್ಮಿಸುವ ಕಲಾ ವಿಭಾಗದಲ್ಲಿ ಬಹಳ ಸಂಖ್ಯೆಯಲ್ಲಿ ಅತ್ಯುನ್ನತ ಸ್ಥಾನ ಪಡೆದಿರುವುದು ವಿಶೇಷವಾಗಿದೆ ಎಂದರು.

ಯಶಸ್ಸು ಗಳಿಸಲು ನಮಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸ್ಫೂರ್ತಿ, ಪ್ರೇರಣೆ ನೀಡಿದವರನ್ನು ನೆನೆದುಕೊಳ್ಳುವುದು ಬಹಳ ಮುಖ್ಯ. ಆಮೆ ಮತ್ತು ಮೊಲದ ಕಥೆ ಹೇಳುವ ಮೂಲಕ ನಮ್ಮ ಗುರಿ ಸಾಧನೆಯಾಗುವವರೆಗೂ ಮೈಮರೆಯಬಾರದು ಎಂಬುದನ್ನು ಅರ್ಥೈಸಿದರು. ಪರಮಪೂಜ್ಯರ ದೂರದೃಷ್ಟಿಯಂತೆ ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆದು ಬೌದ್ಧಿಕ ಸಾಮರ್ಥ್ಯ ಹೊಂದಿ ಸಮಾಜಮುಖಿಯಾಗುವ ಮೂಲಕ ಸಾರ್ಥಕ ಜೀವನ ಮಾಡಬೇಕೆಂದು ಕಿವಿಮಾತು ಹೇಳಿದರು.

ಕಲಾ ವಿಭಾಗದಲ್ಲಿ 600ಕ್ಕೆ 591 ಅಂಕ ಗಳಿಸಿ ರಾಜ್ಯಕ್ಕೆ 8ನೇ ರ್‍ಯಾಂಕ್ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಕಾಲೇಜಿಗೆ ಕೀರ್ತಿ ತಂದಿರುವ ಮಾನ್ಯಶ್ರೀ ಅವರನ್ನು ಸನ್ಮಾನಿಸಲಾಯಿತು. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿ ಪಡೆದ 107 ವಿದ್ಯಾರ್ಥಿನಿಯರಿಗೆ ಸ್ಮರಣಿಕೆ ನೀಡುವುದರ ಮೂಲಕ ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಟಿ.ಗುರುಪಾದಸ್ವಾಮಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮಾರಂಭದಲ್ಲಿ ಪದವಿ ಕಾಲೇಜಿನ ಪ್ರಾಚಾರ್ಯ ಡಾ.ರೇಚಣ್ಣ ಹಾಗೂ ಪ್ರತಿಭಾ ಪುರಸ್ಕಾರ ಸಮಿತಿ ಸಂಚಾಲಕಿ ಮಂಜುಳ ಉಪಸ್ಥಿತರಿದ್ದರು. ಪ್ರತಿಭಾ ಪುರಸ್ಕೃತರಾದ ವಿದ್ಯಾರ್ಥಿನಿಯರು ತಮ್ಮ ಅನಿಸಿಕೆಗಳಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿನಿಯರಿಗೆ ಗೌರವ ಸಿಗುತ್ತದೆ. ಶಿಕ್ಷಣದ ಜೊತೆಗೆ ಬದುಕಿನ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತಹ ಅವಕಾಶಗಳನ್ನು ಸಂಸ್ಥೆಯು ಕಲ್ಪಿಸಿಕೊಟ್ಟಿದೆ ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರು, ವಿದ್ಯಾರ್ಥಿನಿಯರು ಹಾಗೂ ಪೋಷಕರು ಭಾಗವಹಿಸಿದ್ದರು.

ಮೈಸೂರು ಮಿತ್ರ ಶುಕ್ರವಾರ 19 ಜೂನ್ 2026

ಒಣಗುತ್ತಿರುವ ಬೆಳೆಗಳ ರಕ್ಷಣೆಗೆ ನೀರು ಹರಿಸಿ

ಇಲ್ಲದಿದ್ದರೇ ಪರಿಹಾರ ಘೋಷಿಸಿ: ಮಾಜಿ ಸಚಿವ ಸಿಎಸ್‌ಪಿ ಒತ್ತಾಯ

ಪಾಂಡವಪುರ, ಜೂ.18(ಲೋಕೇಶ್)– ಕೆಆರ್‌ಎಸ್ ಅಣೆಕಟ್ಟೆಯ ನೀರು ನಿರ್ವಹಣೆ ಮಾಡುವಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ಜಿಲ್ಲೆಯಲ್ಲಿ ಒಣಗುತ್ತಿರುವ ಬೆಳೆಗಳ ರಕ್ಷಣೆಗಾಗಿ ಒಂದು ಕಟ್ಟು ನಾಲೆಗೆ ನೀರು ಹರಿಸಿ ಇಲ್ಲವಾದರೆ ಬೆಳೆದಿರುವ ಬೆಳೆಗಳಿಗೆ ಸೂಕ್ತ ಪರಿಹಾರ ಘೋಷಿಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಜಿಲ್ಲಾಡಳಿತವನ್ನು ಒತ್ತಾಯಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಸರಿಯಾದ ಸಮಯಕ್ಕೆ ಅಣೆಕಟ್ಟೆ ಭರ್ತಿಯಾಯಿತು. ಆದರೆ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳು ನೀರನ್ನು ವ್ಯವಸ್ಥಿತವಾದ ರೀತಿಯಲ್ಲಿ ಬಳಕೆ ಮಾಡುವಲ್ಲಿ ವಿಫಲವಾಗಿದ್ದಾರೆ. ಇದರಿಂದಾಗಿ ಅಣೆಕಟ್ಟೆಯಲ್ಲಿ ನೀರಿನ ಸಾಮರ್ಥ್ಯ ಕುಸಿತವಾಗಿ ನೀರಿನ ಸಮಸ್ಯೆ ತಲೆದೋರಿದೆ ಎಂದು ಕಿಡಿಕಾರಿದರು.

ತಮಿಳುನಾಡಿಗೆ ನೀರು ಹರಿಸಬೇಕಾದಂತಹ ಸಂದರ್ಭ ಕೆಆರ್‌ಎಸ್ ಅಣೆಕಟ್ಟೆ ವ್ಯಾಪ್ತಿಯ ಕಬಿನಿ, ಹಾರಂಗಿ ಹಾಗೂ ಹೇಮಾವತಿ ಅಣೆಕಟ್ಟೆಗಳಿಂದ ನೀರು ಹರಿಸಿಕೊಂಡು ನೀರು ಹರಿಸಿದ್ದೇವೆ. ಬೆಂಗಳೂರಿಗೆ ಕುಡಿಯುವ ನೀರಿನ ಪೂರೈಕೆ ಮಾಡುವುದನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಪ್ರಮಾಣದ ನೀರನ್ನು ಅಣೆಕಟ್ಟೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳಲಾಗುತ್ತಿತ್ತು. ಹೇಮಾವತಿ ಅಣೆಕಟ್ಟೆಯಲ್ಲಿ ಇನ್ನೂ 17 ಟಿಎಂಸಿ ನೀರು ಸಂಗ್ರಹವಾಗಿದೆ. ಅಲ್ಲಿಂದ ನೀರು ಹರಿಸಿ ಕೊಂಡು ಈ ಭಾಗದ ರೈತರ ಬೆಳೆಗಳ ರಕ್ಷಣೆಗೆ ನೀರು ಹರಿಸಬೇಕು ಎಂದು ಆಗ್ರಹಿಸಿದರು.

ಹಾಸನ, ಮಂಡ್ಯ ಹಾಗೂ ತುಮಕೂರಿನ ಕೆಲವು ಭಾಗಗಳ ನೀರಾವರಿ ಸೌಲಭ್ಯಕ್ಕಾಗಿ ಹೇಮಾವತಿ ಅಣೆಕಟ್ಟೆ ನಿರ್ಮಿಸಲಾಗಿದೆ. ಆದರೆ, ಈ ಬಾರಿ ಹೇಮಾವತಿ ನೀರು ಹರಿಸುವುದರಲ್ಲೂ ದುರ್ಬಳಕೆ ಮಾಡಿ ರಾಜಕೀಯ ಮಾಡಿದ್ದಾರೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ನೀರು ಹರಿಸುವುದಾಗಿ ಹೇಳಿ ಕೆಲವು ರಾಜಕಾರಣಿಗಳು ತುಮಕೂರು ಜಿಲ್ಲೆಯ ಭಾಗಕ್ಕೆ ಶೇ.90ರಷ್ಟು ನೀರು ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ನಮ್ಮ ಭಾಗದ ರೈತರಿಗೆ ಅನ್ಯಾಯವಾಗಿದೆ ಎಂದು ಆಕ್ರೋಶ ಹೊರ ಹಾಕಿದರು.

ಜಿಲ್ಲಾಡಳಿತ ರೈತರಿಗೆ ಸರಿಯಾದ ಮಾಹಿತಿ ನೀಡದೆ ನಾಲೆಗೆ ನೀರು ಹರಿಸಿದ್ದಾರೆ. ಜಿಲ್ಲೆಯಲ್ಲಿ ಕಬ್ಬು ಸೇರಿದಂತೆ ಸಾಕಷ್ಟು ಬೆಳೆಗಳು, ತೋಟಗಾರಿಕೆ ಬೆಳೆಗಳು ಒಣಗುತ್ತಿವೆ. ಹಾಗಾಗಿ ಜಿಲ್ಲಾಡಳಿತ ರೈತರಿಗೆ ಸ್ಪಷ್ಟವಾದ ಮಾಹಿತಿ ನೀಡಿ, ಒಣಗುತ್ತಿರುವ ಬೆಳೆಗಳ ರಕ್ಷಣೆಗೆ ನೀರು ಹರಿಸಿ, ಇಲ್ಲವಾದರೆ ಬೆಳೆಗಳ ಪರಿಹಾರ ಘೋಷಿಸಿ, ಇದೀಗ ಜಿಲ್ಲೆಯಲ್ಲಿ ಯಾವುದೇ ಉಸ್ತುವಾರಿ ಮಂತ್ರಿಗಳು ಇಲ್ಲದಿರುವುದರಿಂದ ಜಿಲ್ಲಾಧಿಕಾರಿಗಳೇ ಹೆಚ್ಚಿನ ಹೊಣೆ ಹೊರಬೇಕು. ಇಲ್ಲವಾದರೆ ಜಿಲ್ಲೆಯ ರೈತರು ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೊಂದು ದಲ್ಲಾಳಿಗಳ ಸರ್ಕಾರ: ಜಿಲ್ಲೆಯಲ್ಲಿ ಬೇಸಿಗೆಯ ಭತ್ತದ ಬೆಳೆ ಕಟಾವು ಮುಕ್ತಾಯ ಹಂತಕ್ಕೆ ಬರುತ್ತಿದ್ದರೂ, ಈವರೆಗೂ ರೈತ ಸಂಪರ್ಕ ಕೇಂದ್ರಗಳನ್ನು ಆರಂಭಿಸಿಲ್ಲ. ಇದರಿಂದಾಗಿ ರೈತರ ಭತ್ತ ದಲ್ಲಾಳಿಗಳ ಪಾಲಾಗುತ್ತಿದ್ದು, ಈ ಸರ್ಕಾರ ದಲ್ಲಾಳಿಗೆ ಅನುಕೂಲ ಮಾಡಿಕೊಡುವ ದಲ್ಲಾಳಿ ಸರ್ಕಾರವಾಗಿದೆ ಎಂದು ಕಿಡಿಕಾರಿದರು.

ಗೋಷ್ಠಿಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಆರ್.ಸೋಮಶೇಖರ್, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಚೇತನ್ ಸೇರಿದಂತೆ ಇದ್ದರು.

ಕೆಸ್ತೂರು ಪೊಲೀಸರ ಕಾರ್ಯಾಚರಣೆ

60 ಲಕ್ಷ ಮೌಲ್ಯದ 111 ಕೆಜಿ ಗಾಂಜಾ ವಶ

ಆಂಧ್ರ ಮೂಲದ ಓರ್ವನ ಬಂಧನ: ಎಸ್ಪಿ ಡಾ.ವಿ.ಜೆ.ಶೋಭಾರಾಣಿ ಮಾಹಿತಿ

ಮಂಡ್ಯ, ಜೂ.18– ಮದ್ದೂರು ತಾಲೂಕಿನ ಕೆಸ್ತೂರು ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ 60 ಲಕ್ಷ ರೂ. ಮೌಲ್ಯದ 111 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದು, ಓರ್ವ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣ ಸಂಬಂಧ ಆಂಧ್ರ ಪ್ರದೇಶದ ಮದನಪಲ್ಲಿಯ ಶ್ರೀನಿವಾಸಲು ಎಂಬಾತನನ್ನು ಬಂಧಿಸಲಾಗಿದೆ ಎಂದರು.

ಬುಧವಾರ ಸಂಜೆ 5.30ರಲ್ಲಿ ಡಿವೈಎಸ್ಪಿಗೆ ಯಶವಂತ್ ಕುಮಾರ್ ಅವರಿಗೆ ಬಂದ ಖಚಿತ ಮಾಹಿತಿ ಆಧರಿಸಿ ಕೆಸ್ತೂರು ಠಾಣೆ ಪೊಲೀಸರನ್ನು ಒಳಗೊಂಡ ವಿಶೇಷ ತಂಡ ರಚಿಸಲಾಗಿತ್ತು. ಅದರಂತೆ ತಡರಾತ್ರಿ ಕೆಸ್ತೂರು ಬಳಿಯ ತುಮಕೂರು–ಮದ್ದೂರು ರಾಜ್ಯ ಹೆದ್ದಾರಿ–33ರಲ್ಲಿ ಅನುಮಾನಾಸ್ಪದ ವಾಹನಗಳ ತಪಾಸಣೆ ನಡೆಸುವಾಗ ಕುಣಿಗಲ್ ಕಡೆಯಿಂದ ಮದ್ದೂರು ಕಡೆಗೆ ಹೋಗುತ್ತಿದ್ದ (ಕೆಎ.03, ಎಂಪಿ.1635) ಮಾರುತಿ ಸುಜುಕಿ ಎಸ್‌ಎಕ್ಸ್4 ಕಾರನ್ನು ತಡೆದು ಪರಿಶೀಲಿಸಿದಾಗ ಕಾರಿನ ಡಿಕ್ಕಿಯಲ್ಲಿ 5 ಪ್ಲಾಸ್ಟಿಕ್ ಚೀಲದಲ್ಲಿ ತುಂಬಿದ್ದ 21 ಪ್ಲಾಸ್ಟಿಕ್ ಪಾಕೇಟ್‌ಗಳಲ್ಲಿ ಗಾಂಜಾ ಇರುವುದು ಪತ್ತೆಯಾಗಿದ್ದು, ಕೂಡಲೇ ಆರೋಪಿ ಶ್ರೀನಿವಾಸಲು ಹಾಗೂ ಕಾರನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದರು.



ಸ್ಥಳಕ್ಕೆ ಎಸ್ಪಿ ಡಾ.ವಿ.ಜೆ.ಶೋಭಾರಾಣಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಒರಿಸ್ಸಾದಿಂದ ಜಿಲ್ಲೆಗೆ ಸಾಗಾಟ: 111 ಕೆಜಿ ಗಾಂಜಾವನ್ನು ಒರಿಸ್ಸಾದಿಂದ ಅಕ್ರಮವಾಗಿ ತುಮಕೂರು ಮೂಲಕ ಮಂಡ್ಯ ಕಡೆಗೆ ಸಾಗಿಸಲಾಗುತ್ತಿತ್ತು. ಕೆಲ ವ್ಯಕ್ತಿಗಳು ತುಮಕೂರಿನಲ್ಲಿ ಗಾಂಜಾ ಪಡೆದುಕೊಳ್ಳಲು ಬರುತ್ತಿದ್ದರು. ಆದರೆ ಕಾರಣಾಂತರಗಳಿಂದ ನಿನ್ನೆ ವಾಪಸ್ ಹೋಗಿದ್ದಾರೆ. ಇದರಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದಾನೆ. ಆತ ಯಾರು ಎಂದು ತಿಳಿದುಬಂದಿಲ್ಲ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ನಾಗಮಂಗಲಕ್ಕೆ ಸೇರಿದ ಕಾರು: ವಶಪಡಿಸಿಕೊಂಡಿರುವ (ಕೆಎ.03, ಎಂಪಿ.1635) ಮಾರುತಿ ಸುಜುಕಿ ಎಸ್‌ಎಕ್ಸ್4 ಸಿಲ್ವರ್ ಕಲರ್ ಕಾರು ನಾಗಮಂಗಲದ ವ್ಯಕ್ತಿಯೊಬ್ಬರಿಗೆ ಸೇರಿದ್ದು ಎಂದು ತಿಳಿದು ಬಂದಿದೆ. ಇದರ ಬಗ್ಗೆ ಮತ್ತಷ್ಟು ತನಿಖೆ ನಡೆಯುತ್ತಿದ್ದು, ಪ್ರಕರಣದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬುದು ತಿಳಿದು ಬರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ಸಿ.ಈ. ತಿಮ್ಮಯ್ಯ, ಡಿವೈಎಸ್ಪಿ ಯಶವಂತ್ ಕುಮಾರ್ ಇದ್ದರು.

ಗಾಂಜಾ ಗಿಡ ಪತ್ತೆ ಮಾಲೀಕರಿಗೆ ಮಾಹಿತಿ ಇಲ್ಲ: ಮಂಡ್ಯ ತಾಲೂಕಿನ ತಗ್ಗಹಳ್ಳಿ ಗ್ರಾಮದ ಕಬ್ಬಿನ ಗದ್ದೆಯಲ್ಲಿ ಗಾಂಜಾ ಗಿಡ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ಗದ್ದೆಯಲ್ಲಿ ಎರಡು ಗಾಂಜಾ ಗಿಡ ಪತ್ತೆಯಾಗಿತ್ತು. ಬೇರೆಯವರು ಹಾಕಿರುವ ಮಾಹಿತಿ ಇದೆ. ಇದರಲ್ಲಿ ಜಮೀನಿನ ಮಾಲೀಕರಿಗೆ ಗಾಂಜಾ ಗಿಡದ ಬಗ್ಗೆ ಜ್ಞಾನ ಇಲ್ಲ. ಆದ್ದರಿಂದ ತನಿಖೆ ನಡೆಯುತ್ತಿದ್ದು, ನಂತರ ಗೊತ್ತಾಗಲಿದೆ ಎಂದು ಎಸ್ಪಿ ಶೋಭಾರಾಣಿ ತಿಳಿಸಿದರು.

ವೈದ್ಯರು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಿ

ಜಿಲ್ಲಾಧಿಕಾರಿ ಡಾ.ಕುಮಾರ ಕಟ್ಟುನಿಟ್ಟಿನ ಸೂಚನೆ

ಮಂಡ್ಯ, ಜೂ.18– ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯರು ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕು. ಎಲ್ಲಾ ವೈದ್ಯರು ಮತ್ತು ಸಿಬ್ಬಂದಿ ನಿಗದಿಪಡಿಸಿದ ಸಮಯಕ್ಕೆ ಆಸ್ಪತ್ರೆಗೆ ಬರಬೇಕು. ಒಪಿಡಿ ಸೇವೆ ಬೆಳಗ್ಗಿನ ಅವಧಿಯಲ್ಲಿ ರೋಗಿಗಳಿಗೆ ಯಾವುದೇ ವಿಳಂಬವಿಲ್ಲದೆ ತಪಾಸಣೆ ಆರಂಭಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ವೈದ್ಯರು ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕು. ವೈದ್ಯರು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಕರ್ತವ್ಯದ ಸಮಯದಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಲು ಮಿಮ್ಸ್ ಆಡಳಿತಾಧಿಕಾರಿ ಹಾಗೂ ನಿರ್ದೇಶಕರು ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಈ ಸಂಬಂಧ ಆಸ್ಪತ್ರೆಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಯಾವುದೇ ರೀತಿಯ ತೊಂದರೆ ಆಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಸೂಚಿಸಿದರು.



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ವೈದ್ಯರು ರೋಗಿಗಳ ಆರೋಗ್ಯದ ತುರ್ತು ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಎಲ್ಲಾ ವೈದ್ಯಕೀಯ ವರದಿಗಳನ್ನು ವಿಳಂಬವಿಲ್ಲದೆ ನೀಡಬೇಕು. ರೋಗಿಗಳ ಸಂಬಂಧಿಕರಿಗೆ ಕೈ ಗೆಟುಕುವ ದರದಲ್ಲಿ ವಸತಿ ಒದಗಿಸುವ ಆರೋಗ್ಯ ಧಾಮ ಸೌಲಭ್ಯಗಳ ಪರಿಣಾಮಕಾರಿ ನಿರ್ವಹಣೆ ಮತ್ತು ಪಾರದರ್ಶಕತೆ ಕಾಪಾಡಿಕೊಳ್ಳಬೇಕು ಎಂದರು.

ಬಡ ಮತ್ತು ಮಧ್ಯಮ ವರ್ಗದ ರೋಗಿಗಳಿಗೆ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆ ಲಭ್ಯವಿದೆ. ಈ ಯೋಜನೆಯಡಿ ಸೌಲಭ್ಯಗಳನ್ನು ನೀಡುವಂತೆ ಅಗತ್ಯ ಕ್ರಮವಹಿಸಬೇಕು. ಮಿಮ್ಸ್‌ನಲ್ಲಿ ಆಡಳಿತಾತ್ಮಕ ಸುಧಾರಣೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತು ರೋಗಿಗಳಿಗೆ ದೊರೆಯುವ ಚಿಕಿತ್ಸೆಯ ಗುಣಮಟ್ಟ ಚೆನ್ನಾಗಿರಬೇಕು ಎಂದು ತಿಳಿಸಿದರು.

ಮಿಮ್ಸ್ ಆವರಣದಲ್ಲಿ ನಡೆಯುತ್ತಿರುವ ಬಾಕಿ ಉಳಿದಿರುವ ಸಿವಿಲ್ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಮತ್ತು ರೋಗಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳನ್ನು ಬಲಪಡಿಸಲು ಅಧಿಕಾರಿಗಳಿಗೆ ತಿಳಿಸಿದ ಜಿಲ್ಲಾಧಿಕಾರಿಗಳು ಮಿಮ್ಸ್‌ನಲ್ಲಿ ಪ್ರಸ್ತಾವಿತ ಕ್ಯಾನ್ಸರ್ ಕೇರ್ ಸೆಂಟರ್ ಅನ್ನು ಶೀಘ್ರವಾಗಿ ಆರಂಭಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು.

ಆಸ್ಪತ್ರೆ ತಾಂತ್ರಿಕ ಉನ್ನತೀಕರಣದ ಭಾಗವಾಗಿ ವಿದ್ಯುತ್ ಲೋಡ್ ಸಾಮರ್ಥ್ಯ ಹೆಚ್ಚಿಸಲಾಗಿದೆ ಎಂದು ಸಭೆಯಲ್ಲಿ ತಿಳಿದ ಜಿಲ್ಲಾಧಿಕಾರಿಗಳು ಆಸ್ಪತ್ರೆಯಲ್ಲಿ ಔಷಧಗಳು, ತುರ್ತು ಚಿಕಿತ್ಸಾ ಉಪಕರಣಗಳು ಹಾಗೂ ರೋಗ ಪತ್ತೆ ಪರೀಕ್ಷೆಗಳು (ಲ್ಯಾಬ್ ಟೆಸ್ಟ್) ರೋಗಿಗಳಿಗೆ ಸಿಗುವಂತೆ ಅಗತ್ಯ ಕ್ರಮವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಿರ್ದೇಶಕ ಡಾ.ಪಿ. ನರಸಿಂಹಸ್ವಾಮಿ, ಮಿಮ್ಸ್ ಆಸ್ಪತ್ರೆ ಮುಖ್ಯ ಆಡಳಿತಾಧಿಕಾರಿ ಕೃಷ್ಣ ಕುಮಾರ್, ನಿರ್ಮಿತಿ ಕೇಂದ್ರದ ಯೋಜನಾಧಿಕಾರಿ ಜಯಪ್ರಕಾಶ್ ಹಾಗೂ ಮಿಮ್ಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾನ್‌ಸ್ಟೇಬಲ್ ಮೇಲೆ ಹಲ್ಲೆ: ಆರೋಪಿ ಕಾಲಿಗೆ ಗುಂಡು

ಹಲಗೂರು, ಜೂ.18– ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರು ನಡೆಸುವ ವೇಳೆ ಪೊಲೀಸ್ ಸಿಬ್ಬಂದಿ ಮೇಲೆ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿ ಕಾಲಿಗೆ ಕಿರುಗಾವಲು ಪೊಲೀಸ್ ಠಾಣೆ ಎಸ್‌ಐ ಡಿ.ರವಿಕುಮಾರ್ ಗುಂಡು ಹಾರಿಸಿರುವ ಘಟನೆ ಗುರುವಾರ ಸಂಜೆ ನಡೆದಿದೆ.



ಸಿದ್ದರಾಜು

ಮಳವಳ್ಳಿ ತಾಲೂಕಿನ ಭೀಮನಹಳ್ಳಿ ಗ್ರಾಮದ ಮಹೇಶ್ (34) ಎಂಬಾತ ಮಹಿಳೆಗೆ ಮೊಬೈಲ್‌ನಲ್ಲಿ ಮೆಸೇಜ್ ಕಳುಹಿಸಿದ್ದಾನೆ ಎಂಬ ಕಾರಣಕ್ಕೆ ಆತನನ್ನು ನಾಲ್ವರು ಆರೋಪಿಗಳು ಚಾಕುವಿನಿಂದ ಇರಿದು ಹಾಗೂ ದೊಣ್ಣೆಗಳಿಂದ ಹೊಡೆದು ಹತ್ಯೆ ಮಾಡಿದ್ದರು. ಈ ಸಂಬಂಧ ರಾಮನಗರ ಜಿಲ್ಲೆಯ ಐಜೂರು ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿ ಶೀಟರ್ ಸಿದ್ದರಾಜು ಅಲಿಯಾಸ್ ಸೀಜರ್ ಸಿದ್ದು, ರಾಜೇಶ್ ಸೇರಿದಂತೆ ನಾಲ್ವರನ್ನು ಕಿರುಗಾವಲು ಪೊಲೀಸರು ಬಂಧಿಸಿದ್ದರು.

ಕೊಲೆ ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಹುಲ್ಲೇಗಾಲ ರಾಷ್ಟ್ರೀಯ ಹೆದ್ದಾರಿ 948ರ ಸಮೀಪದ ಕಾಲುವೆ ಬಳಿ ಎಸೆದು ಹೋಗಿರುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ಪೊಲೀಸರು ಗುರುವಾರ ಸಂಜೆ ಆರೋಪಿ ಸಿದ್ದರಾಜುವನ್ನು ಸ್ಥಳ ಮಹಜರಿಗೆ ಕರೆದುಕೊಂಡು ಹೋಗಿದ್ದರು. ಈ ವೇಳೆ ಆರೋಪಿ ಬಹಿರ್ದೆಸೆಗೆ ಹೋಗುವುದಾಗಿ ಹೇಳಿ ರಸ್ತೆ ಬದಿಯಲ್ಲಿ ಬಿದ್ದಿದ್ದ ಬಿಯರ್ ಬಾಟಲ್‌ನಿಂದ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಪ್ರಭುಸ್ವಾಮಿ ಅವರ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ತಕ್ಷಣ ಎಚ್ಚೆತ್ತ ಎಸ್‌ಐ ಡಿ.ರವಿಕುಮಾರ್ ಅವರು ಮೊದಲು ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದರೂ, ಆರೋಪಿ ಓಡಲು ಯತ್ನಿಸಿದ ಹಿನ್ನೆಲೆಯಲ್ಲಿ ಕಾಲಿಗೆ ಗುಂಡು ಹಾರಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಆರೋಪಿ ಸಿದ್ದರಾಜು ಹಾಗೂ ಪೊಲೀಸ್ ಸಿಬ್ಬಂದಿ ಪ್ರಭುಸ್ವಾಮಿ ಅವರಿಗೆ ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಲ್ಲದೆ, ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ಸ್ಥಳಕ್ಕೆ ಎಸ್ಪಿ ವಿ.ಜೆ.ಶೋಭರಾಣಿ, ಡಿವೈಎಸ್ಪಿ ಯಶವಂತ್ ಕುಮಾರ್, ಸಿಪಿಐ ಬಿ.ಎಸ್.ಶ್ರೀಧರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಂಗನವಾಡಿ ಕಾರ್ಯಕರ್ತರು, ಸಹಾಯಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ನಾಗಮಂಗಲ: ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿರುವ 9 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 97 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಗೌರವಧನ ಸೇವೆಯ ಆಧಾರದ ಮೇಲೆ ಭರ್ತಿ ಮಾಡಲು 19 ರಿಂದ 35 ವರ್ಷದೊಳಗಿನ ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಂದ ಆಫ್‌ಲೈನ್ (ಭೌತಿಕವಾಗಿ) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜೂ.29 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ.

ಒಂದನೇ ಪುಟದಿಂದ

ಅಡ್ಡ ಮತದಾನ; ಕಾಂಗ್ರೆಸ್‌ಗೆ ವರದಾನ



ಹರಿಪ್ರಸಾದ್ ಮೋಹನ್ ಬಿ.ಎಸ್. ಶಿವಣ್ಣ ತಿಪ್ಪಣ್ಣಪ್ಪ ವಿನಯ್‌ಕಾರ್ತಿಕ್

14 ಮತ ಗಳಿಸಿದ್ದಾರೆ. ಈ ಮೂಲಕ ಜೆಡಿಎಸ್‌ನ ನಾಲ್ವರು ಮತ್ತು ಬಿಜೆಪಿಯ ಏಳು ಶಾಸಕರು ಅಡ್ಡ ಮತದಾನ ಮಾಡಿದ್ದರೆ, ಬಿಜೆಪಿಯ ಒಂದು ಮತ ಅನರ್ಹಗೊಂಡಿದೆ.

5ನೇ ಅಭ್ಯರ್ಥಿಗೆ ಅಧಿಕ ಮತ: ಅಲ್ಲದೆ, ಕಾಂಗ್ರೆಸ್‌ನ ಎಲ್ಲಾ ಸದಸ್ಯರು ತಮ್ಮ 2ನೇ ಪ್ರಾಶಸ್ತ್ಯ ಮತಗಳನ್ನು ವಿನಯ್ ಕಾರ್ತಿಕ್ ಪರ ಚಲಾಯಿಸಿದ್ದರಿಂದ ಅವರು ಅಧಿಕೃತ ಅಭ್ಯರ್ಥಿಗಳಿಗಿಂತ ಹೆಚ್ಚು ಮತ ಪಡೆದು ಚುನಾಯಿತರಾಗಿದ್ದಾರೆ.


ಕಾಂಗ್ರೆಸ್‌ನಲ್ಲಿನ ಆಂತರಿಕ ಭಿನ್ನಾಭಿಪ್ರಾಯವನ್ನು ರಾಜಕೀಯ ಲಾಭಕ್ಕೆ ಪರಿವರ್ತಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಶಾಸಕರ ಸಂಖ್ಯಾಬಲ ಇಲ್ಲದಿದ್ದರೂ ಪಕ್ಷದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರು. ಆದರೆ, ಅವರ ನಿರೀಕ್ಷೆ ಹುಸಿಯಾಗಿ ತಮ್ಮ ಅಭ್ಯರ್ಥಿಗೆ ಪಕ್ಷದ 14 ಮತಗಳಷ್ಟೇ ಲಭ್ಯವಾಗಿವೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ 5ನೇ ಅಭ್ಯರ್ಥಿ ವಿನಯ್ ಗೆಲುವಿಗಾಗಿ ಕಾಂಗ್ರೆಸ್‌ನ ಎಲ್ಲಾ ಶಾಸಕರನ್ನು ಮೂರು ದಿನ ರೆಸಾರ್ಟ್ ಒಂದರಲ್ಲಿ ಇಟ್ಟಿದ್ದರು.

ಅಲ್ಲಿ ಮತದಾನ ವಿಧಾನ ಕುರಿತು ತರಬೇತಿ ನೀಡಲಾಗಿತ್ತು, ಮತದಾನ ದಿನವಾದ ಇಂದು ನೇರವಾಗಿ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮತ್ತೊಂದು ಸಭೆ ನಡೆಸಿ, ಯಾವ ಅಭ್ಯರ್ಥಿಗೆ ಯಾರು ಮತ ಹಾಕಬೇಕೆಂಬ ಗೌಪ್ಯವಾಗಿ ಚೀಟಿ ನೀಡಲಾಯಿತು.

ಮೊದಲ ಪ್ರಾಶಸ್ತ್ಯ ಮತಗಳ ಚಲಾವಣೆ ನಂತರ ದ್ವಿತೀಯ ಪ್ರಾಶಸ್ತ್ಯ ಮತವನ್ನು ವಿನಯ್ ಕಾರ್ತಿಕ್ ಅವರಿಗೆ ನೀಡುವಂತೆ ವಿಪ್ ಹೊರಡಿಸಲಾಗಿತ್ತು. ಪಕ್ಷದ ಶಾಸಕರು ಮತ ಚಲಾಯಿಸು ವವರೆಗೂ ಶಿವಕುಮಾರ್ ಹಾಗೂ ಹರಿಪ್ರಸಾದ್ ವಿಧಾನಸೌಧದಲ್ಲಿನ ಪಕ್ಷದ ಕಚೇರಿಯಲ್ಲಿ ಕುಳಿತು ಮೇಲ್ವಿಚಾರಣೆ ನಡೆಸಿದರು.


> ಅತ್ಯಂತ ಸಂತೋಷ ತಂದಿದೆ. ಪಕ್ಷ ನೀಡಿದ ಮಹದಾವಕಾಶದಲ್ಲಿ ಗೆಲುವಿನ ದಡ ತಪುಪಿದ್ದೇನೆ. ಸಾಮಾಜಿಕ ನ್ಯಾಯ ಹೇಳುವುದಲ್ಲ, ಮಾಡಿ ತೋರಿಸುವುದು ಎಂಬುದನ್ನು ಬಿಜೆಪಿ ಸಾಕ್ಷೀಕರಿಸಿದೆ. ಈ ಗೆಲುವನ್ನು ಪ್ರಧಾನಿ ಮೋದಿಯವರು, ಮಾಜಿ ಸಿಎಂ ಯಡಿಯೂರಪ್ಪನವರು, ರಾಜ್ಯಾಧ್ಯಕ್ಷರಾದ ವಿಜಯೇಂದ್ರರವರು, ಹಿರಿಯರಾದ ಸಂತೋಷ್‌ಜೀ ಅವರು, ಪಕ್ಷದ ಕೋರ್ ಕಮಿಟಿಯವರು, ಶಾಸಕರು, ಕಾರ್ಯ ಕರ್ತರಿಗೆ ಸಮರ್ಪಿಸುತ್ತೇನೆ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಪ್ರಜಾಪ್ರಭುತ್ವದ ಸವಿ ಅನುಭವಿಸಬೇಕು ಎಂಬುದು ಬಿಜೆಪಿಯ ಸಿದ್ಧಾಂತ, ಧ್ಯೇಯ ಮತ್ತು ತತ್ವ. ಈ ನಿಟ್ಟಿನಲ್ಲಿ ಕಾಯಕ ಸಮುದಾಯದಿಂದ ಬಂದಂತಹ ನನಗೆ ಆದ್ಯತೆ ನೀಡಿ, ಎರಡು ಬಾರಿ ಸ್ಥಳೀಯ ಸಂಸ್ಥೆಗಳಿಂದ ನಡೆದ ಚುನಾವಣೆಯಲ್ಲಿ ಅತ್ಯಲ್ಪ ಮತಗಳಿಂದ ಸೋತ ನೋವಿನ ನಡುವೆ ನನ್ನ ಕೈಹಿಡಿದು ಪರಿಷತ್ ಪ್ರವೇಶ ಮಾಡಿಸಿದ ಪಕ್ಷವನ್ನು ಎಂದೂ ಮರೆಯಲಾರೆ. ಮತದಾನ ಮಾಡಿದ ಎಲ್ಲಾ ಶಾಸಕರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಮೈಸೂರು ಸೇರಿದಂತೆ ರಾಜ್ಯದ ಪರಂಪರೆ, ಅಭಿವೃದ್ಧಿಗಾಗಿ, ನೊಂದ ಸಮಾಜಗಳಿಗಾಗಿ ಸದನದ ಒಳಗೆ ಮತ್ತು ಹೊರಗೆ ಧ್ವನಿ ಎತ್ತುತ್ತೇನೆ. ದೊರೆತಿರುವ ಅವಕಾಶವನ್ನು ಪಕ್ಷ ಸಂಘಟನೆಗಾಗಿ ಸಮರ್ಪಿಸಿಕೊಂಡು 2028ರಲ್ಲಿ ಬಿಜೆಪಿ ಸರ್ಕಾರ ರಚನೆ ನಿಟ್ಟಿನಲ್ಲಿ ಶ್ರಮಿಸುತ್ತೇನೆ.
>
> -ಆರ್.ರಘು ಕೌಟಿಲ್ಯ, ವಿಧಾನ ಪರಿಷತ್ ಸದಸ್ಯರು



ಅಡ್ಡ ಮತದಾನ ಸಾಬೀತುಪಡಿಸಲಿ

> ವಿಧಾನ ಪರಿಷತ್ ಚುನಾವಣೆಯಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿಯೇ ಮತ ಚಲಾಯಿಸಿದ್ದೇನೆ. ನಾನು ಅಡ್ಡ ಮತದಾನ ಮಾಡಿದ್ದೇನೆಂದು ಆರೋಪಿಸುವವರು ಅದನ್ನು ಸಾಬೀತುಪಡಿಸಲಿ. ರಹಸ್ಯ ಮತದಾನವಾಗಿರುವುದರಿಂದ ಯಾರಿಗೆ ಮತ ಚಲಾಯಿಸುತ್ತಿದ್ದೇನೆಂದು ಬಹಿರಂಗ ಪಡಿಸಲಾಗದು. ಚುನಾವಣೆ ಎಂದ ಮೇಲೆ ಎಲ್ಲರೂ ಕರೆ ಮಾಡುವುದು ಸಹಜ. ಹಾಗೆಯೇ ಸಿಎಂ ಡಿ.ಕೆ.ಶಿವಕುಮಾರ್ ಅವರೂ ಮಾತನಾಡಿದರಷ್ಟೇ.
>
> -ಜಿ.ಟಿ.ದೇವೇಗೌಡ, ಶಾಸಕ





> ಇಂದಿನ ರಾಜ್ಯ ವಿಧಾನ ಪರಿಷತ್ ಚುನಾವಣೆಯಲ್ಲಿ ಜಯಗಳಿಸಿದ ನಮ್ಮ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು! ರಾಜ್ಯದ ಅಭಿವೃದ್ಧಿ, ಜನರ ಕಲ್ಯಾಣ ಮತ್ತು ಪ್ರಜಾಪ್ರಭುತ್ವದ ಧ್ವನಿಯನ್ನು ಬಲಪಡಿಸುವ ನಿಮ್ಮ ಪ್ರಯತ್ನಗಳಲ್ಲಿ ನಾನು ಯಶಸ್ಸನ್ನು ಬಯಸುತ್ತೇನೆ!
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಅನಾರೋಗ್ಯದ ನಡುವೆ ಮತದಾನ: ಅನಾರೋಗ್ಯದಿಂದ ಬಳಲುತ್ತಿದ್ದರೂ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಹಾಗೂ ಇಕ್ಬಾಲ್ ಹುಸೇನ್ ಮತಗಟ್ಟೆಗೆ ಬಂದು, ತಮ್ಮ ತಮ್ಮ ಹಕ್ಕು ಚಲಾಯಿಸಿದರು.

ರೌಡಿ ಸ್ಕ್ವಾಡ್ ಹದ್ದಿನ ಕಣ್ಣು

ಮಾಡುವ ಜೊತೆಗೆ ಆರ್ಥಿಕ ಸ್ಥಿತಿಗತಿ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು. ಈ ರೀತಿಯ ಮೇಲ್ವಿಚಾರಣೆ ಮೂಲಕ ಪರಿಣಾಮಕಾರಿಯಾಗಿ ಅವರ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲಾಗುವುದು ಎಂದು ಹೇಳಿದರು.

ಠಾಣಾ ವ್ಯಾಪ್ತಿಯ ಒಂದು ಸ್ಕ್ವಾಡ್‌ನಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಎಷ್ಟು ಮಂದಿ ಇರುತ್ತಾರೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಒಂದು ಠಾಣಾ ವ್ಯಾಪ್ತಿ ಸ್ಕ್ವಾಡ್‌ನಲ್ಲಿ ಪಿಎಸ್‌ಐ ಮತ್ತು ಸಿಬ್ಬಂದಿ ಸೇರಿದಂತೆ ಕನಿಷ್ಠ ನಾಲ್ವರು ಕಾರ್ಯನಿರ್ವಹಿಸಲಿದ್ದಾರೆ. ಪ್ರತಿ ಠಾಣೆಯಲ್ಲಿಯೂ ಎಷ್ಟು ಮಂದಿ ರೌಡಿಶೀಟರ್‌ಗಳು ಇದ್ದಾರೆ ಎಂಬುದರ ಅನುಗುಣವಾಗಿ ಸ್ಕ್ವಾಡ್‌ನಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾಗಲಿದೆ. ಉದಾಹರಣೆಗೆ ಲಕ್ಷ್ಮೀಪುರಂ ಠಾಣೆ ತೆಗೆದುಕೊಂಡರೆ ಈ ವ್ಯಾಪ್ತಿಯಲ್ಲಿ 13 ಮಂದಿ ರೌಡಿಶೀಟರ್ ಗಳಿದ್ದು, ಹಾಗಾಗಿ ಈ ಠಾಣೆಯ ರೌಡಿ ನಿಗ್ರಹ ದಳದಲ್ಲಿ ಒಬ್ಬರು ಪಿಎಸ್‌ಐ ಹಾಗೂ ಮೂವರು ಸಿಬ್ಬಂದಿ ಇರುತ್ತಾರೆ. ಹೆಚ್ಚಿನ ರೌಡಿಶೀಟರ್‌ಗಳು ಇರುವ ಠಾಣೆ ವ್ಯಾಪ್ತಿಯಲ್ಲಿ ಐದು ಮಂದಿ ಸ್ಕ್ವಾಡ್‌ನಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದರು.

ಈ ವಿಶೇಷ ಸ್ಕ್ವಾಡ್ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ರೌಡಿ ಚಟುವಟಿಕೆ ಮೇಲೆ ನಿಗಾ ವಹಿಸಲಾಗುವುದು. ಒಟ್ಟಾರೆ ನಗರ ವ್ಯಾಪ್ತಿ ಮಟ್ಟದ ಸ್ಕ್ವಾಡ್ ಸಹ ಡಿಸಿಪಿ (ಕಾನೂನು ಸುವ್ಯವಸ್ಥೆ) ಅಧೀನದಲ್ಲಿ ಹಾಗೂ ಸಿಸಿಬಿ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಲಿದೆ. ಇದರ ಜೊತೆಗೆ ಉಪವಿಭಾಗಗಳು ಹಾಗೂ ಪ್ರತಿ ಠಾಣೆ ವ್ಯಾಪ್ತಿಗೂ ಒಂದೊಂದು ಸ್ಕ್ವಾಡ್ ಮಾಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಡಿಸಿಪಿ ಕೆ.ಎಸ್.ಸುಂದರರಾಜ್ ಸೇರಿದಂತೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದ ಹಿತಕ್ಕೆ ಕಾಂಗ್ರೆಸ್‌ಗೆ ಪಕ್ಷಾತೀತ ಬೆಂಬಲ

- ಬೇರೆ ಪಕ್ಷದವರು ತೋರಿರುವ ವಿಶ್ವಾಸ ಉಳಿಸಿಕೊಳ್ಳುತ್ತೇವೆ
- ಇದು ಗುಪ್ತ ಮತದಾನ; ಯಾರು ಯಾರಿಗೆ ಮತ ಹಾಕಿದ್ದಾರೋ ಗೊತ್ತಿಲ್ಲ
- ದಾರಿ ಇಲ್ಲದವರಿಗೆ ದಾರಿ ತೋರಿಸಿದ್ದೇವೆ

ಬೆಂಗಳೂರು, ಜೂ.18– ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸರ್ಕಾರಕ್ಕೆ ಶಾಸಕರ ಬೆಂಬಲ ನೋಡಿ ನನಗೆ ಆಶ್ಚರ್ಯವಾಗಿದೆ. ಇದು ನಮ್ಮ ಸರ್ಕಾರಕ್ಕೆ ಮಾತ್ರ ನೀಡಿರುವ ಬೆಂಬಲವಲ್ಲ. ರಾಜ್ಯದ ಜನತೆಯ ಹಿತಕ್ಕಾಗಿ ನಿಮ್ಮ ಜೊತೆ ಇದ್ದೇವೆ ಎಂದು ನೀಡಿರುವ ಬೆಂಬಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷದ ಬಿ.ಕೆ.ಹರಿಪ್ರಸಾದ್, ಮಳವಳ್ಳಿ ಶಿವಣ್ಣ ಪಿ.ವಿ.ಮೋಹನ್, ವಿನಯ್ ಕಾರ್ತಿಕ್, ತಿಪ್ಪಣ್ಣಪ್ಪ ಕಮಕನೂರು ಅವರನ್ನು ವಿಧಾನಸೌಧದಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ಅಭಿನಂದಿಸಿದ ನಂತರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇದ್ದರು.

ನಾವು ಯಾವ ಹೆಜ್ಜೆಯನ್ನಿಟ್ಟು ಮುಂದುವರೆಯುತ್ತಿದ್ದೇವೆಯೋ ಅದಕ್ಕೆ ನಾವೂ ಜೊತೆಗಿದ್ದೇವೆ ಎಂದು ಪಕ್ಷಾತೀತವಾಗಿ ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರೂ ಒಗ್ಗಟ್ಟಾಗಿ ಬೆಂಬಲಿಸಿದ್ದಾರೆ. ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ ಎಂದು ಬಣ್ಣಿಸಿದರು.



ನಮ್ಮ ಪಕ್ಷದ ಶಾಸಕರ ಒಂದು ಮತವೂ ತಿರಸ್ಕೃತವಾಗಬಾರದು ಎಂದು ತರಬೇತಿ ನೀಡಲಾಗಿತ್ತು. ಇದಕ್ಕೆ ಸಹಕರಿಸಿದ ಎಲ್ಲಾ ಪದಾಧಿಕಾರಿಗಳಿಗೆ ನಾನು ವಿಶೇಷವಾಗಿ ಧನ್ಯವಾದ ಹೇಳುತ್ತೇನೆ. ಇದಕ್ಕೆ ದುಡಿದಂತಹ ಪಕ್ಷದ ಎಲ್ಲಾ ಶಾಸಕರು, ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿಯವರಾದ ರಣದೀಪ್ ಸುರ್ಜೇವಾಲಾ ಅವರು ಹಾಗೂ ಇತರೇ ಕಾರ್ಯದರ್ಶಿಗಳನ್ನು ನಾನು ಅಭಿನಂದಿಸುತ್ತೇನೆ ಎಂದರು. ಮಾಧ್ಯಮಗಳು ಸಹ ಸರ್ಕಾರಕ್ಕೆ ಬೆಂಬಲವಾಗಿ ಸಲಹೆ ನೀಡಿದ್ದೀರಿ. ನಿಮಗೂ ಧನ್ಯವಾದಗಳು ಎಂದರು.

ಬೇರೆ ಪಕ್ಷದ ಆಂತರಿಕ ವಿಚಾರ ಗೊತ್ತಿಲ್ಲ: ಅಡ್ಡ ಮತದಾನಕ್ಕಾಗಿ ಕುದುರೆ ವ್ಯಾಪಾರ ನಡೆದಿದೆಯೇ ಎಂದು ಕೇಳಿದಾಗ, ಇದರ ಬಗ್ಗೆ ನನಗೆ ಗೊತ್ತಿಲ್ಲ. ಮತ ಯಾರು ಹಾಕಿದ್ದಾರೆ ಎಂಬುದೂ ನನಗೆ ಗೊತ್ತಿಲ್ಲ. ಇಲ್ಲಿ ನಡೆದಿರುವುದು ಗುಪ್ತ ಮತದಾನ. ಯಾರು ಮತ ಹಾಕಿದ್ದಾರೆ ಎಂದು ಯಾರಿಗೆ ಗೊತ್ತು. ಆತ್ಮವಿಶ್ವಾಸದ ಮತ ಹಾಕಿದ್ದಾರೆ. ನಾನು ಯಾರ ಬಳಿಯೂ ಮಾತನಾಡಲು ಹೋಗಿಲ್ಲ, ಮತ ಕೇಳಲೂ ಹೋಗಿಲ್ಲ. ನಮ್ಮ ಪಕ್ಷದಿಂದ ಐದು ಅಭ್ಯರ್ಥಿಗಳು ನಿಂತಿದ್ದರು. ನಮ್ಮ ಶಾಸಕರ ಸಂಖ್ಯಾಬಲ ಎಷ್ಟಿತ್ತು ಎಂಬುದು ಮಾಧ್ಯಮಗಳಿಗೆ ತಿಳಿದಿತ್ತು. ಐದು ಜನ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿತ್ತು. ಅವರು ಗೆದ್ದಿದ್ದಾರೆ ಎಂದರು. ದಳ, ಬಿಜೆಪಿ ಸೇರಿದಂತೆ ಯಾವ ಪಕ್ಷದ ಆಂತರಿಕ ವಿಚಾರ ಏನಿದೆಯೋ ಎಂಬುದು ನನಗೆ ಏನೂ ಗೊತ್ತಿಲ್ಲ ಎಂದರು.

ದಾರಿ ಇಲ್ಲದವರಿಗೆ ದಾರಿ ತೋರಿಸಿದ್ದೇವೆ: ನೀವು ಸಹಕಾರ ಕೋರಿದ್ದೀರಿ ಎಂದು ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ ಎಂದಾಗ, ಅವರನ್ನು ಉಚ್ಚಾಟನೆ ಮಾಡಿ ಕಳಿಸಿದ್ದಾರಲ್ಲವೇ? ನಮ್ಮ ಹತ್ತಿರ ಇರಬೇಡಿ ಎಂದು ಕಳಿಸಿದ್ದರು. ಹೀಗೆ ಕಳಿಸಿದವರನ್ನು ದಾರಿಯಲ್ಲಿಯೇ ಬಿಡಲು ಆಗುತ್ತದೆಯೇ? ನಾವು ದಾರಿ ಇಲ್ಲದವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ ಎಂದರು.

ಯೇಸುವಿನ ಪವಿತ್ರ ಹೃದಯ ದೇವಾಲಯದ ವಾರ್ಷಿಕೋತ್ಸವ



ಮೈಸೂರು, ಜೂ. 18–ಮೈಸೂರಿನ ಯಾದವಗಿರಿಯಲ್ಲಿರುವ ಯೇಸುವಿನ ಪವಿತ್ರ ಹೃದಯ ದೇವಾಲಯದ ವಾರ್ಷಿಕೋತ್ಸವ ಸಮಾರಂಭವನ್ನು ಜೂ.18 ರಿಂದ 21ರವರೆಗೆ ಆಯೋಜಿಸಲಾಗಿದೆ.

ಜೂ.18ರಂದು ಮೈಸೂರು ಧರ್ಮಪ್ರಾಂತ್ಯದ ಶ್ರೇಷ್ಠ ಗುರುಗಳಾದ ಶ್ರೇಷ್ಠ ಗುರು ಎಂ.ಅಂತಪ್ಪ ಅವರಿಂದ ಧ್ವಜಾರೋಹಣ ಮತ್ತು ದಿವ್ಯ ಬಲಿಪೂಜೆ ನೆರವೇರಿತು.

ಜೂ.19ರಂದು ಸಂಜೆ 5.30ಕ್ಕೆ ಮೈಸೂರು ಧರ್ಮಪ್ರಾಂತ್ಯದ ಕುಲಪತಿ ಗುರು ಅಂತೋನಿರಾಜ್ ಜೆ. ಅವರಿಂದ ದಿವ್ಯ ಬಲಿಪೂಜೆ, ಜೂ.20ರಂದು ಸಂಜೆ 5.30ಕ್ಕೆ ಮೈಸೂರು ಧರ್ಮಪ್ರಾಂತ್ಯದ ವಿಶ್ರಾಂತ ಗುರುಗಳಾದ ಗುರು ಬೆಕೆಟ್ ಡಿಸೋಜ ಅವರಿಂದ ದಿವ್ಯ ಬಲಿಪೂಜೆ ಮತ್ತು ಜೂ.21ರಂದು ಸಂಜೆ 5.30ಕ್ಕೆ ಮೈಸೂರು ಧರ್ಮಾಧ್ಯಕ್ಷರು ಹಾಗೂ ಸಹ ಗುರುಗಳಾದ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ. ಅವರಿಂದ ಅಡಂಬರ ದಿವ್ಯ ಬಲಿಪೂಜೆ ನಡೆಯಲಿದೆ ಎಂದು ದೇವಾಲಯದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಶೈಕ್ಷಣಿಕ ಕೋರ್ಸ್‌ಗಳು ಆರಂಭ

ಮೈಸೂರು, ಜೂ. 18–ಶೈಕ್ಷಣಿಕ ವರ್ಷಕ್ಕೆ ಕ್ಲೀನ್ಸ್ ಸ್ಕೂಲ್ ಆಫ್ ಡಿಸೈನ್ ಸ್ವ-ಅನುಭವದ ಕಲಿಕೆ, ಉದ್ಯಮ ಏಕೀಕರಣ ಹಾಗೂ ಭವಿಷ್ಯ ಮುಖಿ ವಿನ್ಯಾಸ ಶಿಕ್ಷಣಕ್ಕೆ ಒತ್ತು ನೀಡುವ ಹಲವು ಹೊಸ ಶೈಕ್ಷಣಿಕ ಕೋರ್ಸ್‌ಗಳನ್ನು ಘೋಷಿಸಿದೆ.

ಸಂಸ್ಥೆಯು ಉತ್ಪಾದಕ ಕೃತಕ ಬುದ್ಧಿಮತ್ತೆ ಕಲಿಕೆ ಮಾದರಿಗಳು, ಆಟೋಕ್ಯಾಡ್, ಕೋರಲ್‌ಡ್ರಾ ಹಾಗೂ ಟ್ಯುಕಾಕ್ಯಾಡ್‌ನಂತಹ ಅಲ್ಪಾವಧಿಯ ಸರ್ಟಿಫಿಕೇಷನ್ ಕಾರ್ಯಕ್ರಮಗಳು, ಉದ್ಯಮ ಆಧಾರಿತ ಕಾರ್ಯಾಗಾರಗಳು ಹಾಗೂ ಫ್ಯಾಷನ್ ಮತ್ತು ಇಂಟೀರಿಯರ್ ವಿನ್ಯಾಸ ಕೋರ್ಸ್‌ಗಳಲ್ಲಿ ವಿಸ್ತೃತ ಪ್ರಾಯೋಗಿಕ ತರಬೇತಿಯನ್ನು ಪರಿಚಯಿಸುತ್ತಿದೆ. ಫ್ಯಾಷನ್, ಇಂಟೀರಿಯರ್, ರೀಟೇಲ್ ಹಾಗೂ ಡಿಜಿಟಲ್ ಕಾಮರ್ಸ್ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಮತ್ತು ವಿನ್ಯಾಸ ಕೌಶಲ್ಯ ಹೊಂದಿರುವ ವೃತ್ತಿಪರರ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಹೊಸ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ತರಗತಿ ಕಲಿಕೆಯ ಜೊತೆಗೆ ವಿವಿಧ ಉದ್ಯಮಗಳ ಕಾರ್ಯ ವೈಖರಿಯನ್ನು ನೇರವಾಗಿ ಅರಿಯುವ ಅವಕಾಶ ಕಲ್ಪಿಸಲಾಗುವುದು ಎಂದು ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಗುರುನಂದನ್ ಜಯರಾಮ್ ತಿಳಿಸಿದ್ದಾರೆ.

ಹಿಂದಿ ಭಾಷಾ ಅತಿಥಿ ಶಿಕ್ಷಕ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಜೂ. 18– ಮೈಸೂರು ತಾಲೂಕಿನ ವರುಣಾ ಹೋಬಳಿಯ ದೇವಲಾಪುರ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಹಿಂದಿ ಭಾಷಾ ಶಿಕ್ಷಕ ಹುದ್ದೆ ಖಾಲಿಯಿದ್ದು, ಸದರಿ ಹುದ್ದೆಗೆ 2026–27 ನೇ ಸಾಲಿಗೆ ಅನ್ವಯವಾಗುವಂತೆ ಅತಿಥಿ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆಯು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಹಿಂದಿ ಬಿ.ಇಡಿ., ಪದವೀಧರರು ಅರ್ಜಿ ಸಲ್ಲಿಸುವಂತೆ ಶಾಲೆಯ ಮುಖ್ಯ ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9449080312 ಸಂಪರ್ಕಿಸಬಹುದು.

ಪಾವತಿಗೆ ಜೂ.21ರಿಂದ ಜು. 10ರವರೆಗೆ ಅವಕಾಶ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 31,918 ಪ್ರಕರಣಗಳು ಬಾಕಿ ಇದ್ದು, ಅಲ್ಲಿಂದ ರೂ. 9.12 ಕೋಟಿ ಆದಾಯ ಬರಬಹುದು ಎಂದು ಅಂದಾಜಿ ಸಲಾಗಿದೆ. ಕಳೆದ ಮೂರು ದಶಕಗಳಲ್ಲಿ ರಾಜ್ಯದಾದ್ಯಂತ ನಡೆದ ವಿವಿಧ ಜಾರಿ ಕಾರ್ಯಾಚರಣೆಗಳ ವೇಳೆ ಈ ಪ್ರಕರಣ ಗಳು ದಾಖಲಾಗಿದ್ದವು. ಇದೀಗ ವಾಹನ ಮಾಲೀಕರು ತಮ್ಮ ದಾಖಲೆಗ ಳನ್ನು ಸಕ್ರಮ ಗೊಳಿಸಿ, ಬಾಕಿ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಈ ಯೋಜನೆ ನೆರವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಕಿ ಇರುವ ಡಿಎಸ್‌ಎ ಪ್ರಕರಣಗಳನ್ನು ಹೊಂದಿರುವ ವಾಹನ ಮಾಲೀಕರು ಮತ್ತು ನಿರ್ವಾಹಕರು ತಮ್ಮ ಸಮೀಪದ ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿ, ಈ ಸೀಮಿತ ಅವಧಿಯ ರಿಯಾಯಿತಿಯ ಪ್ರಯೋಜನ ಪಡೆದು ಕೊಳ್ಳುವಂತೆ ಇಲಾಖೆ ಮನವಿ ಮಾಡಿದೆ.

ಉಚಿತ ಮಧುಮೇಹ ತಪಾಸಣೆ; ಆಯುರ್ವೇದ ಸಲಹಾ ಶಿಬಿರ

ಮೈಸೂರು, ಜೂ. 18– ಮೈಸೂರಿನ ಶಾರಾವಿ ಫೌಂಡೇಶನ್ ವತಿಯಿಂದ ಗೋಕುಲಂನಲ್ಲಿರುವ ಭವೇದ್ ಆಯುರ್ವೇದ ಸಹಯೋಗದೊಂದಿಗೆ ಜೂನ್ 20 ರಂದು ಬೆಳಗ್ಗೆ 10.00 ರಿಂದ ಸಂಜೆ 05.00 ಗಂಟೆಯವರೆಗೆ ಉಚಿತ ಮಧುಮೇಹ ತಪಾಸಣೆ ಮತ್ತು ಆಯುರ್ವೇದ ಸಲಹಾ ಶಿಬಿರವನ್ನು ಭವೇದ್, ಗೋಕುಲಂ 3ನೇ ಹಂತ ಇಲ್ಲಿ ಆಯೋಜಿಸಲಾಗಿದೆ. ಮೊದಲು ಬಂದವರಿಗೆ ಆದ್ಯತೆ ಮೇರೆಗೆ ನಿಯಮಿತ ನೋಂದಣಿ ಮಾಡಲಾಗುವುದು. ವಿವರಗಳಿಗೆ ಮೊಬೈಲ್: 7483208527, 9916200341 ಸಂಪರ್ಕಿಸಬಹುದು.

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ರೋಗಿಗಳ ಸಾವಿನ ಪ್ರಕರಣ

ಶೇ.20ರಷ್ಟು ಹೊರರೋಗಿಗಳ ಸಂಖ್ಯೆ ಇಳಿಮುಖ



ಮೈಸೂರು, ಜೂ.18(ಜಿಎ)–ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 24 ಗಂಟೆಗಳ ಅವಧಿಯಲ್ಲಿ 11 ಮಂದಿ ಮೃತಪಟ್ಟಿದ್ದಾರೆ ಎಂಬ ವರದಿ ಮತ್ತು ವೀಡಿಯೊಗಳು ವೈರಲ್ ಆಗಿರುವ ಹಿನ್ನೆಲೆಯಲ್ಲಿ ಆಸ್ಪತ್ರೆಯ ಹೊರರೋಗಿಗಳ ಸಂಖ್ಯೆಯಲ್ಲಿ ಸುಮಾರು ಶೇ.20ರಷ್ಟು ಇಳಿಮುಖವಾಗಿದೆ.

ಒಳರೋಗಿಗಳ ಸಂಖ್ಯೆ ಹಾಗೂ ತುರ್ತು ಚಿಕಿತ್ಸಾ ವಿಭಾಗದ ಸೇವೆಗಳು ಎಂದಿನಂತೆ ಮುಂದುವರಿದಿದೆ. ತುರ್ತು ಚಿಕಿತ್ಸಾ ವಿಭಾಗದಲ್ಲಿ 20ಕ್ಕೂ ಹೆಚ್ಚು ಹಾಸಿಗೆಗಳನ್ನು ಸಿದ್ಧವಾಗಿರಿಸಲಾಗಿದ್ದು, ಅವೆಲ್ಲವೂ ಭರ್ತಿಯಾಗಿದ್ದವು. ಕೆಲ ರೋಗಿಗಳಿಗೆ ಸ್ಟ್ರೆಚ್ಚರ್‌ಗಳಲ್ಲಿಯೇ ಚಿಕಿತ್ಸೆ ನೀಡುತ್ತಿರುವುದು ಕಂಡು ಬಂದಿದೆ.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಎಸ್.ಸದಾನಂದ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವೀಡಿಯೊಗಳು ಮತ್ತು ವರದಿಗಳಿಂದ ಜನರಲ್ಲಿ ಆತಂಕ ಉಂಟಾಗಿದೆ. ಇದರ ಪರಿಣಾಮವಾಗಿ ಹೊರರೋಗಿಗಳ ಸಂಖ್ಯೆ ಸುಮಾರು 20 ಪ್ರತಿಶತ ಕಡಿಮೆಯಾಗಿದೆ. ಮತ್ತೊಂದೆಡೆ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರೀ ಮಳೆಯೂ ರೋಗಿಗಳ ಆಗಮನದ ಮೇಲೆ ಪರಿಣಾಮ ಬೀರಿರಬಹುದು ಎಂದು ತಿಳಿಸಿದರು.

ವೀಡಿಯೊಗಳ ಮೂಲಕ ತಪ್ಪು ಮಾಹಿತಿಯನ್ನು ಹರಡುವುದನ್ನು ತಡೆಯಲು ಸರ್ಕಾರ ಕಾನೂನು ಜಾರಿಗೆ ತರಬೇಕು. ನಿನ್ನೆ ಆಸ್ಪತ್ರೆಯ ನಿರ್ದೇಶಕರು, ವೈದ್ಯರು ಮತ್ತು ಸಿಬ್ಬಂದಿಯೊಂದಿಗೆ ಸಭೆ ನಡೆಸಿ, ನಕಾರಾತ್ಮಕ ಪ್ರಚಾರದ ನಡುವೆಯೂ ಶ್ರಮಿಸುತ್ತಿರುವ ಸಿಬ್ಬಂದಿಯ ಮನೋಬಲವನ್ನು ಹೆಚ್ಚಿಸಿದ್ದಾರೆ ಎಂದು ತಿಳಿಸಿದರು. ಕಳೆದ ನಿನ್ನೆ ಬೆಳಿಗ್ಗೆ 8 ಗಂಟೆಯಿಂದ ಇಂದು ಬೆಳಿಗ್ಗೆ 8 ಗಂಟೆಯವರೆಗೆ ಆಸ್ಪತ್ರೆಯಲ್ಲಿ ಕೇವಲ ಮೂರು ಸಾವುಗಳು ಮಾತ್ರ ದಾಖಲಾಗಿವೆ ಎಂದು ಡಾ.ಸದಾನಂದ ಸ್ಪಷ್ಟಪಡಿಸಿದರು.

ವೈರಲ್ ವೀಡಿಯೊಗಳ ಮೂಲಕ ತಪ್ಪು ಮಾಹಿತಿ ಹರಡುವುದ ತಡೆಯಬೇಕು



“ ಮೈಸೂರಿನ ಜಯದೇವ ಸಂಸ್ಥೆಯೂ ಬೆಂಗಳೂರಿನ ಸಂಸ್ಥೆಯೊಟ್ಟಿಗೆ ಇರುವುದರಿಂದ ಇಲ್ಲಿಗೆ ಪಿಜಿ ವಿದ್ಯಾರ್ಥಿಗಳು ತರಬೇತಿಗೆ ಬರುತ್ತಿಲ್ಲ. ಬದಲಾಗಿ ರಾಜೀವ್ ಗಾಂಧಿ ವಿವಿಯಿಂದ ಬೆಂಗಳೂರಿಗೆ ಹೋಗುತ್ತಾರೆ. ಮುಂದಿನ ದಿನಗಳಲ್ಲಿ ಮೈಸೂರು ಶಾಖೆಯನ್ನು ಬೆಂಗಳೂರಿನಿಂದ ಪ್ರತ್ಯೇಕಗೊಳಿಸಿದರೆ, ನಾವು ರಾಜೀವ್ ಗಾಂಧಿ ವಿವಿಯಿಂದ ವರ್ಷಕ್ಕೆ 30 ಪಿಜಿ ವಿದ್ಯಾರ್ಥಿಗಳನ್ನು ಆಹ್ವಾನಿಸಲು ಸಾಧ್ಯವಾಗುತ್ತದೆ. ಇದರಿಂದ ಇಲ್ಲಿನ ಒತ್ತಡವನ್ನು ಸರಿದೂಗಿಸಬಹುದಾಗಿದೆ. ಈ ಬಗ್ಗೆ ಸಚಿವರು ಹಾಗೂ ನಿರ್ದೇಶಕರ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

ದೀನ–ದಲಿತರು, ಹಿಂದುಳಿದವರ ಸಮಾನತೆಗೆ ಹೋರಾಡಿದವರು ಬಾಬೂಜಿ

ರಾಷ್ಟ್ರೀಯ ಸಮ್ಮೇಳನದಲ್ಲಿ ಬಾಬೂಜಿ ಅವರ ಸಾಧನೆಗಳ ಸ್ಮರಣೆ



ಮೈಸೂರಿನ ಕೆಎಸ್‌ಒಯುನಲ್ಲಿ ಆಯೋಜಿಸಿದ್ದ 'ಡಾ.ಬಾಬು ಜಗಜೀವನರಾಮ್ ಅವರ ದೂರದೃಷ್ಟಿ ಮತ್ತು ಆಧುನಿಕ ಸಮಾಜಕ್ಕೆ ಅವರ ಕೊಡುಗೆಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ರಾಜೇಶ್ ಜಿ.ಗೌಡ ಉದ್ಘಾಟಿಸಿದರು.

ಮೈಸೂರು, ಜೂ.18(ಜಿಎ)–ದೇಶದಲ್ಲಿ ದೀನ–ದಲಿತರು ಹಿಂದುಳಿದವರ ಸಮಾನತೆಗಾಗಿ ಹೋರಾಡಿದ ಧೀಮಂತ ನಾಯಕ ಡಾ.ಬಾಬು ಜಗಜೀವನರಾಮ್ ಎಂದು ಡಾ.ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ ತಿಳಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಹಯೋಗದಲ್ಲಿ ಗುರುವಾರ ನಡೆದ 'ಡಾ.ಬಾಬು ಜಗಜೀವನ ರಾಮ್ ಅವರ ದೂರದೃಷ್ಟಿ ಮತ್ತು ಆಧುನಿಕ ಸಮಾಜಕ್ಕೆ ಅವರ ಕೊಡುಗೆಗಳು' ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಶ್ರೇಷ್ಠ ನಾಯಕರುಗಳ ಹೆಸರುಗಳನ್ನು ನೋಡಿದರೆ ಅದರಲ್ಲಿ ಡಾ.ಬಾಬು ಜಗಜೀವನರಾಮ್ ಅವರೂ ಕೂಡ ಒಬ್ಬರು. ಆಧುನಿಕ ಭಾರತಕ್ಕಾಗಲಿ ಅಥವಾ ಅವರ ಪ್ರಸ್ತುತ ಕಾಲದಲ್ಲಿ ಭಾರತಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಶೈಕ್ಷಣಿಕ ಕ್ಷೇತ್ರದಲ್ಲಿರಬಹುದು, ಸಾಮಾಜಿಕ ಸಮಾನತೆ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂದು ತಿಳಿಸಿದರು.

ಮಾಜಿ ಚುನಾವಣಾ ಆಯುಕ್ತ ಎನ್.ಸಿ.ಮುನಿಯಪ್ಪ ಮಾತನಾಡಿ, ಜಗಜೀವನರಾಂ ಬಗೆಗಿನ ಪುಸ್ತಕಗಳು ಬಹಳ ಕಡಿಮೆ ಇದೆ. ಇತ್ತೀಚೆಗೆ ಜಗಜೀವನರಾಮ್ ಅವರ ಆರ್ಥಿಕ ಚಿಂತನೆಗಳ ಬಗ್ಗೆ ಒಂದು ಪುಸ್ತಕ ಬರೆಯಬೇಕು ಎಂದಾಗ ಸರಿಯಾದ ಮಾಹಿತಿ ನಮ್ಮಲ್ಲಿ ಸಿಗುತ್ತಿಲ್ಲ ಎಂದರು.

ಡಾ.ಬಾಬು ಜಗಜೀವನರಾಮ್ ಅವರು ಪದವಿ ಪಡೆಯುವುದಕ್ಕಿಂತ ಮುಂಚೆಯೇ ಕೊಲ್ಕತ್ತ, ಬಿಹಾರದಲ್ಲಿ ಸಂಭವಿಸಿದ ಭೂಕಂಪನದ ಪರಿಹಾರ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಹಿಸಿದ್ದರು. ಬಾಬು ಜಗಜೀವನರಾಮ್ ಹಾಗೂ ಬಾಬು ರಾಜೇಂದ್ರಪ್ರಸಾದ್ ಅವರ ಒಡನಾಟವಿತ್ತು. ಮುಂದೆ ನೆಹರು ಹಾಗೂ ಮಹಾತ್ಮ ಗಾಂಧೀಜಿ ಅವರ ಸಂಪರ್ಕಕ್ಕೆ ಬಂದು ಶಹಬ್ಬಾಸ್‌ಗಿರಿ ಪಡೆದರು ಎಂದರು.

ಕಾಂಗ್ರೆಸ್‌ನಲ್ಲಿದ್ದ ಜ್ವಲಂತ ಸಮಸ್ಯೆಗಳನ್ನು ಕಾಂಗ್ರೆಸ್ ನಾಯಕರ ಮುಂದೆ ಪ್ರಸ್ತಾಪಿಸುವ ಅವಕಾಶ ಅವರಿಗೆ ಬಂದಿರುತ್ತದೆ. ಡಿಗ್ರಿ ಪಡೆದ 5 ವರ್ಷದಲ್ಲಿ ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸ್ ಲೀಡ್ ಎಂಬ ಸಂಘಟನೆ ಹುಟ್ಟುಹಾಕಿ ಅದರ ಅಧ್ಯಕ್ಷರಾದರು. ಒಬ್ಬ ಯುವ ನಾಯಕರಾಗಿ ಸಾಮಾಜಿಕ ಕಳಕಳಿ ತೋರಿಸುವುದರ ಜೊತೆಗೆ ಅಂದಿನ ದಲಿತರ, ಶೋಷಿತರ ಕಾಳಜಿಯನ್ನು ಅನಾವರಣ ಮಾಡಿದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರಾಮುವಿಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಮ್ ನಾಯುಡು, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದ್‌ಕುಮಾರ್, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್‌ರಾಜ್, ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ–ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಆರ್.ಶರಣಮ್ಮ ಇತರರು ಉಪಸ್ಥಿತರಿದ್ದರು.

ಸಿಎಂ ಆದೇಶಕ್ಕೆ ಕಿಮ್ಮತ್ತು ನೀಡದ ಸರ್ಕಾರಿ ನೌಕರರು

ಮೈಸೂರು, ಜೂ.18(ಎಸ್‌ಪಿಎನ್)– ಸರ್ಕಾರಿ ನೌಕರರು ಸಮಯಕ್ಕೆ ಸರಿಯಾಗಿ ಕಚೇರಿಗೆ ಆಗಮಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರೂ ಇನ್ನೂ 2,13,925 ಸರ್ಕಾರಿ ನೌಕರರು, ಅಧಿಕಾರಿಗಳು ಕರ್ತವ್ಯ(ಕೆಎಎಂಎಸ್) ಮೊಬೈಲ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡಿಲ್ಲ ಎಂದು ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಮಾಹಿತಿ ನೀಡಿದ್ದಾರೆ.

ಎಲ್ಲಾ ಸರ್ಕಾರಿ ಅಧಿಕಾರಿ, ನೌಕರರು ಕರ್ತವ್ಯ(ಕೆಎಎಂಎಸ್) ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದ್ದು, ಈ ಮೊಬೈಲ್ ಅಪ್ಲಿಕೇಷನ್ ಮೂಲಕ ಪ್ರತಿದಿನ ಬೆಳಗ್ಗೆ, ಸಂಜೆ ತಮ್ಮ ಹಾಜರಾತಿಯನ್ನು ಕಡ್ಡಾಯವಾಗಿ ದಾಖಲಿಸಬೇಕು. ಜೂ.16ರವರೆಗೆ ಅಂಕಿ–ಅಂಶಗಳ ಪ್ರಕಾರ, ರಾಜ್ಯದಲ್ಲಿ 2,13,925 ಸರ್ಕಾರಿ ಅಧಿಕಾರಿ, ನೌಕರರು ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಾಯಿಸಿಕೊಂಡಿರುವುದಿಲ್ಲ. ಇಂತಹ ನೌಕರರನ್ನು ಗುರುತಿಸಿ, ಕೂಡಲೇ ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಂಡು ಹಾಜರಾತಿ ಹಾಕಲು ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ತಮ್ಮ ಅಧೀನ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅಭಿನಂದನೆ...



ಮೈಸೂರಿನ ಜಯಲಕ್ಷ್ಮೀಪುರಂನ ಶ್ರೀ ಲಕ್ಷ್ಮೀದೇವಮ್ಮ ಹೆರಿಗೆ ಆಸ್ಪತ್ರೆಯ ಪ್ರಸೂತಿ ತಜ್ಞರಾಗಿ ಅಧಿಕಾರ ವಹಿಸಿಕೊಂಡ ಡಾ.ಪವಿತ್ರ ಹಾಗೂ ಆಸ್ಪತ್ರೆಯ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ಪಡೆದ ನಾಗರಾಜ್ ಅವರನ್ನು ಬಡವರ ಬಂಧು ಅಭಿಮಾನಿಗಳ ಸಂಘದ ವತಿಯಿಂದ ಶಾಸಕ ಕೆ.ಹರೀಶ್‌ಗೌಡರ ಪುತ್ರ ಕಿಶನ್‌ಗೌಡ ಅಭಿನಂದಿಸಿದರು. ಈ ವೇಳೆ ಆಸ್ಪತ್ರೆಯ ಡಾ.ಕೆಂಪೇಗೌಡ, ಡಾ.ದಿವ್ಯ, ಸಂಘದ ಅಧ್ಯಕ್ಷ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಷ್ಣಕುಮಾರ್, ಭರತ್, ಗಾಂಧಿ ಗೌಡ ರೇವಣ್ಣ, ಪ್ರಭಾಕರ್ ಮತ್ತಿತರರಿದ್ದರು.

ಮಾರ್ಗದರ್ಶಿತ ಧ್ಯಾನ ಕಾರ್ಯಕ್ರಮ

ಮೈಸೂರು, ಜೂ. 18– 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಶ್ರೀ ಪರಮಹಂಸ ಯೋಗಾನಂದರು ಸ್ಥಾಪಿಸಿದ ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯು 'ಯೋಗ–ಧ್ಯಾನದ ಮೂಲಕ ಶಾಂತಿಯನ್ನು ಅನುಭವಿಸಿ' ಶೀರ್ಷಿಕೆಯ ಮಾರ್ಗದರ್ಶಿತ ಧ್ಯಾನ ಕಾರ್ಯಕ್ರಮವನ್ನು ಜೂ.20, 21 ರಂದು ಆಯೋಜಿಸಿದೆ. ಈ ಅಧಿವೇಶನವನ್ನು ಯೋಗದಾ ಸತ್ಸಂಗ ಸಂಸ್ಥೆಯ ಸನ್ಯಾಸಿಗಳು ರಾಂಚಿ ಆಶ್ರಮದಿಂದ ನಡೆಸಲಿದ್ದಾರೆ. ಈ ನೇರ ಪ್ರಸಾರವನ್ನು ಮೈಸೂರಿನ ಯೋಗದಾ ಸತ್ಸಂಗ ಧ್ಯಾನ ಕೇಂದ್ರದಲ್ಲಿ, 7ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ ಇಲ್ಲಿ ಭಾಗವಹಿಸಬಹುದು. ಜೂನ್ 20 (ಸಂಜೆ 6ರಿಂದ 7:30ರವರೆಗೆ ಇಂಗ್ಲಿಷ್‌ನಲ್ಲಿ), ಜೂ.21 (ಬೆಳಿಗ್ಗೆ 10:30ರಿಂದ ಮಧ್ಯಾಹ್ನ 12ರವರೆಗೆ ಕನ್ನಡದಲ್ಲಿ) ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ 9880397525, 9880718924 ಸಂಪರ್ಕಿಸಬಹುದು.

ಪರಿಸರ ಮಾಸಾಚರಣೆ; ಸಂಗೀತ ಕಾರ್ಯಕ್ರಮ



ಪರಿಸರ ಮಾಸಾಚರಣೆ ಅಂಗವಾಗಿ 'ನೇಸರಾ... ನೋಡು' ಶೀರ್ಷಿಕೆಯಡಿ ಸಂಗೀತ ಕಾರ್ಯಕ್ರಮ ನಡೆಯಿತು.

ಮೈಸೂರು, ಜೂ.18(ಎಸ್‌ಪಿಎನ್)– ಪರಿಸರ ಮಾಸಾಚರಣೆ ಅಂಗವಾಗಿ ಆಯೋಜಿಸಲಾದ 'ನೇಸರಾ... ನೋಡು' ಶೀರ್ಷಿಕೆಯಡಿ ಸಂಗೀತ ಕಾರ್ಯಕ್ರಮ ನೆರವೇರಿತು.

ಮೈಸೂರು ಅಕ್ಕಮಹಾದೇವಿ ರಸ್ತೆಯಲ್ಲಿರುವ ಎಂಬಿಸಿಟಿ ಆಡಿಟೋರಿಯಂನಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಪರಿಸರ ಮಾಸಾಚರಣೆ ಸಮಿತಿ, ಸ್ಫೂರ್ತಿ ಬಿಎಐ ಮಹಿಳಾ ಘಟಕ ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ ಸಹಯೋಗದೊಂದಿಗೆ ಆಯೋಜಿಸಿದ್ದ 'ನೇಸರಾ..., ನೋಡು' ಶೀರ್ಷಿಕೆಯಡಿ ವಿವಿಧ ಕವಿಗಳು ರಚಿಸಿರುವ ಕವಿತೆಗಳ ಗಾಯನ ಪ್ರೇಕ್ಷಕರ ಮನರಂಜಿಸಿದವು.

ಬಿಎಐ ಮೈಸೂರು ಘಟಕದ ಛೇರ್ಮನ್ ಕೆ.ಆರ್.ಪ್ರಭಾಕರ್ ರಾವ್ ಮಾತನಾಡಿ, ಖ್ಯಾತ ಗಾಯಕರು, ಮತ್ತು ವಾದ್ಯ ಕಲಾವಿದರ ಗಾನಸುಧೆ, ವಾದ್ಯಗೋಷ್ಠಿಯ ಕೈಚಳಕ ಪ್ರೇಕ್ಷಕರ ಮನಗೆದ್ದಿವೆ. ಪ್ರಕೃತಿ, ಪರಿಸರ ಸಂರಕ್ಷಣೆ ಹಾಗೂ ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುವ ಹೆಸರಾಂತ ಕವಿಗಳು ರಚಿಸಿರುವ ಗೀತೆಗಳು ಕಲಾರಸಿಕರನ್ನು ಭಾವಲೋಕಕ್ಕೆ ಕರೆದೊಯ್ದವು ಎಂದರು.

ಈ ವೇಳೆ ಗಾಯಕರಾದ ನಿತಿನ್ ರಾಜಾರಾಂ ಶಾಸ್ತ್ರಿ, ರಶ್ಮಿ ಚಿಕ್ಕಮಗಳೂರು, ಲಕ್ಷ್ಮಿ ದಿನೇಶ್, ನರಸಿಂಹಮೂರ್ತಿ, ತ್ಯಾಗರಾಜ್ ಹಾಗೂ ವಾದ್ಯವೃಂದ ಕಲಾವಿದರಾದ ಪುರುಷೋತ್ತಮ್ (ಕೀ ಬೋರ್ಡ್), ಗುರುದತ್ (ರಿದಂ ಪ್ಯಾಡ್), ರೋಷನ್ ಸೂರ್ಯ(ತಬಲ), ಪುನೀತ್ (ಕೊಳಲು) ವಾದಕರನ್ನು ಸನ್ಮಾನಿಸಲಾಯಿತು. ಈ ವೇಳೆ ಬಿಎಐ ಗೌರವ ಕಾರ್ಯದರ್ಶಿ ಎಂ.ಡಿ. ಪ್ರವೀಣ್ ಪಾಲ್, ಡಬ್ಲ್ಯೂಇಎಂ ಛೇರ್ಮನ್ ಸಿ.ಡಿ.ಕೃಷ್ಣ, ಗೌರವ ಕಾರ್ಯದರ್ಶಿ ಎಸ್. ವಾಸುದೇವನ್, ಸ್ಫೂರ್ತಿ ಪ್ರೆಸಿಡೆಂಟ್ ಶಾಂತಿ ಭಾರದ್ವಾಜ್, ಸ್ಫೂರ್ತಿ ವೀಣಾ ಅಶೋಕ್ ಉಪಸ್ಥಿತರಿದ್ದರು.

ಸತ್ತವರ ಕುಟುಂಬಕ್ಕೆ 25 ಲಕ್ಷ ಪರಿಹಾರಕ್ಕೆ ಒತ್ತಾಯ



ನಾರಾಯಣಗೌಡ

ಮೈಸೂರು: ಮೈಸೂರಿನ ದಟ್ಟಗಳ್ಳಿಯ ಪಬ್‌ನಲ್ಲಿ ಸಜೀವ ದಹನವಾದ ಅಡುಗೆ ಸಿಬ್ಬಂದಿ ಕುಟುಂಬದವರಿಗೆ ಕೂಡಲೇ 25 ಲಕ್ಷ ಪರಿಹಾರ ನೀಡಬೇಕೆಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ದಟ್ಟಗಳ್ಳಿಯ ರೆಸ್ಟೋಬಾರ್‌ನಲ್ಲಿ ಸಂಭವಿಸಿದ ದುರಂತದಲ್ಲಿ ಅಡುಗೆ ಸಿಬ್ಬಂದಿ ಸಾವನ್ನಪ್ಪಿದ್ದು ಅತ್ಯಂತ ದುಃಖದ ವಿಷಯ. ಅವರ ಕುಟುಂಬದವರಿಗೆ ಭಗವಂತ ದುಃಖ ತಡೆಯುವ ಶಕ್ತಿನೀಡಲೆಂದು ಕೋರುತ್ತೇನೆ. ಅವರಿಬ್ಬರು ಡಾರ್ಜಿಲಿಂಗ್ ಮತ್ತು ನೇಪಾಳ ಮೂಲದವರಾಗಿದ್ದು, ಜೀವನ ನಿರ್ವಹಣೆಗೆ ಮೈಸೂರಿಗೆ ಕಾರ್ಮಿಕರಾಗಿ ಬಂದು ಪಬ್‌ನಲ್ಲಿ ದುಡಿಯುತ್ತಿದ್ದರು. ಮಾಲೀಕರಿಂದ 25 ಲಕ್ಷ ಹಾಗೂ ಸರಕಾರದಿಂದ 25 ಲಕ್ಷ ಒಟ್ಟು 50 ಲಕ್ಷ ಪರಿಹಾರ ಕೊಡಬೇಕೆಂದು ಒತ್ತಾಯಿಸಿದ್ದಾರೆ. ಸತ್ತವರು 24–26 ವರ್ಷಗಳ ಆಸುಪಾಸಿನವರು. ಅವರ ಕುಟುಂಬಗಳ ಕಷ್ಟ ಇನ್ನೂ ತೀವ್ರವಾಗಿದೆ. ತಕ್ಷಣ 25 ಲಕ್ಷ ಪರಿಹಾರ ನೀಡಿ ಅವರ ದೇಹವನ್ನು ಅವರ ಹುಟ್ಟೂರಿಗೆ ಕಳಿಸಲು ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿದ್ದಾರೆ.

ಇನ್ನು ಮುಂದಾದರೂ ಹಣ ಪಡೆದು ಅಬಕಾರಿ ಲೈಸೆನ್ಸ್ ನೀಡುವುದನ್ನು ಮೊದಲು ನಿಲ್ಲಿಸಿ. CL 2, CL 7, CL 9 ಈ ಲೈಸೆನ್ಸ್‌ಗಳು ಕೊಟ್ಟ ಕಡೆ ನಿಯಮ ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಹುಲ್ಲು, ಮೆದೆ, ಬಂಬೂ, ಸೌದೆ ಅಲಂಕಾರ ಇವೆಲ್ಲಾ ನಿಷೇಧ ಮಾಡಬೇಕು. ಈಗಿನ ವ್ಯಾಪಾರಿಗಳಿಗೆ ಸಿಲಿಂಡರ್ ಎಲ್ಲಿಡಬೇಕು, ಒಲೆಗಳು ಹೇಗಿರಬೇಕು ಎಂಬ ತಿಳುವಳಿಕೆ ಇಲ್ಲ. ನಗರಪಾಲಿಕೆ, ಅಗ್ನಿಶಾಮಕ, ಚೆಸ್ಕಾಂ ಮತ್ತು ಅಬಕಾರಿ ಸಿಬ್ಬಂದಿ ಸರಿಯಾಗಿ ಕೆಲಸ ಮಾಡಿದರೆ ಇಂತಹ ಅವಘಡಗಳನ್ನು ತಡೆಗಟ್ಟಬಹುದಾಗಿದೆ. ಇವೆಲ್ಲದಕ್ಕೂ ಅಧಿಕಾರಿಗಳೇ ಹೊಣೆ ಎಂದು ಅವರು ದೂರಿದ್ದಾರೆ.

ಮುಂದುವರೆದ ಮೈಸೂರು ವಿವಿ ಎಸ್‌ಸಿ–ಎಸ್‌ಟಿ ಸಂಶೋಧಕರ ಪ್ರತಿಭಟನೆ

ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಉಪಮೇಯರ್ ವಿ.ಶೈಲೇಂದ್ರ ಭಾಗಿ, ಬೆಂಬಲ



ಮೈಸೂರು ವಿವಿ ಎಸ್‌ಸಿ/ಎಸ್‌ಟಿ ಸಂಶೋಧಕರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಭೇಟಿ ನೀಡಿ, ಬೆಂಬಲ ಸೂಚಿಸಿದರು.

ಮೈಸೂರು,ಜೂ.18(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಶೋಧಕರಿಗೆ ಶಿಷ್ಯವೇತನ ನೀಡುತ್ತಿಲ್ಲವೆಂದು ಆರೋಪಿಸಿ ಮೈಸೂರು ವಿಶ್ವವಿದ್ಯಾನಿಲಯ ಆಡಳಿತದ ವಿರುದ್ಧ ಕಪ್ಪುಪಟ್ಟಿ ಧರಿಸಿ ಕ್ರಾಫರ್ಡ್ ಭವನದ ಮುಂದೆ ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನಾ ಧರಣಿ ಮುಂದುವರೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ನೂತನ ಎಸ್‌ಸಿ ಮತ್ತು ಎಸ್‌ಟಿ ಸಂಶೋಧಕರಿಗೆ ಶಿಷ್ಯವೇತನ ನೀಡಲು ವಿಶ್ವವಿದ್ಯಾನಿಲಯ ಆಡಳಿತ ನಿರಾಕರಿಸಿದೆ ಎಂದು ಆರೋಪಿಸಿ ಸದರಿ ಸಂಶೋಧಕರು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ಮುಂದುವರೆಸಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಪ್ರವೇಶ ಪಡೆದ 116 ಎಸ್‌ಸಿ–ಎಸ್‌ಟಿ ಸಂಶೋಧಕರು ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಆಡಳಿತವು ಕೇವಲ 20 ಜನರಿಗೆ ಮಾತ್ರ ಶಿಷ್ಯವೇತನ ನೀಡುವುದಾಗಿ ತಿಳಿಸಿದೆ. ಇದರಿಂದ ಉಳಿದ ಸಂಶೋಧಕರು ಶಿಷ್ಯವೇತನದಿಂದ ವಂಚಿತರಾಗಿದ್ದಾರೆ ಎಂದು ಪ್ರತಿಭಟನಾನಿರತ ಸಂಶೋಧಕರು ಆರೋಪಿಸಿದರು.

ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಹ ಎಸ್‌ಸಿ–ಎಸ್‌ಟಿ ಸಂಶೋಧಕರಿಗೂ ಶಿಷ್ಯವೇತನ ಮಂಜೂರು ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನಾ ಸ್ಥಳಕ್ಕೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಬುಧವಾರ ಭೇಟಿ ನೀಡಿ, ಹೋರಾಟಕ್ಕೆ ಬೆಂಬಲ ಸೂಚಿಸಿದರು. ಅಲ್ಲದೆ, ವಿಶ್ವವಿದ್ಯಾನಿಲಯ ಕುಲಪತಿ ಅವರ ಜೊತೆ ಚರ್ಚಿಸಿ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶಿಕ್ಷಣ ಆಯುಕ್ತರ ಗಮನಕ್ಕೆ ತಂದು ತಕ್ಷಣ ಶಿಷ್ಯವೇತನವನ್ನು ಬಿಡುಗಡೆಗೊಳಿಸಬೇಕೆಂದು ಮಾಜಿ ಸಚಿವರು, ಶಾಸಕರು ಕುಲಪತಿಗಳಲ್ಲಿ ಮನವಿ ಮಾಡಿದರು.

ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಮಾತನಾಡಿ, ವಿವಿಯಿಂದ ಪ್ರತಿ ವರ್ಷವೂ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ಶಿಷ್ಯವೇತನದ ಬಗ್ಗೆ ತೊಂದರೆ ಆಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಎಸ್‌ಸಿ ಎಸ್‌ಟಿ ವಿದ್ಯಾರ್ಥಿಗಳ ಬಗ್ಗೆ ಇಂತಹ ತಾರತಮ್ಯ ಮುಂದುವರೆದರೆ ಕುಲಪತಿಗಳ ವಿರುದ್ಧ ಹಾಗೂ ಅಧಿಕಾರಗಳ ವಿರುದ್ಧ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ದೇಶ – ವಿದೇಶ

ಸಾಯಿಬಾಬಾ ದೇವಾಲಯದಲ್ಲಿ ವರ್ಷದಲ್ಲಿ 660 ಕೋಟಿ ರೂ. ದೇಣಿಗೆ ಸಂಗ್ರಹ



ಶಿರಡಿ: ಮಹಾರಾಷ್ಟ್ರದ ಪ್ರಸಿದ್ಧ ಸಾಯಿಬಾಬಾ ದೇವಾಲಯಕ್ಕೆ 2025–26ರಲ್ಲಿ ನಗದು, ಡಿಜಿಟಲ್ ಮತ್ತು ವಸ್ತು ರೂಪದಲ್ಲಿ ಸುಮಾರು 660 ಕೋಟಿ ರೂ. ದೇಣಿಗೆಗಳು ಹರಿದು ಬಂದಿವೆ.

ಈ ಮಧ್ಯೆ, ಸಂಸ್ಥಾನದ ಸ್ಥಿರ ಠೇವಣಿಗಳು 3,618 ಕೋಟಿ ರೂ.ಗಳಿಗೆ ತಲುಪಿದ್ದು, ಬಡ್ಡಿಯಿಂದ 256 ಕೋಟಿ ರೂ. ಆದಾಯ ಗಳಿಸಿದೆ. ಕಳೆದ ವರ್ಷ ಶಿರಡಿಗೆ 3 ಕೋಟಿಗೂ ಹೆಚ್ಚು ಭಕ್ತರು ಭೇಟಿ ನೀಡಿದ್ದು, ಭಕ್ತರ ದೇಣಿಗೆ ಮತ್ತು ಡಿಜಿಟಲ್ ಕೊಡುಗೆಗಳ ಹೆಚ್ಚಳದಿಂದಾಗಿ ಸಂಸ್ಥಾನದ ಆರ್ಥಿಕ ಸ್ಥಿತಿ ನಿರಂತರವಾಗಿ ಬೆಳವಣಿಗೆ ಕಾಣುತ್ತಿದೆ. ಸಾಯಿ ಸಂಸ್ಥಾನದ ಆಸ್ಪತ್ರೆಗಳಿಗೆ ಭಕ್ತರು 15ರಿಂದ 20 ಕೋಟಿ ರೂ.ಗಳವರೆಗೆ ಆಧುನಿಕ ವೈದ್ಯಕೀಯ ಉಪಕರಣಗಳನ್ನು ದಾನ ಮಾಡಿದ್ದಾರೆ. ವಿದೇಶಗಳಲ್ಲಿನ ಭಕ್ತರು ಸುಮಾರು 4.89 ಕೋಟಿ ಮೌಲ್ಯದ ವಿದೇಶಿ ಕರೆನ್ಸಿ ನೀಡಿದರೆ, 39.55 ಕೋಟಿ ದರ್ಶನ ಮತ್ತು ಆರತಿ ಶುಲ್ಕದಿಂದ ಬಂದಿದೆ. ಸಂಸ್ಥಾನವು ಈ ದೇಣಿಗೆಗಳನ್ನು ವಿವಿಧ ಸ್ಥಿರ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದು, ಇದರಿಂದ ಸಂಸ್ಥಾನಕ್ಕೆ ಬಡ್ಡಿ ಬರುತ್ತಿದೆ. ಭಕ್ತರ ಕೊಡುಗೆಯಿಂದ 2026, ಜೂನ್ 15ರ ಹೊತ್ತಿಗೆ ಸಂಸ್ಥಾನವು ಸುಮಾರು 151.87 ಕೋಟಿ ಮೌಲ್ಯದ 549.44 ಕೆಜಿ ಚಿನ್ನ ಮತ್ತು ಸುಮಾರು 25.33 ಕೋಟಿ ಮೌಲ್ಯದ 7,030.47 ಕೆಜಿ ಬೆಳ್ಳಿ ದಾಸ್ತಾನು ಹೊಂದಿದೆ.

ಅಮ್ಮನ ಭಾವಚಿತ್ರವುಳ್ಳ ಉಡುಗೆ ತೊಟ್ಟ ಒಬಾಮ ಪತ್ನಿ; ನೆರೆದವರ ಮೆಚ್ಚುಗೆ



ಚಿಕಾಗೋ: ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಪತ್ನಿ ಮಿಶೆಲ್ ಒಬಾಮಾ ಅವರು ತಮ್ಮ ದಿವಂಗತ ತಾಯಿಗೆ ಅತ್ಯಂತ ಭಾವುಕ ಹಾಗೂ ವಿಶೇಷ ರೀತಿಯಲ್ಲಿ ಗೌರವ ಸಲ್ಲಿಸಿದ್ದಾರೆ.

ಚಿಕಾಗೋದಲ್ಲಿ ನಡೆದ ಒಬಾಮಾ ಪ್ರೆಸಿಡೆನ್ಷಿಯಲ್ ಸೆಂಟರ್ ಕಾರ್ಯಕ್ರಮವೊಂದರಲ್ಲಿ ಅವರು ತಮ್ಮ ತಾಯಿಯ ಭಾವಚಿತ್ರ ವಿರುವ ವಿಶೇಷವಾದ ಸ್ಕರ್ಟ್ ಧರಿಸಿ, ಎಲ್ಲರ ಗಮನ ಸೆಳೆದಿದ್ದಾರೆ. ಆಕ್ನೆ ಸ್ಟುಡಿಯೋಸ್ ಬ್ರ್ಯಾಂಡ್ ವಿಶೇಷವಾಗಿ ವಿನ್ಯಾಸಗೊಳಿಸಿರುವ ಆ ಸ್ಕರ್ಟ್ ಮೇಲೆ ಮೈಕಲ್ ಅವರ ತಾಯಿ ಮರಿಯನ್ ಶೀಲ್ಡ್ ರಾಬಿನ್‌ಸನ್ ಅವರ ಸುಂದರವಾದ ಕಪ್ಪು–ಬಿಳುಪು ಭಾವಚಿತ್ರವನ್ನು ಮುದ್ರಿಸಲಾಗಿದೆ.

ಮಿಶೆಲ್ ಅವರು ವೇದಿಕೆಗೆ ಬರುತ್ತಿದ್ದಂತೆ ಅವರ ಉಡುಗೆ ಕಂಡು ಬರಾಕ್ ಒಬಾಮಾ ಭಾವುಕರಾಗಿದ್ದಾರೆ. ನನ್ನ ಪತಿಗೆ ಚೇತರಿಸಿಕೊಳ್ಳಲು ಸಮಯ ನೀಡಿ. ಏಕೆಂದರೆ ನನ್ನ ಉಡುಗೆಯಲ್ಲಿ ಅಮ್ಮನ ನನ್ನಿಷ್ಟದ ಫೋಟೋವಿಟ್ಟು ವಿನ್ಯಾಸ ಮಾಡಿಸಿರುವುದು ಅವರಿಗೂ ಈಗಲೇ ತಿಳಿದಿರುವುದು ಎಂದಿದ್ದಾರೆ. ಒಬಾಮ ಅವರು ಅಮೆರಿಕದ ಅಧ್ಯಕ್ಷರಾಗಿದ್ದ 8 ವರ್ಷ ಮೊಮ್ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಶ್ವೇತಭವನದಲ್ಲಿಯೇ ಇದ್ದ ಮಿಶೆಲ್ ಅವರ ತಾಯಿ ಮೇರಿಯನ್ 2024ರಲ್ಲಿ ನಿಧನರಾದರು.

ಮರಳು ಗಣಿಗಾರಿಕೆ ವಿವಾದ; ಬಿಜೆಪಿ ನಾಯಕನ ಕಾರಿಗೆ ಬೆಂಕಿ ಹಚ್ಚಿ ಹತ್ಯೆ




ಛತ್ತೀಸ್‌ಗಢ: ಮರಳು ಗಣಿಗಾರಿಕೆಗೆ ಸಂಬಂಧಿಸಿದ ದೀರ್ಘಕಾಲದ ವಿವಾದ ಹಿನ್ನೆಲೆಯಲ್ಲಿ ಕಾರಿಗೆ ಬೆಂಕಿ ಹಚ್ಚಿ ಬಿಜೆಪಿ ನಾಯಕರೊಬ್ಬರನ್ನು ಸಜೀವ ದಹನ ಮಾಡಿರುವ ಭಯಾನಕ ಘಟನೆ ಛತ್ತೀಸ್‌ಗಢದ ಕೊರಿಯಾ ಜಿಲ್ಲೆಯಲ್ಲಿ ನಡೆದಿದೆ.

ಸೋನ್‌ಹತ್ ಪೊಲೀಸ್ ಠಾಣೆ ವ್ಯಾಪ್ತಿಯ ನೌಗೈನ್ ಗ್ರಾಮದಲ್ಲಿ ಮಂಗಳವಾರ(ಜೂ.16) ತಡರಾತ್ರಿ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಬಿಜೆಪಿ ನಾಯಕ ಹಾಗೂ ಜನಪದ್ ಪಂಚಾಯತ್ ಮಾಜಿ ಅಧ್ಯಕ್ಷ ಭರತ್ ಸಿಂಗ್ ಹಾಗೂ ಇವರೊಂದಿಗಿದ್ದ ಇನ್ನಿಬ್ಬರು ಸಾವನ್ನಪ್ಪಿದ್ದಾರೆ. ಪೊಲೀಸರು ಆರೋಪಿಗಳಾದ ಅಕ್ಷತ್ ತ್ರಿಪಾಠಿ, ವಿಶಾಲ್ ತ್ರಿಪಾಠಿ, ಸತ್ಯಪ್ರಕಾಶ್ ತ್ರಿಪಾಠಿ ಮತ್ತು ಮನ್ನು ತ್ರಿಪಾಠಿಯನ್ನು ಬಂಧಿಸಿದ್ದು, ಇತರರಿಗಾಗಿ ಹುಡುಕಾಟ ಮುಂದುವರೆಸಿದ್ದಾರೆ.


ಮರಳು ಗಣಿಗಾರಿಕೆ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ವಿವಾದವನ್ನು ಇತ್ಯರ್ಥಪಡಿಸಲು ಭರತ್ ಸಿಂಗ್ ತೆರಳಿದ್ದಾಗ ಫಾರ್ಚೂನರ್ ಕಾರನ್ನು ಟ್ರಕ್‌ಗಳಿಂದ ಸುತ್ತುವರೆದ ದುಷ್ಕರ್ಮಿಗಳು, ಅವರ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ. ಈ ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡ ಮತ್ತೊಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಾಕಿಸ್ತಾನದ ಗುಂಪಿನಿಂದ ಬ್ರಿಟನ್‌ನಲ್ಲಿ ನಿರಂತರ ಲೈಂಗಿಕ ದೌರ್ಜನ್ಯ ಆರೋಪ!



ಲಂಡನ್: ಪಾಕಿಸ್ತಾನ ಮೂಲದ ಪುರುಷರ ಗುಂಪು ಬ್ರಿಟನ್‌ನ 2.5 ಲಕ್ಷಕ್ಕೂ ಅಧಿಕ ಮಕ್ಕಳು ಮತ್ತು ಸ್ತ್ರೀಯರ ಮೇಲೆ ದಶಕಗಳಿಂದ ಲೈಂಗಿಕ ಶೋಷಣೆ ನಡೆಸುತ್ತಿದೆ ಎಂದು ಬ್ರಿಟನ್ ಸಂಸದ ರೂಪರ್ಟ್ ಲೋವ್ ಸಂಸತ್ತಿನಲ್ಲಿ ಪ್ರಸ್ತಾಪಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ. ಸಾವಿರಾರು ಬಾಲಕಿಯರು ಮತ್ತು ಮಹಿಳೆಯರು ಈ ಶೋಷಣೆಗೆ ಒಳಗಾಗಿದ್ದಾರೆ. ಈ ಪ್ರಕರಣಗಳಲ್ಲಿ ಭಾಗಿಯಾಗಿದ್ದವರಲ್ಲಿ ಬಹುತೇಕರು ಪಾಕಿಸ್ತಾನ ಮೂಲದ ಟ್ಯಾಕ್ಸಿ ಚಾಲಕರು ಹಾಗೂ ಸಣ್ಣ ವ್ಯಾಪಾರಿಗಳಾಗಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ 700 ಪಾಕಿಸ್ತಾನಿಗಳಿಂದ ಅತ್ಯಾಚಾರ ಕೃತ್ಯ ನಡೆದಿದೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಸಂಸತ್ತಿನಲ್ಲಿ ಸಂತ್ರಸ್ತೆಯರ ಹೇಳಿಕೆಗಳನ್ನೂ ಕೇಳಿಸಲಾಗಿದೆ. ತಮ್ಮನ್ನು ಬಂಧಿಸಿ ಹಿಂಸೆ ನೀಡಲಾಗುತ್ತಿತ್ತು. ಘಟನೆ ಬಗ್ಗೆ ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಹಾಗೂ ಕುಟುಂಬಕ್ಕೆ ಹಾನಿ ಮಾಡುವುದಾಗಿ ಬೆದರಿಕೆ ಹಾಕಲಾಗುತ್ತಿತ್ತು ಎಂದು ಆರೋಪಿಸಿದ್ದಾರೆ. ಈ ಪ್ರಕರಣಗಳಿಂದಾಗಿ ಮಕ್ಕಳ ಸುರಕ್ಷತೆ, ವಲಸೆ ನೀತಿ, ಪೊಲೀಸ್ ತನಿಖೆ ಮತ್ತು ಸಾಮಾಜಿಕ ಹೊಣೆಗಾರಿಕೆ ಕುರಿತಂತೆ ಮತ್ತೆ ಪ್ರಶ್ನೆಗಳು ಎದ್ದಿವೆ.

ಬೊಲೆರೋ ವಾಹನ ಕಂದಕಕ್ಕೆ ಉರುಳಿ 7 ಮಂದಿ ದುರ್ಮರಣ



ಹಿಮಾಚಲ ಪ್ರದೇಶ: ಬೊಲೆರೋ ವಾಹನವೊಂದು ಕಂದಕಕ್ಕೆ ಉರುಳಿ ಬಿದ್ದು ಒಂದೇ ಕುಟುಂಬದ ಆರು ಮಂದಿ ಹಾಗೂ ಚಾಲಕ ಸೇರಿ ಒಟ್ಟು 7 ಜನ ಸಾವನ್ನಪ್ಪಿರುವ ಘಟನೆ ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿ ಸಂಭವಿಸಿದೆ. ಕುಟುಂಬಸ್ಥರು ಕಾರ್ಯಕ್ರಮವೊಂದಕ್ಕೆ ಹೋಗಿ ಹಿಂದಿರುಗುವಾಗ ಚಂಬಾ–ಮಸ್ರುಂಡ್ ರಸ್ತೆಯ ಛತ್ರಂಡ್ ಬಳಿ ಬೆಳಗಿನ ಜಾವ ಎರಡು ಗಂಟೆಯ ಸುಮಾರಿಗೆ ಈ ದುರ್ಘಟನೆ ನಡೆದಿದ್ದು, ಘಟನೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯ ನಿವಾಸಿಗಳು ಮತ್ತು ಪೊಲೀಸರು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಬೊಲೆರೊ ವಾಹನವೊಂದು ನಿಯಂತ್ರಣ ತಪ್ಪಿ 500 ಮೀಟರ್ ಆಳದ ಕಂದಕಕ್ಕೆ ಉರುಳಿ ಬಿದ್ದಿದ್ದು, 7 ಮಂದಿ ಮೃತದೇಹಗಳನ್ನು ಚಂಬಾದ ಪಂಡಿತ್ ಜವಾಹರಲಾಲ್ ನೆಹರು ಸರ್ಕಾರಿ ವೈದ್ಯಕೀಯ ಕಾಲೇಜಿನ ಶವಾಗಾರಕ್ಕೆ ಸಾಗಿಸಲಾಗಿದೆ. ಈ ಸಂಬಂಧ ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.


ಈ ಬಗ್ಗೆ ಚುರಾಹ್‌ನ ಬಿಜೆಪಿ ಶಾಸಕ ಹಂಸರಾಜ್ ಪ್ರತಿಕ್ರಿಯಿಸಿ, ಈ ಪ್ರದೇಶದಲ್ಲಿ ಅಪಘಾತ ತಡೆಗೋಡೆಗಳಿಲ್ಲದಿರುವುದು ಇಂತಹ ದುರಂತಗಳಿಗೆ ಕಾರಣ. ಈ ಬಗ್ಗೆ ಲೋಕೋಪಯೋಗಿ ಇಲಾಖೆ ಗಮನ ಹರಿಸಬೇಕು ಎಂದು ಹೇಳಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 19 ಜೂನ್ 2026

ಒಂಟಿ ಸಲಗ ಪ್ರತ್ಯಕ್ಷ

ವಿರಾಜಪೇಟೆ ಬಳಿ ರಸ್ತೆ ದಾಟುತ್ತಿರುವ ವೀಡಿಯೊ ವೈರಲ್, ಗ್ರಾಮಸ್ಥರಲ್ಲಿ ಆತಂಕ

ಸಿದ್ದಾಪುರ, ಜೂ.18– ವಿರಾಜಪೇಟೆ ತಾಲೂಕಿನ ಅಮ್ಮತ್ತಿ–ಒಂಟಿಯಂಗಡಿ ಮುಖ್ಯ ರಸ್ತೆಯಲ್ಲಿ ಗುರುವಾರ ಬೆಳಗ್ಗೆ ಒಂಟಿ ಸಲಗ ರಸ್ತೆ ದಾಟುವ ಮೂಲಕ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.



ಈ ದೃಶ್ಯವನ್ನು ವಾಹನ ಸವಾರರು ಹಾಗೂ ಸಾರ್ವಜನಿಕರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ವೀಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವ ಮೂಲಕ ಭಾರೀ ವೈರಲ್ ಉಂಟುಮಾಡಿದ್ದಾರೆ. ರಸ್ತೆ ದಾಟಿದ ಕಾಡಾನೆ ಸಮೀಪದ ಕಾಫಿ ತೋಟದೊಳಗೆ ನುಸುಳಿದ್ದು, ಅಲ್ಲಿಯೇ ಬೀಡುಬಿಟ್ಟಿದೆ ಎಂದು ತಿಳಿದು ಬಂದಿದೆ.

ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ಕಾಡಾನೆಗಳ ಓಡಾಟ ಹೆಚ್ಚಾಗಿದ್ದು, ಜನರು ಆತಂಕದ ವಾತಾವರಣದಲ್ಲಿ ಓಡಾಡುವಂತಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ಬೆಳಗಿನ ವಾಕಿಂಗ್‌ಗೆ ತೆರಳುವ ಸಾರ್ವಜನಿಕರ ಸುರಕ್ಷತೆ ಬಗ್ಗೆ ಗ್ರಾಮಸ್ಥರು ಕಳವಳ ವ್ಯಕ್ತಪಡಿಸಿದ್ದಾರೆ. ತೋಟದಲ್ಲಿ ನೆಲೆಸಿರುವ ಒಂಟಿ ಸಲಗವನ್ನು ಅರಣ್ಯ ಇಲಾಖೆ ತಕ್ಷಣ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ಕಾಡಿಗೆ ಅಟ್ಟಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಯಾವುದೇ ಅನಾಹುತ ಸಂಭವಿಸುವ ಮುನ್ನ ಸೂಕ್ತ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮಡಿಕೇರಿ ಜೈಲಿನಲ್ಲಿ ಖೈದಿ ಸಾವು

ಮಡಿಕೇರಿ, ಜೂ.18– ಮಡಿಕೇರಿ ಹೊರ ವಲಯದ ಕರ್ಣಂಗೇರಿ ಗ್ರಾಮದಲ್ಲಿರುವ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬರು ಸಾವನ್ನಪ್ಪಿದ ಘಟನೆ ನಡೆದಿದೆ.

ಮೂರ್ನಾಡು ಎಂ.ಬಾಡಗ ನಿವಾಸಿ ಹರೀಶ್(47) ಮೃತ ವಿಚಾರಣಾಧೀನ ಕೈದಿಯಾಗಿದ್ದಾರೆ. ಮೃತ ಹರೀಶ್ ವಿರುದ್ಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2026ರ ಏಪ್ರಿಲ್ 3 ರಂದು ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಪ್ರಕರಣ ದಾಖಲಾಗಿದ್ದು, ಬಳಿಕ ಜೈಲು ಪಾಲಾಗಿದ್ದ.

ಘಟನೆ ಹಿನ್ನೆಲೆ: ಹರೀಶ್ ಬುಧವಾರ ಎಂದಿನಂತೆ ರಾತ್ರಿ ಊಟ ಸೇವಿಸಿ ಮಲಗಿದ್ದು, ಗುರುವಾರ ಬೆಳಗಿನ ಜಾವ ಬ್ಯಾರಕ್‌ನಲ್ಲಿದ್ದ ಇತರ ವಿಚಾರಣಾಧೀನ ಕೈದಿಗಳು ಎಚ್ಚರವಾಗಿದ್ದಾರೆ. ಆದರೆ ತಡವಾದರೂ ಹರೀಶ್ ಎಚ್ಚರವಾಗದ ಹಿನ್ನೆಲೆಯಲ್ಲಿ ಹರೀಶ್‌ನನ್ನು ಎಬ್ಬಿಸಲು ಪ್ರಯತ್ನಿಸಿದರೂ ಆತ ಏಳಲಿಲ್ಲ. ಈ ಹಿನ್ನೆಲೆಯಲ್ಲಿ ಸಹ ಕೈದಿಗಳು ಜೈಲು ಸಿಬ್ಬಂದಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಸಿಬ್ಬಂದಿಗಳು ಅಧಿಕಾರಿಗಳ ಸಮ್ಮುಖದಲ್ಲಿ ಹರೀಶ್‌ನನ್ನು ಪರಿಶೀಲಿಸಿದ ಸಂದರ್ಭ ಆತ ಮೃತಪಟ್ಟಿರುವುದು ಕಂಡು ಬಂದಿದೆ.

ನ್ಯಾಯಾಂಗ ಬಂಧನದ ಅವಧಿಯಲ್ಲಿ ಜೈಲಿನಲ್ಲಿ ವಿಚಾರಣಾಧೀನ ಕೈದಿ ಮೃತಪಟ್ಟ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಯಿತು. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ




ವೃತ್ತ ನಿರೀಕ್ಷಕ ಚಂದ್ರಶೇಖರ್ ಮತ್ತು ಸಿಬ್ಬಂದಿಗಳು ಜೈಲಿಗೆ ತೆರಳಿ ಪರಿಶೀಲನೆ ನಡೆಸಿದರು. ಜೈಲಿನ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಹರೀಶ್ ಜೊತೆಯಲ್ಲಿ ಬ್ಯಾರಕ್‌ನಲ್ಲಿ ಬಂಧನದಲ್ಲಿದ್ದ ಇತರ ವಿಚಾರಣಾಧೀನ ಕೈದಿಗಳಿಂದ ಘಟನೆ ಕುರಿತು ಮಾಹಿತಿ ಪಡೆದರು. ನಂತರ ಸ್ಥಳ ಮಹಜರು ನಡೆಸಲಾಗಿದ್ದು, ಬಳಿಕ ಜೈಲು ನಿಯಮದಂತೆ ನ್ಯಾಯಾಧೀಶರ ಆದೇಶದನ್ವಯ ಮೃತದೇಹವನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು.

ವಿಚಾರಣಾಧೀನ ಕೈದಿ ಹರೀಶ್ ಸಾವಿಗೆ ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ನಿಖರ ಕಾರಣ ತಿಳಿಯಲಿದೆ. ಮೇಲ್ನೋಟಕ್ಕೆ ಹೃದಯಾಘಾತದಿಂದ ಹರೀಶ್ ಮೃತಪಟ್ಟಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಪ್ರವಾಸಿ ತಾಣದಲ್ಲಿ ಕಸದ ರಾಶಿ

ಪ್ರವಾಸಿಗರಿಗೆ ಸ್ಥಳೀಯರ ತರಾಟೆ



ವಿರಾಜಪೇಟೆ, ಜೂ.18– ಕೊಡಗು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಎಲ್ಲೆಂದರಲ್ಲಿ ಕಸ ಬಿಸಾಡುವ ಪ್ರವಾಸಿಗರ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿರಾಜಪೇಟೆ ತಾಲೂಕಿನ ಕಾಕೋಟುಪರಂಬು ಗ್ರಾಮದ ಸಾರ್ವಜನಿಕ ಹಸಿರು ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಆಹಾರ ಪ್ಯಾಕೆಟ್‌ಗಳನ್ನು ಯದ್ವಾ–ತದ್ವಾ ಬಿಸಾಡಿರುವ ಪ್ರವಾಸಿಗರ ಗುಂಪಿಗೆ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

ಕೊಡಗಿಗೆ ಪ್ರವಾಸಕ್ಕೆ ಬಂದಿದ್ದ ಗುಂಪೊಂದು ಕಾಕೋಟುಪರಂಬುವಿನ ಹಸಿರು ವಲಯದಲ್ಲಿ ಪಾರ್ಟಿ ಮಾಡಿ, ತ್ಯಾಜ್ಯವನ್ನು ಅಲ್ಲೇ ಬಿಟ್ಟು ತೆರಳಿದೆ. ಸ್ಥಳೀಯರು ಇದನ್ನು ಗಮನಿಸಿ ಪ್ರವಾಸಿಗರನ್ನು ತಡೆದು, ನಿಮ್ಮ ಕಸವನ್ನು ನೀವೇ ಸ್ವಚ್ಛಗೊಳಿಸಿ ಎಂದು ಕಾರಿನ ಸುತ್ತ ಕಸ ಸುರಿದು ಪ್ರವಾಸಕ್ಕೆ ಬಂದರೆ ಶಿಸ್ತು ಇರಲಿ. ಪ್ರತಿ ವಾರಾಂತ್ಯದಲ್ಲಿ ಹೀಗೇ ಆಗುತ್ತಿದೆ. ಹೊರಗಿನಿಂದ ಬರುವ ಕೆಲವರು ಕುಡಿದು, ಕಸ ಹಾಕಿ ಹೋಗ್ತಾರೆ. ದಂಡ ವಿಧಿಸಬೇಕು. ಕೊಡಗು ಜೈವಿಕ ವೈವಿಧ್ಯ ತಾಣ. ಪ್ಲಾಸ್ಟಿಕ್‌ನಿಂದ ಕಾವೇರಿ ನದಿ ಮಲಿನ ಆಗುತ್ತಿದೆ. ಪ್ರವಾಸಿಗರಿಗೆ ಅರಿವು ಮೂಡಿಸುವ ಬೋರ್ಡ್ ಹಾಕಬೇಕು. ಜನ ಜವಾಬ್ದಾರಿಯಿಲ್ಲದೆ ವರ್ತಿಸುತ್ತಾರೆ ಎಂದು ಸ್ಥಳೀಯರು ಆರೋಪಿಸಿ ವಿರಾಜಪೇಟೆ ತಹಶೀಲ್ದಾರ್ ಅವರನ್ನು ಸಂಪರ್ಕಿಸಿದಾಗ, ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವುದು ಶಿಕ್ಷಾರ್ಹ ಅಪರಾಧ. 500 ರಿಂದ 5000 ವರೆಗೆ ದಂಡ ವಿಧಿಸಬಹುದು. ಪ್ರವಾಸಿಗರಿಗೆ ಜಾಗೃತಿ ಮೂಡಿಸಲು ವಿಶೇಷ ಅಭಿಯಾನ ಆರಂಭಿಸುತ್ತೇವೆ ಎಂದರು.

ಜಿಲ್ಲೆಯಲ್ಲಿ ಬಾರದ ಮಳೆಯಿಂದ ಆತಂಕ

ಕೊಡಗಲ್ಲಿ ಮಳೆಗಾಗಿ ನಾಳೆ ಪರ್ಜನ್ಯ ಜಪ

ಮಡಿಕೇರಿ,ಜೂ.18– ಮಳೆಗಾಲ ಆರಂಭಗೊಂಡು ಎರಡು ವಾರಗಳೇ ಕಳೆದಿದ್ದರೂ ಕಾವೇರಿ ನಾಡು ಕೊಡಗಿಗೆ ಮಳೆಯಾಗದೆ ಇರುವುದರಿಂದ ಆತಂಕ ಎದುರಾಗಿದೆ.

ಈ ಕಾರಣದಿಂದ ಮಳೆಗಾಗಿ ಪ್ರಾರ್ಥಿಸಲು ನಾಪೋಕ್ಲು ಹೋಬಳಿಯ ಬಲಮುರಿಯ ಶ್ರೀ ಅಗಸ್ತ್ಯೇಶ್ವರ ದೇವಾಲಯದಲ್ಲಿ ಜೂ.20ರಂದು ವಿಶ್ವ ಹಿಂದೂ ಪರಿಷತ್ ವತಿಯಿಂದ ಪರ್ಜನ್ಯ ಜಪ ನಡೆಸಲಾಗುವುದು ಎಂದು ವಿಹೆಚ್‌ಪಿಯ ಕೊಡಗು ಜಿಲ್ಲಾ ಮಠ ಮಂದಿರ ಪುರೋಹಿತ ಪ್ರಮುಖ್ ಮಹಾಬಲೇಶ್ವರ ಭಟ್ ತಿಳಿಸಿದ್ದಾರೆ. ಶನಿವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಅಗಸ್ತ್ಯೇಶ್ವರನ ಸನ್ನಿಧಿಯಲ್ಲಿ ಪರ್ಜನ್ಯ ಜಪ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ, ರುದ್ರ ಪಠಣ, ಮಹಾಪೂಜೆ, ಮಹಾ ಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿತರಣೆಯಾಗಲಿದೆ. ಭಕ್ತರು ದೇವರಿಗೆ ಹಾಲು, ಹಣ್ಣು, ಎಳನೀರು, ತೆಂಗಿನ ಕಾಯಿ, ಮೊಸರು, ಜೇನು, ಹಸುವಿನ ತುಪ್ಪ ಮತ್ತು ಹೂವನ್ನು ತರಬಹುದು.

ನಾಡಿಗೆ ಉತ್ತಮ ಮಳೆ ಬೆಳೆಯಾಗಿ ಸಮೃದ್ಧಿಯಾಗಲಿ ಎಂದು ಪ್ರಾರ್ಥಿಸಲು ಜಿಲ್ಲೆಯ ಸರ್ವ ಭಕ್ತರು, ವಿಶ್ವ ಹಿಂದೂ ಪರಿಷತ್ ಸೇರಿದಂತೆ ವಿಶ್ವ ಹಿಂದೂ ಸಂಘಟನೆಗಳ ಪ್ರಮುಖರು, ಕಾರ್ಯಕರ್ತರು, ಬಲಮುರಿ ಗ್ರಾಮಸ್ಥರು, ದೇವಾಲಯದ ತಕ್ಕರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೊಡಗು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಪರವಾಗಿ ಮಹಾಬಲೇಶ್ವರ ಭಟ್ ಮನವಿ ಮಾಡಿದ್ದಾರೆ.

ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ವಿರೋಧಿಸುವುದು ಕಾನೂನಿಗೆ ತೋರುವ ಅಗೌರವ

ಮಡಿಕೇರಿ,ಜೂ.18–ಪ್ರಗತಿಪರ ಸಂಘಟನೆಯ ಹೆಸರಿನಲ್ಲಿ ವಿವಿಧ ಸಂಘ–ಸಂಸ್ಥೆಗಳು ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯನ್ನು ವಿರೋಧಿಸುತ್ತಿರುವುದು ಹಾಸ್ಯಾಸ್ಪದ ಮತ್ತು ದೇಶದ ಕಾನೂನಿಗೆ ತೋರುವ ಅಗೌರವವಾಗಿದೆ ಎಂದು ಬಿಜೆಪಿ ಎಸ್.ಸಿ ಮೋರ್ಚಾದ ಕೊಡಗು ಜಿಲ್ಲಾಧ್ಯಕ್ಷ ಪಿ.ಎಂ.ರವಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರತಿಭಟನೆ ನಡೆಸುವುದರಿಂದ ಅಕ್ರಮ ಮತದಾನ ಮಾಡುವವರಿಗೆ ಪ್ರೇರಣೆ ನೀಡಿದಂತಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ನಾಪೋಕ್ಲು ಅಂಕುರ್ ಪಬ್ಲಿಕ್ ಶಾಲೆಯಲ್ಲಿ ಪದಗ್ರಹಣ ಸಮಾರಂಭ



ಅಂಕುರ್ ಪಬ್ಲಿಕ್ ಶಾಲೆಯ ನೂತನ ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭದಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿ ನಾಯಕರ ಜೊತೆ ಗಣ್ಯರು ಹಾಗೂ ಬೋಧಕ ವೃಂದ

ನಾಪೋಕ್ಲು: ಇಲ್ಲಿನ ಅಂಕುರ್ ಪಬ್ಲಿಕ್ ಶಾಲೆಯಲ್ಲಿ ನೂತನ ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ ಶಾಲಾ ಸಭಾಂಗಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರನ್ನು ಅಧಿಕೃತವಾಗಿ ಆಯ್ಕೆ ಮಾಡಿ ಅವರಿಗೆ ಬ್ಯಾಡ್ಜ್‌ಗಳು ಮತ್ತು ಹೊಣೆಗಾರಿಕೆ ಚಿಹ್ನೆಗಳನ್ನು ನೀಡಲಾಯಿತು. ಶಾಲಾ ನಾಯಕ ಗೇಲ್ ಪೊನ್ನಣ್ಣ, ನಾಯಕಿ ರಿಷ್ಟ ಪೂಣಚ್ಚ, ಕ್ರೀಡಾ ನಾಯಕ ಲಿತನ್ ಪೂಣಚ್ಚ ನಾಯಕಿ ಶ್ರಾವ್ಯ ಮುತ್ತಮ್ಮ ಹಾಗೂ ವಿವಿಧ ಸದನಗಳ ನಾಯಕರಿಗೆ ಅಧಿಕಾರ ಹಸ್ತಾಂತರಿಸಲಾಯಿತು.

ಶಾಲೆಯ ಅಧ್ಯಕ್ಷ ಕೇಟೋಳಿರ ರಾಜ ಚೆರ್ಮನ ಅಧ್ಯಕ್ಷತೆ ವಹಿಸಿದ ಕಾರ್ಯಕ್ರಮದಲ್ಲಿ ಶಾಲಾ ಕಾರ್ಯದರ್ಶಿ ಕೇಟೋಳಿರ ರತ್ನ ಚರ್ಮಣ ವಿದ್ಯಾರ್ಥಿಗಳಿಗೆ ನಾಯಕತ್ವ, ಶಿಸ್ತು ಮತ್ತು ಜವಾಬ್ದಾರಿಯ ಮಹತ್ವದ ಬಗ್ಗೆ ಮಾರ್ಗದರ್ಶನ ನೀಡಿದರು. ನಂತರ ನೂತನ ಪದಾಧಿಕಾರಿಗಳಿಗೆ ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಈ ಸಂದರ್ಭ ಮುಖ್ಯೋಪಾಧ್ಯಾಯಿನಿ ಮಮತಾ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಲು ಹಾಗೂ ಜವಾಬ್ದಾರಿಯ ಅರಿವು ಮೂಡಿಸುವ ನಿಟ್ಟಿನಲ್ಲಿ ಮಾತನಾಡಿ ಶುಭ ಹಾರೈಸಿದರು.

ಶಿಕ್ಷಕಿ ಆಶಾ ಬೋಪಣ್ಣ, ಬೋಧಕ ವೃಂದಾ ಹಾಗೂ ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶೌರ್ಯ ತಂಡದ ಸದಸ್ಯರಿಂದ ಶ್ರಮದಾನ

ನಾಪೋಕ್ಲು: ಸಮೀಪದ ಮೂರ್ನಾಡು ಶೌರ್ಯ ತಂಡದ ಸದಸ್ಯರು ಹಾಗೂ ಹಳೆ ವಿದ್ಯಾರ್ಥಿಗಳು ಒಟ್ಟಾಗಿ ಸಮೀಪದ ಬಲಮುರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣವನ್ನು ಶ್ರಮದಾನದ ಮೂಲಕ ಸ್ವಚ್ಛತೆಯನ್ನು ಮಾಡಿದರು..

ಸಂಯೋಜಕಿ ದಿವ್ಯ ಹಾಗೂ ಸೇವಾ ಪ್ರತಿನಿಧಿ ಕಾವೇರಿ ನೇತೃತ್ವದಲ್ಲಿ ಶಾಲಾ ಆವರಣವನ್ನು ಸ್ವಚ್ಛಗೊಳಿಸಲಾಯಿತು. ಹಳೆಯ ವಿದ್ಯಾರ್ಥಿಗಳಾದ ಪ್ರಶಾಂತ್ ಮುತ್ತಣ್ಣ ಕೋಳಿಮಾಡು, ಮಂಜು, ದಯಾನಂದ ಪೊನ್ನಚನ, ಮಮತ ಬಾಕೀಲನ ಹಾಗೂ ಶೌರ್ಯ ತಂಡದ ಸದಸ್ಯರಾದ ದಿವ್ಯ, ಪುಷ್ಪ, ನಿರ್ಮಲ, ಮುಖ್ಯಶಿಕ್ಷಿಕಿ ದಮಯಂತಿ, ಶಿಕ್ಷಕಿ ಸುನಿತಾ ಇದ್ದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಏರಿಕೆ ಖಂಡಿಸಿ ತಹಸೀಲ್ದಾರ್‌ಗೆ ಮನವಿ

ವಿರಾಜಪೇಟೆ,ಜೂ.18– ಪೆಟ್ರೋಲ್,ಡೀಸೆಲ್, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಯುವಜನ ಸಂಘಟನೆ(ಎಐವೈಎಫ್) ವತಿಯಿಂದ ವಿರಾಜಪೇಟೆ ತಾಲೂಕು ತಹಸೀಲ್ದಾರ್ ಪಿ.ಸಿ.ಪ್ರವೀಣ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಗೌರವ ಅಧ್ಯಕ್ಷ ಎಂ.ಕೆ.ಮೋಹನ್ ಮತನಾಡಿ ಕೇಂದ್ರ ಸರಕಾರ ಇಂಧನ, ಅಡುಗೆ ಅನಿಲ, ಉಜ್ವಲ ಯೋಜನೆಯ ಸಬ್ಸಿಡಿ ಕಡಿತ ಗೊಳಿಸಿರುವುದು ಸರಿಯಲ್ಲ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿರುವುದರಿಂದ ಸಂಕಷ್ಟದಲ್ಲಿರುವ ಬಡಕಾರ್ಮಿಕರ ಮೇಲೆ ಮತ್ತಷ್ಟು ಹೊರೆ ಹಾಕಿರುವುದರಿಂದ ಜನರು ತತ್ತರಿಸಿ ಹೋಗಿದ್ದಾರೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತು ಅಗತ್ಯ ವಸ್ತುಗಳ ಬೆಲೆಯನ್ನು ಕೂಡಲೇ ಇಳಿಸುವಂತೆ ಆಗ್ರಹಿಸಿದರು.

ಮನವಿ ಸ್ವೀಕರಿಸಿದ ತಹಸೀಲ್ದಾರ್ ಪ್ರವೀಣ್ ಕುಮಾರ್ ಬೆಲೆ ಏರಿಕೆ ಸರಕಾರದ ವ್ಯಾಪ್ತಿಗೆ ಸೇರಿದೆ. ಮನವಿ ಕಳಿಸುವ ಕೆಲಸವನ್ನು ನಾವು ಮಾಡುತ್ತೇವೆ ಎಂದರು. ಈ ಸಂದರ್ಭ ಯುವಜನ ಸಂಘಟನೆಯ ಅಧ್ಯಕ್ಷ ತೋಲ, ಕಾರ್ಯದರ್ಶಿ ಪಿ.ಎಂ.ರಾಜೇಶ್, ಪಿ.ಬಿ.ಮಂಜು, ಆದಿವಾಸಿ ಸಂಘಟನೆಯ ಪಿ.ಎಂ.ಗೌರಿ, ಮುತ್ತ ಸುಬ್ರಮಣಿ, ರಾಜು, ಮಾರ, ಸರಸು, ಪೊನ್ನಕ್ಕಿ, ರವಿ ಮತ್ತು ಸಂಘದ ಸದಸ್ಯರು ಇದ್ದರು.



ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಯುವಜನ ಸಂಘಟನೆಯಿಂದ ತಹಶೀಲ್ದಾರ್ ಪಿ.ಸಿ.ಪ್ರವೀಣ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜೇಶ್ವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಚಾಲನೆ



ಚಾಮರಾಜೇಶ್ವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ನಡೆಯಿತು.

ಚಾಮರಾಜನಗರ, ಜೂ.18– ನಗರದ ಐತಿಹಾಸಿಕ ಚಾಮರಾಜೇಶ್ವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಮೊದಲ ದಿನದ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ನೆರವೇರಿದವು.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ 1948ರ ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಜ್ಯೇಷ್ಠ ಶುದ್ಧ ಚೌತಿಯ ಪ್ರಯುಕ್ತ ಸಂಜೆ 6 ಗಂಟೆಗೆ ಅನುಜ್ಞಾಪೂರ್ವಕ ಎಣ್ಣೆ–ಅರಿಶಿನ ಶಾಸ್ತ್ರ ಕಾರ್ಯಕ್ರಮ ಜರುಗಿತು. ಬಳಿಕ ರಾತ್ರಿ 8 ಗಂಟೆಗೆ ವರಪೂಜಾ ಮಹೋತ್ಸವವನ್ನು ವಿಧಿವತ್ತಾಗಿ ನೆರವೇರಿಸಲಾಯಿತು.

ಗಿರಿಜಾ ಕಲ್ಯಾಣ ಮಹೋತ್ಸವದ ಮೊದಲ ದಿನದ ಅಂಗವಾಗಿ ಚಾಮರಾಜೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿದ್ದು, ವೇದೋಕ್ತ ಪೂಜಾ ವಿಧಿ–ವಿಧಾನಗಳು ನಡೆದವು. ನಂತರ ಮಹಾಮಂಗಳಾರತಿ ನೆರವೇರಿಸಿ ಭಕ್ತರಿಗೆ ತೀರ್ಥ–ಪ್ರಸಾದ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ದೇವರ ಉತ್ಸವ ಮೂರ್ತಿಗಳ ಮೆರವಣಿಗೆಯನ್ನು ದೇವಸ್ಥಾನದ ಸುತ್ತಲೂ ಭಕ್ತಿಭಾವದಿಂದ ನಡೆಸಲಾಯಿತು. ಮೆರವಣಿಗೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದರು. ಕಾರ್ಯಕ್ರಮದಲ್ಲಿ ಚಾಮರಾಜೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಆಗಮಿಕ ದರ್ಶನ್, ಕೆಂಪನಂಜಾಂಬ ತಾಯಿಯ ಅರ್ಚಕ ರಾಮಕೃಷ್ಣ ಭಾರದ್ವಾಜ್, ಉತ್ಸವ ಸಮಿತಿ ಸದಸ್ಯರು, ಚಾಮರಾಜನಗರ ತಾಲೂಕು ತಹಸೀಲ್ದಾರ್ ಗಿರಿಜಾ, ಶಿರಸ್ತೇದಾರರು ಹಾಗೂ ಭಕ್ತಾದಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಮುಂದಿನ ದಿನಗಳಲ್ಲಿಯೂ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಪೋಸ್ಟ್

ಆರೋಪಿ ಗಡಿಪಾರಿಗೆ ಆಗ್ರಹಿಸಿ ಮುಡಿಗುಂಡದಲ್ಲಿ ಪ್ರತಿಭಟನೆ

ಕೊಳ್ಳೇಗಾಲ, ಜೂ.18– ಅಂಬೇಡ್ಕರ್ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದ ಆರೋಪಿಯನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ದಲಿತ ಮುಖಂಡರು ಪಟ್ಟಣದ ಮುಡಿಗುಂಡದಲ್ಲಿ ಪ್ರತಿಭಟನೆ ನಡೆಸಿದರು.

ಮುಡಿಗುಂಡದ ರೇಷ್ಮೆ ಮಾರುಕಟ್ಟೆ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿದರು. ಆರೋಪಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಆರೋಪಿ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದು.

ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಕುರಿತು ನ್ಯೂಸ್ ಚಾನೆಲ್‌ನಲ್ಲಿ ಪ್ರಕಟವಾಗಿದ್ದ ವರದಿ ಕುರಿತು ಕಾಮೆಂಟ್ ಬಾಕ್ಸ್‌ನಲ್ಲಿ ಮುಡಿಗುಂಡ ನಿವಾಸಿ ಮಂಜು ದರ್ಶನ್ ಎಂಬ ತನ್ನ ಫೇಸ್‌ಬುಕ್ ಖಾತೆಯಿಂದ ಅವಹೇಳನಕಾರಿಯಾಗಿ ಕಾಮೆಂಟ್ ಮಾಡಿದ್ದು ಈಗಾಗಲೇ ಈತನನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಕೂಡಲೇ ಆತನ ಮೇಲೆ ಕಾನೂನು ಕ್ರಮ ಜರುಗಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಮುಖಂಡ ಮುಡಿಗುಂಡ ಮೂರ್ತಿ ಮಾತನಾಡಿ, ಬಡಾವಣೆಯ ನಿವಾಸಿ ಮಂಜು @ ದರ್ಶನ್ ಎಂಬಾತ ಅಂಬೇಡ್ಕರ್ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಅವಹೇಳನಕಾರಿ ಕಾಮೆಂಟ್ ನಿಂದಾಗಿ ಬಡಾವಣೆಯಲ್ಲಿ ಜಾತಿ ಜಾತಿಗಳ ನಡುವೆ ಗಲಬೆ ಉಂಟಾಗುವ ಭೀತಿ ಎದುರಾಗಿದ್ದು ಕೂಡಲೇ ಪೊಲೀಸ್ ಇಲಾಖೆ ಶಾಂತಿ ಸಭೆ ನಡೆಸಬೇಕು ಎಂದು ಮನವಿ ಮಾಡಿದರು. ಸ್ಥಳಕ್ಕಾಗಮಿಸಿದ ಪಟ್ಟಣ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವರ್ಷ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಬಡಾವಣೆಯ ಯಜಮಾನರಾದ ಡಿ.ಮಹಾದೇವ, ರಾಚಪ್ಪಾಜಿ, ಜಗದೀಶ್, ಮುಖಂಡರಾದ ಜೆ.ಮೂರ್ತಿ, ಶಿವಕುಮಾರ್, ಸಿದ್ದರಾಜು, ಮದನ್, ಆರ್.ಭಾಗ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

ಮಸಣಾಪುರ ಘಟನೆ: ಪ್ರತಿಭಟನೆಗೆ ಪೊಲೀಸರ ಅನುಮತಿ ನಿರಾಕರಣೆ

ಚಾಮರಾಜನಗರ, ಜೂ.18: ತಾಲೂಕಿನ ಮಸಣಾಪುರ ಗ್ರಾಮದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ವಿವಿಧ ಸಂಘಟನೆಗಳು ಜಿಲ್ಲಾ ಕೇಂದ್ರದಲ್ಲಿ ನಡೆಸಲು ಉದ್ದೇಶಿಸಿದ್ದ ಪ್ರತಿಭಟನಾ ಮೆರವಣಿಗೆಗೆ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದೆ.

ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಯಜಮಾನರು, ಜಿಲ್ಲಾ ಅಂಬೇಡ್ಕರ್ ಸಂಘಗಳ ಒಕ್ಕೂಟ ಹಾಗೂ ಉಪ್ಪಾರ ಸಮುದಾಯದ ಗಡಿಕಟ್ಟೆ ಯಜಮಾನರು ಮತ್ತು ಜಿಲ್ಲಾ ಭಗೀರಥ ಸಂಘಗಳ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲು ಸೂಕ್ತ ಭದ್ರತೆ ಮತ್ತು ಅನುಮತಿ ನೀಡುವಂತೆ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು.

ಜೂ.14ರಂದು ಮಸಣಾಪುರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಆರೋಪ ಹಾಗೂ ಆರೋಪಿತನ ಮೇಲೆ ಹಲ್ಲೆ ನಡೆಸಿರುವ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಈಗಾಗಲೇ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಎರಡೂ ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ.

ಜಿಲ್ಲೆಯಲ್ಲಿ ಉಪ್ಪಾರ ಹಾಗೂ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಗಳು ಪ್ರಬಲ ಸಮುದಾಯಗಳಾಗಿರುವ ಹಿನ್ನೆಲೆಯಲ್ಲಿ ಪ್ರತಿಭಟನಾ ಮೆರವಣಿಗೆ ವೇಳೆ ಪ್ರಚೋದನಕಾರಿ ಘೋಷಣೆಗಳು, ಅವಹೇಳನಕಾರಿ ಹೇಳಿಕೆಗಳು ಅಥವಾ ಉದ್ವಿಗ್ನತೆಯನ್ನು ಹೆಚ್ಚಿಸುವಂತಹ ಭಾಷಣಗಳು ನಡೆಯುವ ಸಾಧ್ಯತೆ ಇದೆ. ಅಲ್ಲದೇ ಪ್ರತಿಭಟನೆಯ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ–ಪಾಸ್ತಿಗೆ ಹಾನಿಯಾಗುವ ಹಾಗೂ ಮುಂದಿನ ದಿನಗಳಲ್ಲಿ ಉಭಯ ಸಮುದಾಯಗಳ ನಡುವಿನ ಸಾಮರಸ್ಯಕ್ಕೆ ಧಕ್ಕೆಯಾಗುವ ಸಾಧ್ಯತೆ ಇರುವ ಬಗ್ಗೆ ಗುಪ್ತ ಮಾಹಿತಿ ಲಭ್ಯವಾಗಿರುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತಾಸಕ್ತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹಾಗೂ ಎರಡು ಸಮುದಾಯಗಳ ನಡುವಿನ ಸೌಹಾರ್ದತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎರಡೂ ಸಂಘಟನೆಗಳು ಹಮ್ಮಿಕೊಳ್ಳಲು ಉದ್ದೇಶಿಸಿದ್ದ ಪ್ರತಿಭಟನೆಗಳಿಗೆ ಅನುಮತಿ ನೀಡದಿರಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹದೇಶ್ವರಬೆಟ್ಟದ ಹುಂಡಿಯಲ್ಲಿ 2.73 ಕೋಟಿ ರೂ. ಸಂಗ್ರಹ



ಹನೂರು.ಜೂ.18– ತಾಲೂಕಿನ ಮಲೆ ಮಹದೇಶ್ವರಬೆಟ್ಟದಲ್ಲಿ ನಡೆದ ಹುಂಡಿ ಹಣ ಎಣಿಕೆಯಲ್ಲಿ ಈ ಬಾರಿ 27 ದಿನಗಳ ಅವಧಿಯಲ್ಲಿ 2.73 ಕೋಟಿ ರೂ. ಸಂಗ್ರಹವಾಗಿದೆ.

ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಹಾಗೂ ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನಸ್ವಾಮೀಜಿ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ನಡೆಯಿತು. ಈ ಬಾರಿ 27 ದಿನಗಳ ಅವಧಿಯಲ್ಲಿ 2,73,57,105 ರೂ ನಗದು ಹಣ, 44 ಗ್ರಾಂ ಚಿನ್ನ ಹಾಗೂ 997 ಗ್ರಾಂ ಬೆಳ್ಳಿಯ ವಸ್ತುಗಳನ್ನು ಭಕ್ತರು ಹುಂಡಿಗೆ ಕಾಣಿಕೆಯಾಗಿ ಸಲ್ಲಿಸಿದ್ದಾರೆ. ಅಲ್ಲದೆ ಚಲಾವಣೆಯಲ್ಲಿ ಇಲ್ಲದ 2000 ಮುಖಬೆಲೆಯ 10 ನೋಟುಗಳು ಹಾಗೂ ವಿದೇಶಿಯ 7 ನೋಟುಗಳು ಕಂಡುಬಂದಿವೆ.

ಈ ಸಂದರ್ಭದಲ್ಲಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾದ ಮರಿಸ್ವಾಮಿ, ಮಹದೇವಪ್ಪ ಗಂಗನ ತಿಮ್ಮಯ್ಯ, ಮೆಲ್ಲಳ್ಳಿ ಕುಮಾರ್, ವಿಜಯ್, ಲೆಕ್ಕ ಪತ್ರ ಸಲಹೆಗಾರ ಮಹದೇವು, ಪ್ರಾಧಿಕಾರದ ಉಪ ಕಾರ್ಯದರ್ಶಿ ಚಂದ್ರಶೇಖರ, ಜಿಲ್ಲಾಡಳಿತ ಕಛೇರಿಯ ಮರಗದಂ ಸೇರಿದಂತೆ ಇತರರಿದ್ದರು.

ರೈತರಿಗೆ ಕೃಷಿ ತರಬೇತಿ

ಚಾಮರಾಜನಗರ: ಮೈಸೂರು ತೋಟಗಾರಿಕೆ ಮಹಾವಿದ್ಯಾಲಯದ ವತಿಯಿಂದ ರೈತರಿಗೆ 'ಬದಲಾಗುತ್ತಿರುವ ಕೃಷಿ ಪದ್ಧತಿಗಳಲ್ಲಿ ಸಾವಯವ ಕೃಷಿಯ ಅವಕಾಶಗಳು ಮತ್ತು ಸವಾಲುಗಳು' ಕುರಿತ ತರಬೇತಿ ಕಾರ್ಯಕ್ರಮವನ್ನು ಜೂ. 23 ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಇಲವಾಲ ಹತ್ತಿರದ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ನುರಿತ ವಿಜ್ಞಾನಿಗಳು ಹಾಗೂ ಅನುಭವಿ ಕೃಷಿಕರು ರೈತರಿಗೆ ಮಾಹಿತಿ ನೀಡಲಿದ್ದಾರೆ. ಚಾಮರಾಜನಗರ, ಮೈಸೂರು, ಹಾಸನ, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಗೆ ಸೇರಿದ ಆಸಕ್ತ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ನೋಂದಣಿ ಮಾಡಬಹುದಾಗಿದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

ರೈತರು ನೋಂದಣಿಗಾಗಿ ಮೊ.ಸಂ 8147959226, 9341997297 ಸಂಪರ್ಕಿಸಬಹುದು ಎಂದು ಮೈಸೂರಿನ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಿಯಂತ್ರಣ ತಪ್ಪಿದ ಕಾರು; ಟಿಪ್ಪರ್-ಕಂಬಕ್ಕೆ ಡಿಕ್ಕಿ

ಓರ್ವ ಸಾವು, 5 ಮಂದಿಗೆ ಗಾಯ

ಯಳಂದೂರು, ಜೂ.18– ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ರಸ್ತೆ ಬದಿ ನಿಂತಿದ್ದ ಟಿಪ್ಪರ್ ಮತ್ತು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿ ಐವರು ಗಾಯಗೊಂಡಿರುವ ಘಟನೆ ತಾಲೂಕಿನ ಕಂದಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಯಳಂದೂರು ಪಟ್ಟಣದ ನಿವಾಸಿ ಪ್ರಸಾದ್ ನಾಯಕ್ (26) ಮೃತ ದುರ್ದೈವಿ. ಚೇತನ್ ಹಾಗೂ ರಾಜೇಶ್‌ನಾಯಕ್ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದಂತೆ ಹರ್ಷ, ಚಂದು ಹಾಗೂ ದುಂಡ ಎಂಬುವವರು ಯಳಂದೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾರಿನಲ್ಲಿ ಆರು ಮಂದಿ ಯಳಂದೂರಿನಿಂದ ಸಂತೇಮರಹಳ್ಳಿ ಕಡೆಗೆ ತೆರಳುತ್ತಿದ್ದ ವೇಳೆ ಕಂದಹಳ್ಳಿ ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿ ನಿಂತಿದ್ದ ಟಿಪ್ಪರ್ ಹಾಗೂ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ನುಜ್ಜುಗುಜ್ಜಾಗಿದ್ದು ಪ್ರಸಾದ್ ನಾಯಕ್ ಎಂಬಾತನ ತಲೆಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಯಳಂದೂರು ಠಾಣೆಯ ಪೊಲೀಸರು ಭೇಟಿ ನೀಡಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಚಾಮರಾಜನಗರ ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಟಿಪ್ಪರ್ ಮತ್ತು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಕಾರು. ಒಳಚಿತ್ರದಲ್ಲಿ ದುರಂತದಲ್ಲಿ ಸಾವನ್ನಪ್ಪಿದ ವ್ಯಕ್ತಿಯನ್ನು ಕಾಣಬಹುದಾಗಿದೆ.

ಜೀತದಾಳುಗಳಿಗೆ ಬಿಡುಗಡೆ ಪತ್ರ ವಿಳಂಬ ಖಂಡಿಸಿ ಧರಣಿ

ಚಾಮರಾಜನಗರ: ಜೀತದಾಳುಗಳಿಗೆ ಬಿಡುಗಡೆ ಪತ್ರ ವಿಳಂಬ ಖಂಡಿಸಿ ರೂಟ್ಸ್ ಫಾರ್ ಫ್ರೀಡಂ ಸಂಘಟನೆ ನೇತೃತ್ವದಲ್ಲಿ ಜೀತ ವಿಮುಕ್ತರು ನಗರದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಎದುರು ಸಂಘಟನೆಯ ಜಿಲ್ಲಾ ಸಂಚಾಲಕ ಜಿ.ಕೆ. ಕುನ್ನಹೊಳಿಯಯ್ಯ ಅವರ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘಟನಾ ಜಿಲ್ಲಾ ಸಂಚಾಲಕ ಜಿ.ಕೆ.ಕುನ್ನಹೊಳಿಯಯ್ಯ ಮಾತನಾಡಿ, ಜಿಲ್ಲೆಯ ಯಳಂದೂರು ಮತ್ತು ಗುಂಡ್ಲುಪೇಟೆ ತಾಲೂಕಿನಲ್ಲಿ ಒಟ್ಟು 59 ಮಂದಿ ಜೀತದಾಳನ್ನು ಅಧಿಕಾರಿಗಳ ಮುಖಾಂತರ ಜೀತರೆಂದು ವರದಿಯಾಗಿದ್ದರೂ ಸಹ ಜೀತ ವಿಮುಕ್ತ ಪತ್ರ ಕೊಡದೆ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

40 ವರ್ಷಗಳ ಹಿಂದೆಯೇ ಜೀತಪದ್ಧತಿ ರದ್ದುಪಡಿಸಬೇಕು ಎಂದು ಕಾನೂನು ಜಾರಿಗೆ ಬಂದರು ಯಾವುದೇ ಪ್ರಯೋಜನವಾಗಿಲ್ಲ. ಧರಣಿಯಲ್ಲಿ ಮರಿಸ್ವಾಮಿ, ನಾಗರಾಜು, ಕೃಷ್ಣಯ್ಯ, ಸಿದ್ದರಾಜು, ರಾಜು ಇತರರಿದ್ದರು.

■ ಸತ್ಯಮೂರ್ತಿ ತೋಳಹುಣಸೆ

ನಾಗುಗೆ ವಧು ಬೇಕಾಗಿದೆ ಹೆಣ್ಣು ಕೊಡೋರಿಲ್ಲ!



ಸದ್ಯ ಗ್ರಾಮೀಣ ಅಥವಾ ನಗರ ಪ್ರದೇಶಗಳ ಬಹುತೇಕ ಯುವಕರಿಗೆ ಮದುವೆಯಾಗೋ ವಯಸ್ಸು ದಾಟಿದರೂ ಹುಡುಗಿಯರು ಸಿಗುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರು. ಇದೇ ಕಾನ್ಸೆಪ್ಟ್ ಇಟ್ಟುಕೊಂಡು ನಿರ್ದೇಶಕ ಆರ್.ಕೆ ಅವರು 'ನಾಗುಗೆ ವಧು ಬೇಕಾಗಿದೆ' ಚಿತ್ರವನ್ನು ನಿರ್ದೇಶಿಸಿದ್ದಾರೆ. ಆರ್‌ಕೆ. ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸಿರುವ ಈ ಚಿತ್ರವು ಶ್ರೀಗುರು ರಾಘವೇಂದ್ರ ಕನ್ನಡ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣವಾಗಿದೆ. ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆ, ಟ್ರೈಲರ್ ಹಾಗೂ ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಟ್ರೇಲರ್ ಬಿಡುಗಡೆ ಮಾಡಿದರೆ, ನಿರ್ದೇಶಕ ಬಹದ್ದೂರ್ ಚೇತನ್ ಶೀರ್ಷಿಕೆಯನ್ನು ಬಿಡುಗಡೆ ಮಾಡಿದರು.

ಈ ಚಿತ್ರದಲ್ಲಿ ಬರುವ ತಾಯಿ, ಮಗನ ಬಾಂಧವ್ಯದ ಸನ್ನಿವೇಶ ನನ್ನ ಮನಸ್ಸಿಗೆ ಹತ್ತಿರವಾಯಿತು. ನಮ್ಮ ಸಮಾಜದಲ್ಲಿ ಬಹುತೇಕ ಗಂಡುಮಕ್ಕಳು ಎದುರುಸುತ್ತಿರುವ ಈ ಸಮಸ್ಯೆಯನ್ನು ನಿರ್ದೇಶಕರು ಮನರಂಜನಾತ್ಮಕವಾಗಿ ತೆರೆ ಮೇಲೆ ನಿರೂಪಿಸಲು ಪ್ರಯತ್ನಿಸಿದ್ದಾರೆ ಎಂದು ನಾಗಲಕ್ಷ್ಮೀ ಚೌಧರಿ ಹೇಳಿದರು.

ನಮ್ಮ ಸುತ್ತಮುತ್ತಲಿನ ಸಾಕಷ್ಟು ಹುಡುಗರಿಗೆ ವಯಸ್ಸಾದರೂ ಮದುವೆ ಆಗುತ್ತಿಲ್ಲ. ಹುಡುಗಿ ಕಡೆಯವರು ಹುಡುಗನಿಗೆ ಸರ್ಕಾರಿ ಕೆಲ್ಸಾನೆ ಇರಬೇಕು, ಅತ್ತೆ, ಮಾವ ಇರಬಾರದು, ಬೆಂಗಳೂರಲ್ಲಿ ಸೈಟ್, ಮನೆ ಹೊಂದಿರಬೇಕು ಎಂಬ ಬೇಡಿಕೆಗಳನ್ನಿಡುತ್ತಾರೆ. ಇದೆಲ್ಲ ಇದ್ದ ಹುಡುಗ ಬೇಗನೇ ಮದುವೆಯಾಗಬಹುದು, ಇಂಥ ಸಾಕಷ್ಟು ವಿಷಯಗಳನ್ನು ಚಿತ್ರದಲ್ಲಿ ಹೇಳಿದ್ದೇನೆ. ಜತೆಗೆ ನಾನೇ ಸ್ವತ: ಕಂಡ ಕೆಲವು ಸನ್ನಿವೇಶಗಳಿಂದ ಪ್ರೇರಿತನಾಗಿ ಈ ಕಥೆ ಬರೆದಿದ್ದೇನೆ. ಇದೊಂದು ನೈಜಘಟನೆ ಆಧಾರಿತ ಚಿತ್ರ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಮುಂದಿನ ತಿಂಗಳು ತೆರೆಗೆ ತರುವ ಪ್ರಯತ್ನದಲ್ಲಿದ್ದೇವೆ ಎಂದರು. ಸಂಗೀತ ನಿರ್ದೇಶಕ ಶ್ರೀಸುರೇಶ್ ಹಾಗೂ ಛಾಯಾಗ್ರಾಹಕ ನಾಗರಾಜ್ ಕೂಡ ವೇದಿಕೆಯಲ್ಲಿದ್ದರು. ದತ್ತು ಪೂಜಾರಿ, ಸೋನಿಕಾ ಸೋಮಣ್ಣ, ಚಿತ್ರಾಲ್ ರಂಗಸ್ವಾಮಿ, ಅಪೂರ್ವಶ್ರೀ, ರೇಖಾ ದಾಸ್, ಬೌಬೌ ಬಿರಿಯಾನಿ ಜಯರಾಮ್ ಚಿತ್ರದ ಪ್ರಮುಖ ತಾರಾ ಬಳಗದಲ್ಲಿದ್ದಾರೆ.



ಹಸೆಮಣೆ ಏರಲು ಸಿದ್ಧಳಾದ ನಟಿ ಶರ್ಮಿಳಾ ಮಾಂಡ್ರೆ!







ನವಗ್ರಹ, 'ಡೆವಿಲ್' ಖ್ಯಾತಿಯ ನಟಿ ಶರ್ಮಿಳಾ ಮಾಂಡ್ರೆ ಸಿನಿಮಾ ಹಿನ್ನೆಲೆಯ ಕುಟುಂಬದಿಂದ ಬಂದವರು. ಅವರೀಗ ವಿವಾಹ ಜೀವನಕ್ಕೆ ಕಾಲಿಡಲು ಸಿದ್ದರಾಗಿದ್ದಾರೆ. ತಮಿಳು ನಿರ್ಮಾಪಕನ ಜೊತೆ ಹಸೆಮಣೆ ಏರಲು ಅವರು ಸಿದ್ಧತೆ ನಡೆಸಿದ್ದಾರೆ. ತಮಿಳು ನಿರ್ಮಾಪಕ ಸುಧನ್ ಸುಂದರಂ ಅವರ ಜೊತೆ ಶರ್ಮಿಳಾ ಅವರ ವಿವಾಹ ನಡೆಯಲಿದೆ. 20 ವರ್ಷಗಳ ಹಿಂದೆ 'ಸಜನಿ' ಚಿತ್ರದ ಮೂಲಕ ಆಕೆ ಚಿತ್ರರಂಗ ಪ್ರವೇಶಿಸಿದ್ದರು. ಜೂನ್ 25ರಂದು ಸುಧನ್ ಸುಂದರಂ ಹಾಗೂ ಶರ್ಮಿಳಾ ಮಾಂಡ್ರೆ ಅವರ ಎಂಗೇಜ್ಮೆಂಟ್ ಸಮಾರಂಭ ನಡೆಯಲಿದೆ. ವಿಜಯ್ ಸೇತುಪತಿ ನಟನೆಯ ಮಹಾರಾಜಾ ಹಾಗೂ ಇತ್ತೀಚೆಗೆ ತೆರೆಕಂಡ 'ತಾಂಯ್‌ಕಿಳವಿ' ಚಿತ್ರಗಳಿಗೆ ಸುಧನ್ ಸಹ ನಿರ್ಮಾಪಕರಾಗಿದ್ದರು. ಅಲ್ಲದೆ 'ಸೀತಾಕಾಥಿ', 'ಅನ್ನಾಬೆಲ್ಲೆ' ಸೇತುಪತಿ ಚಿತ್ರಗಳನ್ನು ಕೂಡ ಅವರು ನಿರ್ಮಿಸಿದ್ದರು. ಇದೇ ವರ್ಷ ಇವರಿಬ್ಬರ ಮದುವೆ ಸಮಾರಂಭ ಆಯೋಜಿಸಲು ಎರಡೂ ಕುಟುಂಬಗಳ ಹಿರಿಯರು ತೀರ್ಮಾನಿಸಿದ್ದಾರೆ. 'ಸಜನಿ' ಚಿತ್ರವನ್ನು ಆಕೆಯ ಸೋದರಸಂಬಂಧಿ ಸುನಂದಾ ಮುರಳಿ ಮನೋಹರ್ ನಿರ್ಮಿಸಿದ್ದರು. ತಂದೆ ದಯಾನಂದ ಮಾಂಡ್ರೆ ಉದ್ಯಮಿ. ಆಕೆಯ ತಾತ ರಮಾನಂದ ನಾರಾಯಣರಾವ್ ಮಾಂಡ್ರೆ, ನಿರ್ಮಾಪಕರು ಹಾಗೂ ವಿತರಕರೂ ಆಗಿದ್ದರು. 'ಸಜನಿ' ಚಿತ್ರದ ನಂತರ 'ಕೃಷ್ಣ', 'ಸ್ವಯಂವರ', 'ಮಮ್ತಾಜ್', 'ಮಾಸ್ ಲೀಡರ್', 'ಗಾಳಿಪಟ-2' ಹೀಗೆ ಒಂದಷ್ಟು ಕನ್ನಡ ಸಿನಿಮಾಗಳಲ್ಲಿ ಶರ್ಮಿಳಾ ನಟಿಸಿದರು. ಆದರೆ ದೊಡ್ಡ ಬ್ರೇಕ್ ಮಾತ್ರ ಸಿಗಲಿಲ್ಲ. ಒಂದು ತೆಲುಗು ಹಾಗೂ ಒಂದು ತಮಿಳು ಚಿತ್ರದಲ್ಲಿ ನಟಿಸಿ ಅದೃಷ್ಟ ಪರೀಕ್ಷೆ ಮಾಡಿಕೊಂಡಿದ್ದರು. ಸೋಶಿಯಲ್ ಮೀಡಿಯಾದಲ್ಲಿ ಸಖತ್ ಆಕ್ಟೀವ್ ಆಗಿರುವ ಈಕೆ ಒಂದಷ್ಟು ಹಗರಣ ಮಾಡಿಕೊಳ್ಳುವ ಮೂಲಕವೂ ಸುದ್ದಿಯಾಗಿದ್ದರು, ಶರ್ಮಿಳಾ ಮಾಂಡ್ರೆ ಒಬ್ಬ ನಿರ್ಮಾಪಕಿಯೂ ಹೌದು. ತಮಿಳಿನ ಇವನುಕ್ಕು ಎಂಗೆಯೊ ಮಚ್ಚಮ್ ಇರುಕ್ಕು, ನಾನುಂ ಸಿಂಗಲ್ ತಾನ್, ಸಿಲನಾಡಿಗಳಿಲ್, ಸಂಡಕಾರಿ, ಕಾದಲ್ ಕೊಂಜಂ ತೂಕಲ ಅಲ್ಲದೆ ಕನ್ನಡದ 'ದಸರಾ' ಎಂಬ ಚಿತ್ರವನ್ನು ಅವರು ನಿರ್ಮಿಸುತ್ತಿದ್ದಾರೆ.





'ರೋಲೆಕ್ಸ್' ಚಿತ್ರದಲ್ಲಿ ವಿನೋದ್ ಪ್ರಭಾಕರ್


ಮಧು ಫಿಲಂ ಸರ್ಕ್ಯೂಟ್ಸ್ ಸಂಸ್ಥೆ ಲಾಂಛನದಲ್ಲಿ ಅಂಬಟಿ ಮಧು ಮೋಹನಕೃಷ್ಣ ಅವರು ಕನ್ನಡದಲ್ಲಿ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿರುವ ಮೊದಲ ಚಿತ್ರ 'ರೋಲೆಕ್ಸ್'. ಅಂಬಟಿ ಮಧು ಮೋಹನಕೃಷ್ಣ ಅವರು ಪ್ರಸ್ತುತ ಆಂಧ್ರ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು.

ಈ ಹಿಂದೆ 'ಬಿಲ್ ಗೇಟ್ಸ್' ಚಿತ್ರ ನಿರ್ದೇಶನ ಮಾಡಿದ್ದ ಶ್ರೀನಿವಾಸ್ ಮಂಡ್ಯ ಅವರು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು, ನಾಯಕ ಕೋಮಲ್ ಕುಮಾರ್ 'ರೋಲೆಕ್ಸ್' ಚಿತ್ರದಲ್ಲಿ ಡಿಫರೆಂಟ್ ಲುಕ್ ನಲ್ಲಿ ಕಾಣಿಸಿಕೊಂಡಿದ್ದಾರೆ. ಸೋನಾಲ್ ಮೊಂತೆರೊ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಈ ಚಿತ್ರದ ಮತ್ತೊಂದು ವಿಶೇಷವೆಂದರೆ ನಟ ವಿನೋದ್ ಪ್ರಭಾಕರ್ ಅವರು ಈ ಚಿತ್ರದ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈವರೆಗೂ ಮಾಡಿರದ ಪಾತ್ರದಲ್ಲಿ ವಿನೋದ್ ಪ್ರಭಾಕರ್ ಕಾಣಿಸಿಕೊಂಡಿದ್ದಾರೆ. ಕನ್ನಡ ಚಿತ್ರರಂಗದ ಜನಪ್ರಿಯ ನಟರಾದ ಕೋಮಲ್ ಕುಮಾರ್ ಹಾಗೂ ವಿನೋದ್ ಪ್ರಭಾಕರ್ ಅವರನ್ನು ಒಟ್ಟಾಗಿ ತೆರೆಯ ಮೇಲೆ ನೋಡಲು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಕಾಮಿಡಿಯೊಂದಿಗೆ ಕೌಟುಂಬಿಕ ಕಥಾಹಂದರವನ್ನೂ ಹೊಂದಿರುವ ಈ ಚಿತ್ರದ ಚಿತ್ರೀಕರಣ ಬಹುತೇಕ ಪೂರ್ಣವಾಗಿದೆ. ವಿನೋದ್ ಪ್ರಭಾಕರ್, ಸೋನಾಲ್ ಮೊಂತೆರೊ, ಅಚ್ಯುತಕುಮಾರ್, ನವೀನ್ ಪಡೀಲ್, ಅರುಣ ಬಾಲರಾಜ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ.



ಸಿನಿಪದಬಂಧ-631



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ತ್ರಿಲೋಕ ಸಂಚಾರಿ ಗೆಲುವು ಕಂಡಿದ್ದಾನೆ 6
4. _ _ ಮುತ್ತಾ 2
5. ಹಣಕ್ಕೆ ಇವನೇ ತಂದೆಯ ಅಣ್ಣ 5
6. ವಿಷ್ಣುವರ್ಧನ್, ಪ್ರೇಮ, ರೋಜಾ ಅಭಿನಯದ ಚಿತ್ರ 2
7. ರವಿಚಂದ್ರನ್ -ರಂಭಾ ಅಭಿನಯದಲ್ಲಿ ವಿಷ್ಣುವರ್ಧನ್ ಶ್ರೀಮಂತ 4
9. ಅಭಿ ಚಿತ್ರದ ನಾಯಕಿ 2
11. ಶಿವಣ್ಣ – ನೀನಾ ಅಭಿನಯದ ಚಿತ್ರ 2
12. ಕುಮಾರ್ ಗೋವಿಂದ್ ಸೂರ್ಯನಂತೆ ಹೊಳೆಯುತ್ತಿದ್ದಾನೆ 4
14. ಮಹಾಭಾರತದ 18 ಪರ್ವಗಳಲ್ಲಿ ನಾಲ್ಕನೇಯದು 5
15. ಜಯಮ್ಮನ ಮಗ ಇವನೇ ಇರಬೇಕು 6
17. ಶಿವಣ್ಣನ ಚಿತ್ತಕ್ಕೆ ಇಷ್ಟವಾದವಳು ಸುಧಾರಾಣಿ 8

ಮೇಲಿನಿಂದ ಕೆಳಕ್ಕೆ

1. ಅರುಣರಾಗ ಚಿತ್ರದ ಹಾಡಿನಲ್ಲಿ ಅನಂತ್, ಗೀತಾ ದೂರ ದೂರ 10
2. ಪ್ರೇಮ್ ಸೇನೆಯ ಮುಖಂಡ 4
3. ಯಾದವ ವಂಶದ ಅರಸನನ್ನು ಹೀಗೂ ಹೇಳಿ 6
4. _ _ _ _ ತುಪ್ಪಾ ನುಂಗಂಗಿಲ್ಲ ಉಗಳಂಗಿಲ್ಲ....', 4
8. ಶ್ರೀನಾಥ್ – ಮಂಜುಳಾ ಅಭಿನಯಕ್ಕೆ ಅಮೃತಮ್ ನಿರ್ದೇಶಕ 8
10. ಮೈ ಆಟೋ ಗ್ರಾಫ್ ಚಿತ್ರದ ಹಾಡು ಪ್ರೇಮ್ ಅಭಿನಯದಲ್ಲಿ ಬಂತು 7
13. ಪೃಥ್ವಿ ಚಿತ್ರದ ನಾಯಕಿಯ ಪ್ರಥಮಾರ್ಧ 3
16. ಆದಿತ್ಯ 'ಮನ್ಮಥ' 3

ಸಿನಿ ಪದಬಂಧ 630ರ ಉತ್ತರ

ಸಿಂ	ಧೂ	ರ	ತಿ	ಲ	ಕ				ಭ	ಕ್ತ
ಗಾ		ವಿ			ಮ	ಗ	ಮೊ	ಮ್ಮ	ಗ	
ಪು		ಚಂ	ದ್ರ		ಲ				ವಂ	
ರ್		ದ್ರ			ಕು		ಸ	ನಾ	ತ	ನಿ
ನ	ಟ		ದಂ		ಮಾ	ನ್ಯ		ರಿ		
ಲ್ಲಿ		ಗಂ	ಗೆ	ಗೌ	ರಿ			ಮು		ಹಂ
ರಾ			ಎ			ರ	ಜ	ನಿ	ಕಾಂ	ತ
ಜಾ	ರಿ	ಬಿ	ದ್ದ	ಜಾ	ಣ			ದ		ಕ
ಕು			ಮ			ಅಂ		ರೆ		
ಳ್ಳ		ನ	ಕ್ಕ	ಳಾ	ರಾ	ಜ	ಕು	ಮಾ	ರಿ	
			ಳು			ನಾ		ರಿ		

ವಿಜೇತರು: ವಾಸು, ನಂ.46, 2ನೇ ಮೇನ್, ಭೈರವೇಶ್ವರ ನಗರ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಕನಕರಾಜ' ಲಾಯರ್ ಸಿಎಂ ಆದ ಕಥೆ



ವಿದ್ಯಾವಂತರು, ಯುವಕರು ರಾಜಕೀಯಕ್ಕೆ ಬರಬೇಕೆಂದು ಆಗಾಗ ಹೇಳುತ್ತಿರುತ್ತೇವೆ. ಅದೇ ರೀತಿ ಯುವಕನೊಬ್ಬ ರಾಜಕೀಯಕ್ಕೆ ಬಂದರೆ, ಸಿಎಂ ಆದರೆ ಹೇಗಿರುತ್ತೆ ಅನ್ನೋದನ್ನು 'ಕನಕರಾಜ' ಚಿತ್ರದ ಮೂಲಕ ನಿರ್ದೇಶಕ ರವೀಂದ್ರ ಹೇಳಹೊರಟಿದ್ದಾರೆ, ನಾಯಕ ಒಬ್ಬ ವಕೀಲ, ರಾಜಕೀಯದಲ್ಲೂ ಸಕ್ರಿಯ. ಜೊತೆಗೆ ಮುಖ್ಯಮಂತ್ರಿಗಳ ಅಭಿಮಾನಿಯೂ ಹೌದು. ಅಂಥವನಿಗೆ ಒಮ್ಮೆ ಸಿಎಂ ಆಗೋ ಯೋಗ ಬರುತ್ತದೆ, ಅದು ಹೇಗೆ ಎನ್ನುವುದೇ ಚಿತ್ರದ ಕುತೂಹಲ.

ಎಸ್.ಆರ್.ಸನತ್‌ಕುಮಾರ್ ಅವರ ನಿರ್ಮಾಣದ ಈ ಚಿತ್ರಕ್ಕೆ ಡಾ॥ವಿ.ನಾಗೇಂದ್ರ ಪ್ರಸಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಸಂಗೀತ ಸಂಯೋಜನೆ ಮಾಡಿದ್ದಾರೆ. ಈ ಚಿತ್ರದಲ್ಲಿ ಮಾಜಿ ಸಚಿವ ಎಚ್.ಎಂ.ರೇವಣ್ಣ ಅವರ ಪುತ್ರ ಅನೂಪ್ ರೇವಣ್ಣ ನಾಯಕನಾಗಿ ನಟಿಸಿದ್ದಾರೆ. ಇತ್ತೀಚೆಗೆ 'ಕನಕರಾಜ' ಚಿತ್ರದ ಮೊದಲ ಹಾಡನ್ನು ಮಾಜಿ ಸಚಿವ ಎಚ್.ಎಂ. ರೇವಣ್ಣ ಬಿಡುಗಡೆ ಮಾಡಿದರು.

ಈ ವೇಳೆ ನಿರ್ಮಾಪಕ ಎಸ್.ಅರ್. ಸನತ್‌ಕುಮಾರ್ ಮಾತನಾಡುತ್ತ ಇದೊಂದು ವಿಭಿನ್ನ ಕಥಾನಕ. ಈಗಿನ ಯುವಜನತೆಯ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿ.ನಾಗೇಂದ್ರ ಪ್ರಸಾದ್ ಈ ಕಥೆ ಬರೆದಿದ್ದಾರೆ. ಅನೂಪ್ ರೇವಣ್ಣ ಒಬ್ಬ ಲಾಯರ್ ಹಾಗೂ ಸಿಎಂ ಅಭಿಮಾನಿಯಾಗಿ ಕಾಣಿಸಿಕೊಂಡಿದ್ದಾರೆ. ನಾಯಕಿಯಾಗಿ ನಿಮಿಷಾ ನಟಿಸಿದ್ದಾರೆ. ಹಿರಿಯ ಕಲಾವಿದರಾದ ಶ್ರೀನಾಥ್, ರಾಮಕೃಷ್ಣ, ಪದ್ಮಾವಾಸಂತಿ, ಯಮುನಾ ಶ್ರೀನಿಧಿ ಪ್ರಮುಖ ಪಾತ್ರಗಳಲ್ಲಿದ್ದಾರೆ ಎಂದರು.

ಡಾ॥ವಿ.ನಾಗೇಂದ್ರಪ್ರಸಾದ್ ಮಾತನಾಡುತ್ತ ಇಂದಿನ ಯುವಪೀಳಿಗೆಗೆ ಹತ್ತಿರವಾದ ಕಥೆ. ಚಿತ್ರದಲ್ಲಿ ನಾಯಕ ಮುಖ್ಯಮಂತ್ರಿಗಳ ಅಭಿಮಾನಿ, ಆತ ಹೇಗೆ ಸಿಎಂ ಆಗ್ತಾನೆ, ಆದ ನಂತರ ಏನೆಲ್ಲ ಬದಲಾವಣೆ ಮಾಡಲು ಹೋಗ್ತಾನೆ ಅದರಲ್ಲಿ ಸಫಲನಾಗ್ತಾನಾ ಇಲ್ವಾ ಅನ್ನೋದೇ ಕುತೂಹಲ ಎಂದರು.

ನಾಯಕ ಅನೂಪ್ ರೇವಣ್ಣ ಮಾತನಾಡಿ, ಇದು ನನ್ನ 5ನೇ ಚಿತ್ರ. ಇದರಲ್ಲಿ ಒಬ್ಬ ವಕೀಲ ಹಾಗೂ ಮುಖ್ಯಮಂತ್ರಿ ರಾಮಯ್ಯ ಅವರ ಅಭಿಮಾನಿಯೂ ಆಗಿರುತ್ತೇನೆ ಎಂದರು. ನಾಯಕಿ ನಿಮಿಷ, ನಟ ಸುಂದರರಾಜ್, ನಟಿಯರಾದ ಪದ್ಮಾವಾಸಂತಿ, ಯಮುನಾ ಶ್ರೀನಿಧಿ, ಸಹ ನಿರ್ಮಾಪಕ ಮಂಜುನಾಥ್ ಅರಸ್, ಛಾಯಾಗ್ರಾಹಕ ಪ್ರಮೋದ್ ಭಾರತೀಯ ಹಾಗೂ ಗಾಯಕ ಚೇತನ್ ನಾಯಕ್ ಚಿತ್ರದ ಕುರಿತಂತೆ ಮಾತನಾಡಿದರು. ಕಮರ್ಷಿಯಲ್ ಎಂಟರ್‌ಟೈನ್‌ಮೆಂಟ್ ಜತೆಗೊಂದು ಮೆಸೇಜ್ ಕೂಡ ಚಿತ್ರದಲ್ಲಿದ್ದು, ಯುವಕರು ಹೇಗೆ ಸಮಾಜವನ್ನು ಮುನ್ನಡೆಸಿಕೊಂಡು ಹೋಗಬೇಕೆಂದು ಹೇಳಲಾಗಿದೆ.

ಪತ್ತೇದಾರಿ ಚಿತ್ರದ ಪೋಸ್ಟರ್‌ಗೆ ಸೆಲೆಬ್ರಿಟಿಗಳ ಸಾಥ್



ಹೊಸ ಶೈಲಿಯ ಕ್ರೈಂ, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ "ಪತ್ತೇದಾರಿ". ಶ್ರೀನಿವಾಸ್ ಜಯರಾಮ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಪೋಸ್ಟರನ್ನು ಕಲಾವಿದರಾದ ಮಯೂರ್ ಪಟೇಲ್, ಶಿಷ್ಯ ದೀಪಕ್, ಕಾಕ್ರೋಜ್ ಸುಧೀ, ಚೆಲುವರಾಜ್, ಅರವಿಂದ್, ಗಿರೀಶ್‌ಜತ್ತಿ, ಭೀಮ ಖ್ಯಾತಿಯ ಪ್ರಿಯ, ಕೆ.ಜಿ.ಎಫ್.ರೆಡ್ಡಿ, ವಿಕ್ಟರಿವಾಸು, ನಿರ್ದೇಶಕ ಸಹನಮೂರ್ತಿ, ನಿರೂಪಕ ಹರೀಶ್ ನಾಗರಾಜ್ ಸೇರಿ ಬಿಡುಗಡೆ ಮಾಡಿದರು. ಯುವ ಪ್ರತಿಭೆ ಕಿರ್ಘಾರ್ ನಾಯಕನಾಗಿ ನಟಿಸಲಿರುವ ಈ ಚಿತ್ರವನ್ನು ಎ.ಕೆ.ಪ್ರೊಡಕ್ಷನ್ಸ್ ಅಡಿ ಮೊಹಮ್ಮದ್ ಅತೀಕ್ ಅಮದು ನಿರ್ಮಿಸುತ್ತಿದ್ದಾರೆ.

ಈ ವೇಳೆ ನಿರ್ದೇಶಕ ಶ್ರೀನಿವಾಸ್ ಜಯರಾಮ್ ಮಾತನಾಡುತ್ತ ಈಹಿಂದೆ ಗಜಪಡೆ ಎಂಬ ಚಿತ್ರವನ್ನು ನಿರ್ದೇಶಿಸಿದ್ದೆ, ಇದು ನನ್ನ 2ನೇ ಚಿತ್ರ. ನಾಲ್ಕು ಪ್ರಮುಖ ಪಾತ್ರಗಳ ಸುತ್ತ ನಡೆಯುವ ಕ್ರೈಮ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಈ ಚಿತ್ರದ ಚಿತ್ರೀಕರಣವನ್ನು ಮುಂದಿನ ತಿಂಗಳು ಆರಂಭಿಸಿ, ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಶೂಟಿಂಗ್ ನಡೆಸುವ ಯೋಜನೆಯಿದೆ. ಈಗಾಗಲೇ ಸಾಕಷ್ಟು ಕ್ರೈಂ, ಥ್ರಿಲ್ಲರ್ ಚಿತ್ರಗಳು ಬಂದಿವೆಯಾದರೂ, ಇದರ ಚಿತ್ರಕಥೆ, ನಿರೂಪಣೆ ಬೇರೆಯದೇ ರೀತಿಯಲ್ಲಿರುತ್ತದೆ. ಇಂಥ ಚಿತ್ರಗಳನ್ನು ನೋಡಿ ಆ ಸ್ಫೂರ್ತಿಯಿಂದಲೇ ಈ ಕಥೆ ಬರೆದಿದ್ದೇನೆ. ನಾಯಕ ಕಿರ್ಘಾರ್ ಅವರ ಜತೆ ಬೇರೊಂದು ಸಿನಿಮಾಗೆ ಕೆಲಸ ಮಾಡಿದ್ದೆ. ಆಗವರಿಗೆ ಈ ಕಥೆ ಹೇಳಿದ್ದೆ. ಕಿರ್ಘಾರ್ ಅವರ ಜತೆ ಗಿರಿ, ರೂಪ ಹಾಗೂ ಸಿದ್ದೇಶ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ ಎಂದು ಹೇಳಿದರು.

ಚಿತ್ರದ ನಾಯಕ ಕಿರ್ಘಾರ್ ಮಾತನಾಡಿ ನಿರ್ದೇಶಕರು ಹೇಳಿದ ಕಥೆ, ನನ್ನ ಪಾತ್ರ ಎರಡೂ ನನಗೆ ಇಷ್ಟವಾಯಿತು. ನಾನು ಯಾವುದೇ ನಟನಾ ಶಾಲೆಯಲ್ಲಿ ಅಭಿನಯ ಪಾಠ ಕಲಿತಿಲ್ಲ. ರಾಜಕುಮಾರ್, ವಿಷ್ಣುವರ್ಧನ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್‌ರಂಥ ಮಹಾನ್ ಕಲಾವಿದರ ಚಿತ್ರಗಳನ್ನು ನೋಡಿಯೇ ಆಕ್ಟಿಂಗ್ ಕಲಿತಿದ್ದೇನೆ. ಅವರೆಲ್ಲ ನನಗೆ ಸ್ಫೂರ್ತಿ ಎಂದರು.

ಬೆನಕನಹಳ್ಳಿ ಪಿಎಸಿಎಸ್ ನೂತನ ಕಚೇರಿ ಉದ್ಘಾಟನೆ

ತಿ.ನರಸೀಪುರ, ಜೂ.18– ಹಲವು ವರ್ಷಗಳ ಬೆನಕನಹಳ್ಳಿ ಗ್ರಾಮಸ್ಥರ ಬೇಡಿಕೆಗೆ ಕೊನೆಗೂ ಮನ್ನಣೆ ದೊರೆತಿದ್ದು, ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದಿಂದ ಬೇರ್ಪಡಿಸಿ ಬೆನಕನಹಳ್ಳಿ ಗ್ರಾಮಕ್ಕೆ ಪ್ರತ್ಯೇಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸರ್ಕಾರ ಮಂಜೂರು ಮಾಡಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಬೆನಕನಹಳ್ಳಿ ಗ್ರಾಮದಲ್ಲಿ ನೂತನ ಸಹಕಾರ ಸಂಘದ ಕಚೇರಿಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಪೂಜೆ ಸಲ್ಲಿಸಲಾಯಿತು.

ಗ್ರಾಮಕ್ಕೊಂದು ಸಹಕಾರ ಸಂಘ ಎಂಬ ಸರ್ಕಾರದ ನೀತಿ ಅನುಸಾರ ಬೆನಕನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳನ್ನು ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದ ವ್ಯಾಪ್ತಿಯಿಂದ ಬಿಡುಗಡೆಗೊಳಿಸಿ ಪ್ರತ್ಯೇಕ ಸಂಘ ಸ್ಥಾಪಿಸಬೇಕೆಂದು ಗ್ರಾಮಸ್ಥರು ಹಲವು ವರ್ಷಗಳಿಂದ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದರು. ಗ್ರಾಮಸ್ಥರ ನಿರಂತರ ಒತ್ತಾಯ, ಮನವಿ ಹಾಗೂ ಕಾನೂನು ಹೋರಾಟದ ಫಲವಾಗಿ ಇದೀಗ ಪ್ರತ್ಯೇಕ ಸಹಕಾರ ಸಂಘ ಸ್ಥಾಪನೆಗೆ ಅವಕಾಶ ದೊರೆತಿದೆ.

ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಗ್ರಾಮದ ಮುಖಂಡ ಗೌಡ್ರ ಜೆ. ರಾಜಶೇಖರ ಮೂರ್ತಿ, 2019ರಲ್ಲಿ ಬೆನಕನಹಳ್ಳಿ ಗ್ರಾಮಸ್ಥರು, ಕೋಳಿ ಮಲ್ಲನಹುಂಡಿಯ ಲಿಂಗಪ್ಪಾಜಿ, ಚಿಕ್ಕಬೂಹಳ್ಳಿಯ ನಾಗರಾಜು ಹಾಗೂ ಎಸ್.ಕೆಬ್ಬೇಹುಂಡಿಯ ಜಯರಾಮ್ ಅವರ ಸಹಕಾರ ದೊಂದಿಗೆ ಗ್ರಾಮಕ್ಕೆ ಪ್ರತ್ಯೇಕ ಸಹಕಾರ ಸಂಘ ನೀಡುವಂತೆ ಮನವಿ ಸಲ್ಲಿಸಿದ್ದೇವು. ಸರ್ಕಾರದ ಸುತ್ತೋಲೆ ಪ್ರಕಾರ ಗ್ರಾಪಂಗೊಂದು ಸಹಕಾರ ಸಂಘ ಸ್ಥಾಪಿಸಬೇಕೆಂಬ ನಿಯಮವಿದ್ದರೂ, ಸೋಸಲೆ ಸಹಕಾರ ಸಂಘದ ಆಡಳಿತ ಮಂಡಳಿ ನಮ್ಮ ಮನವಿಯನ್ನು ಆರಂಭದಿಂದಲೇ ವಿರೋಧಿಸುತ್ತಾ ಬಂದಿತ್ತು. ನಮ್ಮ ಬೇಡಿಕೆ ತಡೆಯುವ ಉದ್ದೇಶದಿಂದ ಸೋಸಲೆ ಸಂಘದವರು 2 ಬಾರಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಆದರೆ ನ್ಯಾಯಾಲಯವು ನಮ್ಮ ಪರವಾಗಿ ತೀರ್ಪು ನೀಡಿತ್ತು. ಆದರೂ ಸಂಘ ರಚನೆ ಪ್ರಕ್ರಿಯೆ ವಿಳಂಬವಾಗುತ್ತಲೇ ಇತ್ತು. ಕೊನೆಗೆ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರ ಸಹಕಾರ ಮತ್ತು ಪ್ರಯತ್ನದ ಫಲವಾಗಿ ಬೆನಕನಹಳ್ಳಿ ಗ್ರಾಮಕ್ಕೆ ಪ್ರತ್ಯೇಕ ಸಹಕಾರ ಸಂಘ ಮಂಜೂರಾಗಿದೆ ಎಂದರು.

ಇಂದು ಸಾಂಕೇತಿಕವಾಗಿ ಕಚೇರಿ ಉದ್ಘಾಟಿಸಿ ಪೂಜೆ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರನ್ನು ಆಹ್ವಾನಿಸಿ ಅಧಿಕೃತವಾಗಿ ಮತ್ತೊಮ್ಮೆ ಉದ್ಘಾಟನಾ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲಾಗುವುದು ಎಂದು ತಿಳಿಸಿದರು.

ಗ್ರಾಮಕ್ಕೆ ಪ್ರತ್ಯೇಕ ಸಹಕಾರ ಸಂಘ ದೊರಕುವ ನಿಟ್ಟಿನಲ್ಲಿ ಶ್ರಮಿಸಿದ ಎಲ್ಲಾ ಗ್ರಾಮಸ್ಥರು, ಮುಖಂಡರು ಹಾಗೂ ಹೋರಾಟದಲ್ಲಿ ಭಾಗವಹಿಸಿದವರ ಸೇವೆಯನ್ನು ಸ್ಮರಿಸಿದ ರಾಜಶೇಖರ ಮೂರ್ತಿ, ಈ ಸಾಧನೆ ಗ್ರಾಮಸ್ಥರ ಒಗ್ಗಟ್ಟಿನ ಫಲವಾಗಿದ್ದು, ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ನೂತನ ಕಚೇರಿ ಉದ್ಘಾಟನೆ ವೇಳೆ ಡೈರಿ ಪರಮೇಶ್, ನಾಗರಾಜು, ಬಿ.ಎಸ್. ಗಿರೀಶ್, ಡೈರಿ ರಾಜಪ್ಪ, ಬಿ.ಎಂ.ಬಸವರಾಜು, ಸದಾನಂದ, ಅಂಗಡಿ ನಟರಾಜು, ಕುಮಾರ, ಚಿಕ್ಕಬೂಹಳ್ಳಿ ಸೋಮಣ್ಣ, ವಿ.ಎನ್.ಮರಿಸ್ವಾಮಿ, ಪ್ರಸಾದ್ ಸೇತು, ಜಯರಾಂ, ಬಿ.ಎಸ್.ಸ್ವಾಮಿ, ಚಿನ್ನಸ್ವಾಮಿ ಸೇರಿದಂತೆ ಗ್ರಾಮಸ್ಥರು, ಮುಖಂಡರಿದ್ದರು.



ಬೆನಕನಹಳ್ಳಿಯಲ್ಲಿ ನೂತನ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯನ್ನು ಉದ್ಘಾಟಿಸಲಾಯಿತು.

> “ಬೆನಕನಹಳ್ಳಿ ಗ್ರಾಮಕ್ಕೆ ಪ್ರತ್ಯೇಕ ಸಹಕಾರ ಸಂಘ ಮಂಜೂರಾಗಲು ಗೌಡ್ರ ರಾಜಶೇಖರಮೂರ್ತಿ ಅವರ ನಿರಂತರ ಪರಿಶ್ರಮವೇ ಕಾರಣ. ಬೆನಕನಹಳ್ಳಿ ಸಹಕಾರ ಸಂಘದ ವ್ಯಾಪ್ತಿಗೆ ಬೆನಕನಹಳ್ಳಿ, ಕೆಂಡನಕೊಪ್ಪಲು, ಕೋಳಿ ಮಲ್ಲನಹುಂಡಿ, ಚಿಕ್ಕಬೂಹಳ್ಳಿ, ವೀರಪ್ಪ ಒಡೆಯರಹುಂಡಿ, ಹಸುವಟ್ಟಿ ಹಾಗೂ ಎಸ್.ಕೆಬ್ಬೇಹುಂಡಿ ಗ್ರಾಮಗಳು ಸೇರಿದ್ದು, ಸರ್ಕಾರದ ಸುತ್ತೋಲೆ ಪ್ರಕಾರ ಕಾರ್ಯಕಾರಿ ಸಮಿತಿ ರಚಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ರಚಿಸಿ ಬಳಿಕ ಪೂರ್ಣ ಪ್ರಮಾಣದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ.
>
> – ಎಸ್.ಲಿಂಗಪ್ಪಾಜಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಹೋಂ ಗಾರ್ಡ್ ಸ್ಥಳದಲ್ಲೇ ಸಾವು



ಹುಣಸೂರು, ಜೂ.18– ರಾತ್ರಿ ಪಾಳಿ ಕರ್ತವ್ಯ ನಿರ್ವಹಿಸಿ ಮನೆಗೆ ತೆರಳುವ ವೇಳೆ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಹೋಂ ಗಾರ್ಡ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಬೈಕ್ ಸವಾರ ಗಾಯಗೊಂಡಿರುವ ಘಟನೆ ಗುರುವಾರ ಮುಂಜಾನೆ ತಾಲೂಕಿನ ವಡೇರಹೊಸಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದಾಸೇಗೌಡರ ಪುತ್ರ, ಹುಣಸೂರು ಘಟಕದ ಹೋಂ ಗಾರ್ಡ್ ವಿ.ಡಿ.ಹರೀಶ (33) ಸಾವನ್ನಪ್ಪಿದವರು. ಇನ್ನು ಬೈಕ್ ಸವಾರ ಪ್ರಕಾಶ್ ಗಾಯಗೊಂಡು ಬಿಳಿಕೆರೆಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿವರ: ಹುಣಸೂರು ನಗರ ಠಾಣೆಯಲ್ಲಿ ರಾತ್ರಿ ಕರ್ತವ್ಯ ಮುಗಿಸಿದ ಮುಂಜಾನೆ 5.10ರ ವೇಳೆ ಮನೆಗೆ ತೆರಳುವ ವೇಳೆ ಬೈಕ್ ಕೆಟ್ಟಿದ್ದರಿಂದ ಹರೀಶ್ ಮನೆಗೆ ಫೋನ್ ಮಾಡಿ, ತನ್ನ ಮಾವ ಪ್ರಕಾಶ್‌ಗೆ ಬರುವಂತೆ ತಿಳಿಸಿದ್ದರು.

ಅದರಂತೆ ಸ್ಥಳಕ್ಕಾಗಮಿಸಿದ ಮಾವ ಪ್ರಕಾಶ್‌ನೊಂದಿಗೆ ಹರೀಶ್ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ವಡೇರಹೊಸಹಳ್ಳಿ ಬಳಿ ರಸ್ತೆ ಬದಿ ಇತ್ತೀಚೆಗೆ ಅಳವಡಿಸಿದ್ದ ವಿದ್ಯುತ್ ಕಂಬ ಕುಸಿದು ರಸ್ತೆ ಕಡೆಗೆ ಬಾಗಿತ್ತು. ಇದನ್ನು ಗಮನಿಸದ ಪ್ರಕಾಶ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಪ್ರಕಾಶ್ ಬೈಕ್ ನಿಂದ ಹಾರಿ ಬಿದ್ದು ಸಣ್ಣಪುಟ್ಟ ಗಾಯಗೊಂಡು ಬಿಳಿಕೆರೆಯ ಆಸ್ಪತ್ರೆಗೆ ದಾಖಲಾದರೇ, ಹರೀಶ್ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಮುನೀತ್ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಹೋಂ ಗಾರ್ಡ್ ಜಿಲ್ಲಾ ಡೆಪ್ಯೂಟಿ ಕಮಾಂಡೆಂಟ್ ಸುದರ್ಶನ್ ರಾವ್ ಗಾಯಕ್‌ವಾಡ್, ಘಟಕಾಧಿಕಾರಿ ಸಂಪತ್ ಕುಮಾರ್, ಸಹಾಯಕ ಭೋದಕರಾದ ಮಂಜುನಾಥ್ ಹಾಗೂ ಸಹೋದ್ಯೋಗಿಗಳು ಭೇಟಿ ನೀಡಿ ಮೃತ ಹರೀಶ್ ಅಂತಿಮ ದರ್ಶನ ಪಡೆದರು.

ಕುರುಹಟ್ಟಿಯಲ್ಲಿ ನಂ.ಗೂಡು ರಸಬಾಳೆ ಪುನಶ್ಚೇತನ ಕಾರ್ಯಕ್ರಮ

ನಂಜನಗೂಡು, ಜೂ.18– ಮಣ್ಣಿನ ಫಲವತ್ತತೆ ಕಾಪಾಡಿಕೊಂಡು, ಫಲವತ್ತಾದ ಕೃಷಿ ಭೂಮಿಯನ್ನು ಮುಂದಿನ ಪೀಳಿಗೆಗೆ ನೀಡುವ ಮಹತ್ವದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಕುರುಹಟ್ಟಿ ಮಾದಪ್ಪಸ್ವಾಮಿ ತಿಳಿಸಿದರು.

ತಾಲೂಕಿನ ಕುರುಹಟ್ಟಿ ಗ್ರಾಮದಲ್ಲಿ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು ವತಿಯಿಂದ ನಡೆದ ಬೇತ್ ಬಚಾವೋ ಅಭಿಯಾನ ಅಂಗವಾಗಿ ನಂಜನಗೂಡು ರಸಬಾಳೆ ಪುನಶ್ಚೇತನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರು ರಾಸಾಯನಿಕ ಬಳಕೆ ಬಿಟ್ಟು ಸಾವಯವ ಕೃಷಿ ಅಳವಡಿಸಿಕೊಳ್ಳುವ ಮೂಲಕ ಮಣ್ಣಿನ ಫಲವತ್ತತೆ ಕಾಪಾಡಿಕೊಂಡು ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ವರ್ಗಾಯಿಸಬೇಕು ಎಂದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಜ್ಞಾನೇಶ್ ಬಿ.ಎನ್. ಮಾತನಾಡಿ ಬೇತ್ ಬಚಾವೋ ಅಭಿಯಾನದ ಉದ್ದೇಶ ಮತ್ತು ಮಹತ್ವ ವಿವರಿಸಿದರಲ್ಲದೆ, ಸೊರಗು ರೋಗ ನಿರ್ವಹಣೆಯೊಂದಿಗೆ ಸಾವಯವ ಕೃಷಿಯಲ್ಲಿ ನಂಜನಗೂಡು ರಸಬಾಳೆಯನ್ನು ಬೆಳೆದರೆ ಉತ್ತಮ ಇಳುವರಿ ಪಡೆಯಬಹುದು. ಅಲ್ಲದೇ ನಿಮ್ಮ ಬೆಳೆಯನ್ನು ಹೊರ ದೇಶಕ್ಕೆ ರಫ್ತು ಮಾಡಲು ಅವಕಾಶವಿದೆ. ಅದ್ದರಿಂದ ರೈತರು ಹಂತ ಹಂತವಾಗಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ಸಾವಯವ ಕೃಷಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕೆವಿಕೆಯ ವಿಷಯ ತಜ್ಞ ಡಾ.ವಿನಯ್ ಮಾತನಾಡಿ ಮಣ್ಣಿನ ಆರೋಗ್ಯ ನಿರ್ವಹಣೆ, ಹಸಿರು ಗೊಬ್ಬರ ಬೆಳೆಗಳ ಮಹತ್ವ, ನೈಸರ್ಗಿಕ ಕೃಷಿ ಪದ್ಧತಿಗಳು ಹಾಗೂ ಅಂತರಬೆಳೆ ಅಗತ್ಯ ಕುರಿತು ರೈತರಿಗೆ ಮಾಹಿತಿ ನೀಡಿದರು.

ಡಾ.ಪ್ರಸಾದ್ ಮಾತನಾಡಿ, ಸಾವಯವ ಕೃಷಿಯಲ್ಲಿ ಜೈವಿಕ ಗೊಬ್ಬರಗಳು ಮತ್ತು ಜೈವಿಕ ಶಿಲೀಂದ್ರ, ನಾಶಕಗಳ ಮಹತ್ವವನ್ನು ವಿವರಿಸಿದರು.

ಈ ಸಂದರ್ಭ ರಸಬಾಳೆ ತೋಟಗಳಲ್ಲಿ ಮಣ್ಣಿನ ಆರೋಗ್ಯ ಸುಧಾರಣೆ, ಬೇರುಗಳ ಬೆಳವಣಿಗೆ ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಉದ್ದೇಶದಿಂದ ರೈತರಿಗೆ ಜೈವಿಕ ಶಿಲೀಂದ್ರ ನಾಶಕಗಳಾದ AMC, ಟ್ರೈಕೋಡರ್ಮಾ ಕೃಷಿ ಪರಿಕರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕೆವಿಕೆಯ ವಿಷಯ ತಜ್ಞರಾದ ಡಾ.ದೀಪಕ್, ಸಾವಯವ ಕೃಷಿಕ ನಂಜುಂಡಸ್ವಾಮಿ, ರವೀಶ್ ಹಾಗೂ ಅನೇಕ ರೈತರು ಭಾಗವಹಿಸಿ ಮಣ್ಣಿನ ಆರೋಗ್ಯ ಸಂರಕ್ಷಣೆ, ನೈಸರ್ಗಿಕ ಕೃಷಿ ಹಾಗೂ ರಸಬಾಳೆ ಬೆಳೆ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿ ಪಡೆದುಕೊಂಡರು.



ನಂಜನಗೂಡು ರಸಬಾಳೆ ಪುನಶ್ಚೇತನ ಕಾರ್ಯಕ್ರಮ ನಡೆಯಿತು.

ನಾಳೆ ವಿದ್ಯುತ್ ವ್ಯತ್ಯಯ

ಕೆ.ಆರ್.ನಗರ, ಜೂ.18– ಪಟ್ಟಣದ 66/11 ಕೆವಿ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ಒಂದನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.20ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಕೆ.ಆರ್.ನಗರ ಪಟ್ಟಣ, ಚಂದಗಾಲು, ಹೆಬ್ಬಾಳು, ಸಿದ್ದಾಪುರ, ಬ್ಯಾಡರಹಳ್ಳಿ, ದೊಡ್ಡೇಕೊಪ್ಪಲು, ಲಾಳಂದೇವನಹಳ್ಳಿ, ಕಗ್ಗೆರೆ, ತಿಪ್ಪೂರು ಗ್ರಾಪಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವಿತರಣಾ ಪರವಾನಗಿ ಕೋರಿರುವ ಕಂಪನಿಗಳ

ಅರ್ಜಿ ತಿರಸ್ಕರಿಸುವಂತೆ ಆಗ್ರಹಿಸಿ ಪ್ರತಿಭಟನೆ

ಹೆಚ್.ಡಿ.ಕೋಟೆ, ಜೂ.18– ಕರ್ನಾಟಕ ವಿವಿಧ ಸಾರ್ವಜನಿಕ ವಿದ್ಯುತ್ ವಿತರಣಾ ಕಂಪನಿಯ 19 ಕಂದಾಯ ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ಪರವಾನಗಿ ಕೋರಿರುವ ಟಾಟಾ ಪವರ್ ಕಂಪನಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿ ತಿರಸ್ಕರಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ತಾಲೂಕು ಘಟಕದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಪರವಾನಗಿ ಅರ್ಜಿ ತಿರಸ್ಕರಿಸುವಂತೆ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘ ತಾಲೂಕು ಘಟಕದ ಅಧ್ಯಕ್ಷ ಪಿ.ಪಲಿಸ್ವಾಮಿ ಮಾತನಾಡಿ, ರಾಜ್ಯದ ರೈತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ವಿವಿಧ ಜಿಲ್ಲೆಗಳಲ್ಲಿ ಸಾರ್ವಜನಿಕ ವಿದ್ಯುತ್ ಪೂರೈಕೆ ಕಂಪನಿಗಳನ್ನು ಸಮಾನಂತರವಾಗಿ ವಿದ್ಯುತ್ ವಿತರಣಾ ಲೈಸನ್ಸ್ ಕೋರಿರುವ ಅರ್ಜಿಗಳನ್ನು ತಿರಸ್ಕರಿಸಬೇಕು.

ಸಾರ್ವಜನಿಕ ವಿತರಣೆಗೆ ಸಂಬಂಧಿಸಿದಂತೆ ಅನೇಕ ಮೂಲ ಸೌಕರ್ಯಗಳನ್ನು ಹೊಂದಿರಬೇಕಾಗುತ್ತದೆ. ಆದರೆ ಕಂಪನಿ ಗುಣಮಟ್ಟದ ಸೇವೆ ನೀಡುವ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ರಾಜ್ಯದಲ್ಲಿ 40 ಲಕ್ಷಕ್ಕೂ ಹೆಚ್ಚು ಇರುವ ಕೃಷಿಕರು 19 ಜಿಲ್ಲೆಗಳಲ್ಲಿ ಸರಾಸರಿಗಿಂತ ಹೆಚ್ಚು ಪಂಪ್‌ಸೆಟ್‌ಗಳನ್ನು ಹೊಂದಿದ್ದಾರೆ. ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಕಂಪನಿಗಳಿಗೆ ನೀಡಿದ್ದಲ್ಲಿ, ಸ್ಮಾರ್ಟ್ ಮೀಟರ್, ನೇರ ನಗದು ವರ್ಗಾವಣೆಯಿಂದ ರೈತರಿಗೆ ಸಂಕಷ್ಟ ಎದುರಾಗಲಿದೆ ಎಂದರು.

ಈಗಾಗಲೇ ಕಂಪನಿ ಕೆಲಸ ನಿರ್ವಹಿಸುತ್ತಿದ್ದು, ಮುಂಬೈ, ದೆಹಲಿ, ಒರಿಸ್ಸಾ ರಾಜ್ಯಗಳಲ್ಲಿ ವಿದ್ಯುತ್ ವಿತರಣೆ ಕಳಪೆ ಗುಣಮಟ್ಟದಿಂದ ಕೂಡಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಹೀಗಾಗಿ ಕಂಪನಿ ನೀಡಿರುವ ಅರ್ಜಿಗಳನ್ನು ತಿರಸ್ಕರಿಸುವಂತೆ ಒತ್ತಾಯಿಸಿದರು.

ಇದೇ ವೇಳೆ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಟ್ಟರು. ಚೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ಚಂದುಕುಮಾರ್, ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜು, ಗೌರವಾಧ್ಯಕ್ಷ ರವಿಕುಮಾರ್, ಮುಖಂಡರಾದ ಎಂ.ಸಿ.ದೊಡ್ಡ ನಾಯಕ, ನರಸಿಂಹಗೌಡ, ಜಯಂತ್, ಶಿವರಾಜ್, ಮೊತ್ತ ಬಸವರಾಜಪ್ಪ, ಕುಮಾರಸ್ವಾಮಿ, ಶಿವಸ್ವಾಮಿ, ಗಜೇಂದ್ರ, ಚೆಲುವರಾಜು, ಶೇಷ, ಮಲ್ಲಿಕಾರ್ಜುನ್, ಶಾಂತ, ದೇವರಾಜು, ದೇವಮ್ಮ ಇನ್ನಿತರರಿದ್ದರು.



ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಆಟೋ ಚಾಲಕರು ತಪ್ಪದೇ ಸಂಚಾರಿ ನಿಯಮ ಪಾಲಿಸಿ

ಸಂಚಾರಿ ಪೊಲೀಸ್ ಠಾಣೆ ಎಎಸ್‌ಐ ಮಹದೇವು ಸಲಹೆ



ನೂತನ ಆಟೋ ನಿಲ್ದಾಣವನ್ನು ಸಂಚಾರಿ ಪೊಲೀಸ್ ಠಾಣೆ ಎಎಸ್‌ಐ ಮಹದೇವು ಉದ್ಘಾಟಿಸಿದರು.

ನಂಜನಗೂಡು, ಜೂ.18– ಆಟೋ ಚಾಲಕರು ತಪ್ಪದೇ ಸಂಚಾರಿ ನಿಯಮಗಳನ್ನು ಪಾಲಿಸುವ ಜೊತೆಗೆ ಸಾರ್ವಜನಿಕರ ಜೊತೆಗೆ ಸೌಹಾರ್ದಯುತವಾಗಿ ವರ್ತಿಸಬೇಕು ಎಂದು ಸಂಚಾರಿ ಪೊಲೀಸ್ ಠಾಣೆ ಎಎಸ್‌ಐ ಮಹದೇವು ತಿಳಿಸಿದರು.

ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ನೂತನ ಆಟೋ ನಿಲ್ದಾಣ ಮತ್ತು ಆಟೋ ಚಾಲಕರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಆಟೋ ಚಾಲಕರು ಚಾಲನಾ ಪರವಾನಗಿ, ನಿಮ್ಮ ವಾಹನಗಳಿಗೆ ವಾಹನ ಸಾಮರ್ಥ್ಯ ಪ್ರಮಾಣ ಪತ್ರ, ವಿಮೆಯನ್ನು ತಪ್ಪದೇ ಮಾಡಿಸಿಕೊಳ್ಳಬೇಕು. ಜೊತೆಗೆ ರಸ್ತೆಯಲ್ಲಿ ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಪ್ರಮುಖವಾಗಿ ನಂಜನಗೂಡು ಪ್ರವಾಸಿ ತಾಣವಾಗಿರುವ ಕಾರಣ ರಾಜ್ಯದ ವಿವಿಧ ಮೂಲಗಳಿಂದ ಬರುವ ಜನರೊಂದಿಗೆ ಸೌಹಾರ್ದಯುತವಾಗಿ ವರ್ತಿಸುವ ಮೂಲಕ ನಂಜನಗೂಡಿನ ಘನತೆ ಕಾಪಾಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ನಗರಸಭಾ ಮಾಜಿ ಸದಸ್ಯ ಮಹದೇವ ಪ್ರಸಾದ್, ಶ್ರೀಕಂಠೇಶ್ವರ ಆಟೋ ನಿಲ್ದಾಣ ಗೌರವಾಧ್ಯಕ್ಷ ಸುರೇಶ್, ನೂತನ ಅಧ್ಯಕ್ಷ ರಾಮಣ್ಣ, ಉಪಾಧ್ಯಕ್ಷ ಕುಮಾರಸ್ವಾಮಿ, ಖಜಾಂಚಿ ಶ್ರೀನಿವಾಸ್, ರಾಜೇಶ್, ಸುಬ್ಬಣ್ಣ, ಶಂಕರ್, ತಂಬಿ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರತ್ಯೇಕ ಪ್ರಕರಣ: ಗೃಹ ಬಳಕೆ ಅಡುಗೆ ಅನಿಲ ಅಕ್ರಮ ರೀಫಿಲ್ಲಿಂಗ್

ಇಬ್ಬರು ಆರೋಪಿಗಳ ಬಂಧನ, ಸಿಲಿಂಡರ್‌ಗಳ ವಶ

ತಿ.ನರಸೀಪುರ, ಜೂ.18– ಪ್ರತ್ಯೇಕ ಪ್ರಕರಣಗಳಲ್ಲಿ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳಿಂದ ಅಕ್ರಮವಾಗಿ ಗ್ಯಾಸ್ ರೀಫಿಲ್ಲಿಂಗ್ ಮಾಡಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ತಿ.ನರಸೀಪುರ ಪಟ್ಟಣ ಠಾಣೆ ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ತಾಲೂಕಿನ ಹೊಸ ತಿರುಮಕೂಡಲು ನಿವಾಸಿ ಉಮೇಶ್ ಹಾಗೂ ತಿ.ನರಸೀಪುರ ಪಟ್ಟಣದ ಶ್ರೀರಾಂಪುರ ಬೀದಿ ನಿವಾಸಿ ಖಲಂದರ್ ಪಾಷ ಬಂಧಿತ ಆರೋಪಿಗಳು. ಇವರಿಂದ ಇಂಡೇನ್ ಕಂಪನಿಯ 14.2 ಕೆಜಿ ತೂಕದ ಗೃಹಬಳಕೆಯ ಸಿಲಿಂಡರ್‌ಗಳು, ಭಾರತ್ ಕಂಪನಿಯ 19.2 ಕೆಜಿ ವಾಣಿಜ್ಯ ಬಳಕೆಯ ಸಿಲಿಂಡರ್, 5 ಕೆಜಿ ಸಿಲಿಂಡರ್, ಸೂರ್ಯ ಹಾಗೂ ಎಲೆಕ್ಟ್ರಾ ಕಂಪನಿಯ 2 ಎಲೆಕ್ಟ್ರಾನಿಕ್ ತೂಕದ ಯಂತ್ರ, 4 ರೀಫಿಲಿಂಗ್ ನಾಬ್‌ಗಳು ಹಾಗೂ ಗ್ಯಾಸ್ ಮಾರಾಟದಿಂದ ಸಂಗ್ರಹಿಸಲಾ ಗಿದ್ದ 300 ರೂ.ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ತಿ.ನರಸೀಪುರದ ಹೊಸ ತಿರುಮಕೂಡಲು ಪ್ರದೇಶದಲ್ಲಿರುವ ಮನೆ ಹಾಗೂ ಪಟ್ಟಣದ ಶ್ರೀರಾಂಪುರ ಬೀದಿಯ ರೈಸ್‌ಮಿಲ್ ಪಕ್ಕದ ತಗಡು ಶೀಟಿನ ಗೋಡೌನ್ ಮೇಲೆ ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಬುಧವಾರ ಸಂಜೆ ದಾಳಿ ನಡೆಸಿದರು. ಈ ವೇಳೆ ಮನೆ ಮುಂಭಾಗ ಹಾಗೂ ತಗಡು ಶೀಟಿನ ಗೋಡೌನ್‌ನಲ್ಲಿ ಗೃಹಬಳಕೆಯ ಸಿಲಿಂಡರ್‌ನಿಂದ ಸಣ್ಣ ಸಿಲಿಂಡರ್‌ಗಳಿಗೆ ಗ್ಯಾಸ್ ತುಂಬುತ್ತಿರುವುದು ಕಂಡು ಬಂದಿದೆ.

ಪೊಲೀಸ್ ಸಿಬ್ಬಂದಿ ಹಾಗೂ ಪಂಚರ ಸಮ್ಮುಖದಲ್ಲಿ ಸ್ಥಳ ಪರಿಶೀಲಿಸಿದಾಗ ಆರೋಪಿಗಳು ಯಾವುದೇ ಅಧಿಕೃತ ಅನುಮತಿ ಇಲ್ಲದೆ ಗೃಹಬಳಕೆಯ ಹಾಗೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ರೀಫಿಲಿಂಗ್ ಮಾಡುತ್ತಿದ್ದು ಬೆಳಕಿಗೆ ಬಂದಿದೆ. ಒಂದು ಕೆಜಿ ಗ್ಯಾಸ್‌ಗೆ 100ರಂತೆ ಹಣ ಪಡೆದು ರೀಫಿಲ್ಲಿಂಗ್ ಮಾಡುತ್ತಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ರೀತಿಯ ಅಕ್ರಮ ರೀಫಿಲಿಂಗ್ ಚಟುವಟಿಕೆಗಳು ಅಗ್ನಿ ಅವಘಡ ಸೇರಿದಂತೆ ಸಾರ್ವಜನಿಕರ ಪ್ರಾಣ ಹಾಗೂ ಆಸ್ತಿಗೆ ಅಪಾಯ ಉಂಟು ಮಾಡುವ ಸಾಧ್ಯತೆ ಹೊಂದಿವೆ. ಆದ್ದರಿಂದ ಆರೋಪಿಗಳನ್ನು ಬಂಧಿಸಿ ವಶಪಡಿಸಿಕೊಂಡ ವಸ್ತುಗಳೊಂದಿಗೆ ಠಾಣೆಗೆ ಕರೆತಂದು ಪ್ರಕರಣ ದಾಖಲಿಸಲಾಗಿದೆ.

ಈ ಸಂಬಂಧ ಆರೋಪಿಗಳ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಹಾಗೂ ಎಲ್‌ಪಿಜಿ ಸರಬರಾಜು ಮತ್ತು ವಿತರಣಾ ನಿಯಂತ್ರಣ ಆದೇಶದ ಕಲಂ 4(2) ಮತ್ತು 7(ಸಿ) ಅಡಿಯಲ್ಲಿ ತಿ.ನರಸೀಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಆರೋಪಿಗಳಿಂದಸಿಲಿಂಡರ್ ವಶಪಡಿಸಿಕೊಂಡಿರುವುದು.

ಕುಡಿದ ಅಮಲಿನಲ್ಲಿ ವ್ಯಕ್ತಿಗೆ ಚಾಕುವಿನಿಂದ ಇರಿತ

ಸರಗೂರು ಪೊಲೀಸರಿಂದ ಆರೋಪಿ ಬಂಧನ



ಚಾಕು ಇರಿತಕೊಳ್ಳಗಾದ ರಾಜಶೇಖರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು.

ಸರಗೂರು, ಜೂ.18– ಕುಡಿದ ಅಮಲಿನಲ್ಲಿ ವ್ಯಕ್ತಿಯೋರ್ವ ಮತ್ತೋರ್ವನಿಗೆ ಚಾಕುವಿನಿಂದ ಇರಿದಿರುವ ಘಟನೆ ಬುಧವಾರ ತಾಲೂಕಿನ ಎಂ.ಸಿ.ತಳಲು ಗ್ರಾಮದಲ್ಲಿ ನಡೆದಿದ್ದು, ಆರೋಪಿಯನ್ನು ಸರಗೂರು ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಾಲೂಕಿನ ಎಂ.ಸಿ.ತಳಲು ಗ್ರಾಮದ ನಿವಾಸಿ ರಾಜಶೇಖರ್ ಇರಿತಕ್ಕೊಳಗಾಗಿದ್ದು, ಆರೋಪಿ ಆನಂದ್ ಬಂಧನಕ್ಕೊಳಗಾದವರು.

ವಿವರ: ಬುಧವಾರ ಮಧ್ಯಾಹ್ನ ಎಂ.ಸಿ.ತಳಲು ಗ್ರಾಮದ ಆನಂದ್ ಮದ್ಯಪಾನ ಮಾಡಿ ಗ್ರಾಮಸ್ಥರನ್ನು ನಿಂದಿಸುತ್ತಿದ್ದರು. ಇದನ್ನು ಗ್ರಾಮದ ನಿವಾಸಿ ಮಂಜು ಪ್ರಶ್ನಿಸಿದ್ದಾರೆ. ಈ ವೇಳೆ ಆನಂದ್ ಕುಡಿದ ಮತ್ತಿನಲ್ಲಿ ಗ್ರಾಮದಲ್ಲಿ ಯಾರೇ ನನ್ನನ್ನು ಪ್ರಶ್ನಿಸಿದ್ದರೂ ಅವರಿಗೆ ಚಾಕುವಿನಿಂದ ಚುಚ್ಚುವುದಾಗಿ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಈ ವೇಳೆ ಮಂಜು ಪಕ್ಕದಲ್ಲಿದ್ದ ರಾಜಶೇಖರ್ ಆನಂದನಿಗೆ ಬುದ್ದಿವಾದ ಹೇಳಲು ಮುಂದಾಗಿದ್ದಾರೆ. ಈ ವೇಳೆ ಆಕ್ರೋಶಗೊಂಡ ಆನಂದ ತನ್ನ ಬಳಿ ಇದ್ದ ಚಾಕುವಿನಿಂದ ರಾಜಶೇಖರ್ ಹೊಟ್ಟೆಗೆ ಚುಚ್ಚಿದ್ದಾನೆ. ಇದರಿಂದ ರಾಜಶೇಖರ್‌ಗೆ ತುಂಬಾ ರಕ್ತಸ್ರಾವವಾಗಿದ್ದು, ತಕ್ಷಣ ಗ್ರಾಮಸ್ಥರು ಆಂಬುಲೆನ್ಸ್‌ಗೆ ಕರೆ ಮಾಡಿದರಾದರೂ ಸ್ಥಳಕ್ಕೆ ಆಂಬುಲೆನ್ಸ್ ಬಾರದ ಹಿನ್ನಲೆಯಲ್ಲಿ ಗ್ರಾಮಸ್ಥರು ತಮ್ಮ ಸ್ವಂತ ವಾಹನದಲ್ಲಿ ರಾಜಶೇಖರ್‌ನನ್ನು ಕರೆದೊಯ್ದು ಚಿಕಿತ್ಸೆಗಾಗಿ ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಠಾಣೆ ಪೊಲೀಸರು ಆರೋಪಿ ಆನಂದ್‌ನನ್ನು ಬಂಧಿಸಿ, ಆತನ ವಿರುದ್ಧ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೈ ಕೊಟ್ಟ ಮುಂಗಾರು ಮಳೆ: ರೈತರಲ್ಲಿ ಆತಂಕ

● 24 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ ಕಾರ್ಯ ● ಮಳೆಯಾಗದಿದ್ದರೇ ಬೆಳೆ ಕಳೆದುಕೊಳ್ಳುವ ಭೀತಿಯಲ್ಲಿ ರೈತರು



ಸರಗೂರು, ಜೂ.18– ಉತ್ತಮ ಮುಂಗಾರು ಮಳೆ ನಿರೀಕ್ಷೆಯಲ್ಲಿ ಕೃಷಿ ಚಟುವಟಿಕೆ ಆರಂಭಿಸಿದ್ದ ರೈತರಿಗೆ ಈ ಬಾರಿ ನಿರಾಸೆಯಾಗಿದ್ದು, ಜೂನ್ ತಿಂಗಳ ಮೊದಲೆರಡು ವಾರಗಳು ಕಳೆದು 3ನೇ ವಾರ ಆರಂಭವಾದರೂ ಸರಗೂರು ತಾಲೂಕಿನಲ್ಲಿ ಹೇಳಿಕೊಳ್ಳುವಷ್ಟು ಮಳೆಯಾಗದಿರುವುದು ರೈತರಲ್ಲಿ ಆತಂಕ ಮೂಡಿಸಿದೆ.

ಮಳೆ ಕೊರತೆಯಿಂದ ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳು ಒಣಗಲಾರಂಭಿಸಿದ್ದು, ಇನ್ನೂ ಕೆಲ ದಿನಗಳಲ್ಲಿ ಉತ್ತಮ ಮಳೆ ಯಾಗದಿದ್ದರೆ ಶೇ.50 ರಷ್ಟು ಬೆಳೆಗಳು ಸಂಪೂರ್ಣ ನಾಶವಾಗುವ ಭೀತಿ ಎದುರಾಗಿದೆ.

ಮೇ ತಿಂಗಳ ಕೊನೆ ವಾರದಲ್ಲಿ ಒಂದೆರಡು ದಿನ ಅಕಾಲಿಕ ಮಳೆಯಾಗಿದ್ದರಿಂದ ರೈತರು ಉತ್ತಮ ಮುಂಗಾರು ಆರಂಭವಾಗಲಿದೆ ಎಂಬ ನಿರೀಕ್ಷೆಯಲ್ಲಿ ತಮ್ಮ ಜಮೀನುಗಳನ್ನು ಹದಗೊಳಿಸಿ ಬಿತ್ತನೆಗೆ ಸಿದ್ಧತೆ ಮಾಡಿಕೊಂಡಿದ್ದರು. ಹವಾಮಾನ ಇಲಾಖೆ ಕೂಡ ಜೂನ್ ಮೊದಲ ವಾರದಲ್ಲೇ ಮುಂಗಾರು ಆಗಮನವಾಗಲಿದೆ ಎಂದು ಮುನ್ಸೂಚನೆ ನೀಡಿತ್ತು. ಆದರೆ ಆ ನಿರೀಕ್ಷೆ ಈಡೇರದೇ ಮಳೆ ಮೋಡಗಳಲ್ಲೇ ಸೀಮಿತವಾಗಿರುವುದು ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

ಮಳೆ ಬದಲು ಹೆಚ್ಚಿದ ಬಿಸಿಲಿನ ತಾಪ: ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಮಳೆಯಾಗಬೇಕಾದ ಪ್ರದೇಶದಲ್ಲಿ ಈ ಬಾರಿ ಬಿಸಿಲಿನ ತಾಪ ಹೆಚ್ಚಾಗಿದೆ. ಜೂನ್ ಎರಡನೇ ವಾರದಿಂದ ಉಷ್ಣಾಂಶದಲ್ಲಿ ಗಣನೀಯ ಏರಿಕೆಯಾಗಿದ್ದು, ಕಳೆದ ಕೆಲವು ದಿನಗಳಿಂದ 33 ರಿಂದ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಬಿಸಿಲಿನ ತೀವ್ರತೆಯಿಂದ ಸಾರ್ವಜನಿಕರು ಮತ್ತು ರೈತರು ತೊಂದರೆಗೀಡಾಗಿದ್ದಾರೆ.

ನಿತ್ಯ ಸಂಜೆ ವೇಳೆ ಆಕಾಶದಲ್ಲಿ ದಟ್ಟ ಮೋಡ ಕವಿದು ಗುಡುಗು–ಮಿಂಚಿನ ಸದ್ದು ಕೇಳಿ ಬರುತ್ತಿದ್ದರೂ, ಭಾರೀ ಗಾಳಿಯಿಂದ ಮೋಡಗಳು ಚದುರಿ ಹೋಗುತ್ತಿವೆ. ಪರಿಣಾಮ ಮಳೆ ನೆಲಕ್ಕೆ ಬೀಳದೇ ರೈತರ ನಿರೀಕ್ಷೆಗಳು ಹುಸಿಯಾಗುತ್ತಿವೆ.

ಸಾವಿರಾರು ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ಸಂಕಷ್ಟ: ಸರಗೂರು, ಹೆಚ್.ಡಿ.ಕೋಟೆ ತಾಲೂಕಿನಾದ್ಯಂತ 24 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬಿತ್ತನೆ ಮಾಡಲಾಗಿದೆ. ಜೊತೆಗೆ 3040 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆ ಬಿತ್ತನೆಗೊಂಡಿದೆ. ಆದರೆ ಮಳೆ ಕೊರತೆಯಿಂದ ಈಗಾಗಲೇ ಮೊಳಕೆಯೊಡೆದ ಬೆಳೆಗಳು ಒಣಗಲಾರಂಭಿಸಿದ್ದು, ರೈತರು ತೀವ್ರ ಚಿಂತೆಗೀಡಾಗಿದ್ದಾರೆ.

ಇನ್ನೂ ಅನೇಕ ರೈತರು ತಮ್ಮ ಜಮೀನುಗಳನ್ನು ಹದಗೊಳಿಸಿ ಬೀಜ, ರಸ ಗೊಬ್ಬರ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದರೂ, ಮಳೆ ಬರದ ಕಾರಣ ಬಿತ್ತನೆ ಕಾರ್ಯ ಕೈಗೊಳ್ಳಲು ಸಾಧ್ಯವಾಗಿಲ್ಲ. ಕೆಲವೆಡೆ ಮಾತ್ರ ಬಿತ್ತನೆ ನಡೆದಿದ್ದು, ಆ ರೈತರು ಈಗ ಬೆಳೆ ಉಳಿಸಿಕೊಳ್ಳುವ ಹೋರಾಟ ನಡೆಸುತ್ತಿದ್ದಾರೆ.

ಪಂಪ್‌ಸೆಟ್ ನೀರಿನ ಮೊರೆ: ಮಳೆ ಕೈ ಕೊಟ್ಟ ಹಿನ್ನೆಲೆಯಲ್ಲಿ ಕೆಲವು ರೈತರು ತಮ್ಮ ಬೆಳೆಗಳನ್ನು ಉಳಿಸಿಕೊಳ್ಳಲು ನೆರೆಹೊರೆಯವರ ಪಂಪ್‌ಸೆಟ್ ನೀರಿನ ಮೊರೆ ಹೋಗಿದ್ದಾರೆ. ಆದರೆ ಹಲವು ಪ್ರದೇಶಗಳಲ್ಲಿ ಅಂತರ್ಜಲ ಮಟ್ಟವೂ ಕುಸಿದಿರುವುದರಿಂದ ಪಂಪ್‌ಸೆಟ್‌ಗಳಲ್ಲಿ ಸಮರ್ಪಕ ನೀರು ದೊರೆಯುತ್ತಿಲ್ಲ. ಇದರಿಂದ ತೋಟಗಾರಿಕಾ ಬೆಳೆಗಳಿಗೂ ನೀರಿನ ಅಭಾವ ಎದುರಾಗಿದ್ದು, ಕೃಷಿ ಕ್ಷೇತ್ರದಲ್ಲಿ ಅನಿಶ್ಚಿತತೆ ಹೆಚ್ಚಾಗಿದೆ. ಮಳೆ ಕೊರತೆಯಿಂದ ಕಂಗೆಟ್ಟಿರುವ ರೈತರು ಇದೀಗ ದೇವರ ಮೊರೆ ಹೋಗುತ್ತಿದ್ದಾರೆ. ವಿಶೇಷ ಪೂಜೆ ಸಲ್ಲಿಸಿ ಮಳೆಯಾಗುವಂತೆ ಪ್ರಾರ್ಥಿಸಿದ್ದಾರೆ. ತಕ್ಷಣ ಮಳೆಯಾಗದಿದ್ದರೆ ಭಾರೀ ನಷ್ಟದವಾಗುವ ಸಾಧ್ಯತೆ ಇದೆ.

ಕೃಷಿ ತಜ್ಞರು ಹಾಗೂ ರೈತರು ಮುಂದಿನ ಕೆಲ ದಿನಗಳಲ್ಲಿ ಸಮರ್ಪಕ ಮಳೆಯಾಗದಿದ್ದರೆ ಈಗಾಗಲೇ ಬಿತ್ತನೆಯಾಗಿರುವ ಬೆಳೆಗಳು ಸಂಪೂರ್ಣ ಒಣಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ಮುಂಗಾರು ಆರಂಭದ ಹಂತದಲ್ಲೇ ಮಳೆ ಕೊರತೆ ಎದುರಾಗಿರುವುದು ರೈತರಲ್ಲಿ ಆತಂಕ ಹೆಚ್ಚಿಸಿದ್ದು, ಎಲ್ಲರ ದೃಷ್ಟಿಯೂ ಈಗ ಆಕಾಶದತ್ತ ನೆಟ್ಟಿದೆ. ವರುಣನ ಕೃಪೆ ದೊರಕದಿದ್ದರೆ ಈ ವರ್ಷದ ಕೃಷಿ ಚಟುವಟಿಕೆಗಳು ಮತ್ತು ರೈತರ ಆದಾಯದ ಮೇಲೆ ಗಂಭೀರ ಪರಿಣಾಮ ಬೀಳುವ ಸಾಧ್ಯತೆ ಇದೆ.

ವಾಟಾಳು ಶ್ರೀಗಳ ಆಶೀರ್ವಾದ ಪಡೆದ ಧರ್ಮಸೇನಾ



ತಿ.ನರಸೀಪುರ ತಾಲೂಕಿನ ವಾಟಾಳು ಮಠಕ್ಕೆ ಕಾಂಗ್ರೆಸ್ ಪಕ್ಷದ ಕೇರಳದ ಉಸ್ತುವಾರಿ, ಮಾಜಿ ಎಂಎಲ್‌ಸಿ ಆರ್.ಧರ್ಮಸೇನಾ ಭೇಟಿ ನೀಡಿ ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ವೇಳೆ ಹಿರಿಯ ವಕೀಲ ರಂಗನಾಥ ಪ್ರಸಾದ್, ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶಿವರಾಜು, ಮುಖಂಡ ಶ್ರೀಕಾಂತ್ ಸೇರಿದಂತೆ ಇನ್ನಿತರರಿದ್ದರು.

ಎಂ.ಶಿವಣ್ಣ ನಿಧನ



ತಿ.ನರಸೀಪುರ, ಜೂ.18– ಪಟ್ಟಣದ ಗೋಪಾಲಪುರ ನಿವಾಸಿ ಹಾಗೂ ನಿವೃತ್ತ ಶಿಕ್ಷಕ ಎಂ.ಶಿವಣ್ಣ(79) ಗುರುವಾರ ರಾತ್ರಿ ನಿಧನರಾದರು. ಮೃತರು ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದು, ಮೃತರ ಕುಟುಂಬದವರು ಮೈಸೂರಿನ ಮೆಡಿಕಲ್ ಕಾಲೇಜಿಗೆ ದೇಹ ದಾನ ಮಾಡಿದ್ದಾರೆ.

ಮೈಸೂರು ಮಿತ್ರ

ಕರ್ನಾಟಕದ ವೇಗದ ಬೌಲರ್ ವೈಶಾಕ್ ವಿಜಯ್ ಕುಮಾರ್ ಮೈಸೂರು ವಾರಿಯರ್ಸ್ ತಂಡದ ನಾಯಕ

●ಮೈಸೂರು ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ತಂಡದ ಪರಿಚಯ, ಗೀತೆ ಕಾರ್ಯಕ್ರಮ

●ನಾಯಕನನ್ನು ಅಧಿಕೃತವಾಗಿ ಪ್ರಕಟಿಸಿದ ತಂಡದ ಮಾಲೀಕ ಅರ್ಜುನ್ ರಂಗ

ಮೈಸೂರು, ಜೂ.18(ಎಂಕೆ)– ಮೈಸೂರು ವಾರಿಯರ್ಸ್ ತಂಡವು ಮುಂಬರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 5ನೇ ಆವೃತ್ತಿಯ ಪಂದ್ಯಾವಳಿಗೆ ಕರ್ನಾಟಕದ ವೇಗದ ಬೌಲರ್ ವೈಶಾಕ್ ವಿಜಯ್ ಕುಮಾರ್ ಅವರನ್ನು ತಂಡದ ನಾಯಕನನ್ನಾಗಿ ಅಧಿಕೃತವಾಗಿ ಘೋಷಿಸಿದೆ.

ನಗರದ ಎಂ.ಜಿ.ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಗುರುವಾರ ನಡೆದ ತಂಡದ ಪರಿಚಯ ಹಾಗೂ ತಂಡದ ಗೀತೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ತಂಡದ ನೂತನ ನಾಯಕನ ಹೆಸರನ್ನು ಘೋಷಣೆ ಮಾಡಿದರಲ್ಲದೆ ಮೈಸೂರಿನ ಎಲ್ಲಾ ಕ್ರಿಕೆಟ್ ಕ್ಲಬ್‌ಗಳು, ಮೈಸೂರಿಗರು ಹಾಗೂ ಕ್ರಿಕೆಟ್ ಅಭಿಮಾನಿಗಳು ಮೈದಾನಕ್ಕೆ ಬಂದು ಕ್ರಿಕೆಟ್ ವೀಕ್ಷಣೆ ಮಾಡುವ ಮೂಲಕ ಸಪೋರ್ಟ್ ಮಾಡುವಂತೆ ಮನವಿ ಮಾಡಿದರು.

ಇತ್ತೀಚೆಗೆ ಮುಕ್ತಾಯಗೊಂಡ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನಲ್ಲಿ ಪಂಜಾಬ್ ಕಿಂಗ್ಸ್ ಪರ ಆಡಿದ್ದ ವೇಗಿ ವೈಶಾಕ್ ವಿಜಯ್ ಕುಮಾರ್, ಈ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪರವಾಗಿಯೂ ಆಡಿದ್ದಾರೆ. ಅಲ್ಲದೆ 2024ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ಟಿ20 ಸರಣಿಯಲ್ಲಿಯೂ ಸ್ಥಾನ ಪಡೆದಿದ್ದ ವೈಶಾಕ್, 2014ರಲ್ಲಿ ಕರ್ನಾಟಕ ಪ್ರೀಮಿಯರ್ ಲೀಗ್(ಕೆಪಿಎಲ್) ಸಮಯದಲ್ಲಿ ಮೈಸೂರು ವಾರಿಯರ್ಸ್‌ನೊಂದಿಗೆ ಪಾದಾರ್ಪಣೆ ಮಾಡಿದ್ದರು.

ವೇಗಿ ವೈಶಾಕ್ ವಿಜಯ್ ಕುಮಾರ್ ನಾಯಕತ್ವದ ಮೈಸೂರು ವಾರಿಯರ್ಸ್ ತಂಡದಲ್ಲಿ ಅನುಭವಿ ಆಟಗಾರರ ಜೊತೆಗೆ ಉದಯೋನ್ಮುಖ ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ. ಪಂದ್ಯಾವಳಿಯ ನಡುವೆ ಅಂತಾರಾಷ್ಟ್ರೀಯ ಕ್ರಿಕೆಟರ್ ದೇವದತ್ ಪಡಿಕ್ಕಲ್ ತಂಡಕ್ಕೆ ಸೇರ್ಪಡೆಯಾಗಲಿದ್ದು, ಆಕ್ರಮಣಕಾರಿ ಆಲ್‌ರೌಂಡರ್ ಮನೋಜ್ ಭಾಂಡಗೆ, ಎಲ್.ಆರ್.ಚೇತನ್ ಮತ್ತು ರಿತೇಶ್ ಭಟ್ಕಳ್ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಇದಕ್ಕೂ ಮುನ್ನ ಮೈಸೂರು ವಾರಿಯರ್ಸ್ ತಂಡದ ಗೀತೆಯನ್ನು ಉದ್ಘಾಟಿಸಿದ 'ಮೈಸೂರು ಎಕ್ಸ್‌ಪ್ರೆಸ್' ಎಂದೇ ಖ್ಯಾತರಾದ ಭಾರತ ಕ್ರಿಕೆಟ್ ತಂಡದ ಮಾಜಿ ವೇಗದ ಬೌಲರ್ ಹಾಗೂ ಐಸಿಸಿ ಮ್ಯಾಚ್ ರೆಫರಿ ಜಾವಗಲ್ ಶ್ರೀನಾಥ್ ಮಾತನಾಡಿ, ಮೈಸೂರು ವಾರಿಯರ್ಸ್ ತಂಡಕ್ಕೆ ಶುಭ ಕೋರುತ್ತಲೇ ಕರ್ನಾಟಕಕ್ಕೆ ವಾಪಸ್ ತಂದು ಕ್ರಿಕೆಟ್ ನಡೆಯುವಂತೆ ಮಾಡಿರುವುದರಿಂದ ಬಹಳ ಸಂತೋಷವಾಗಿದೆ. ಕ್ರಿಕೆಟ್ ಬೆಳೆಯಲು ಅಕಾಡೆಮಿಗಳ ಶ್ರಮದಿಂದ ಸಾಲು ಪ್ರತಿಯೊಬ್ಬರು ತಮ್ಮ ವೈಯಕ್ತಿಕ ಕೊಡುಗೆಯನ್ನು ನೀಡಬೇಕು. ಈ ನಿಟ್ಟಿನಲ್ಲಿ ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ರಿಕೆಟ್ ಸದಾ ಸ್ವಚ್ಛ ಮತ್ತು ಸರಿಯಾದ ಮಾರ್ಗದಲ್ಲಿ ನಡೆಯಬೇಕು ಎಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಆದ್ದರಿಂದ ಕ್ರಿಕೆಟರ್‌ಗಳು ಹೆಗಿರಬೇಕು. ಯಾರೊಂದಿಗೆ ಬೆರೆಯಬೇಕು ಎನ್ನುವುದನ್ನು ಅರಿತುಕೊಳ್ಳಬೇಕು. ಟಿವಿ ಚಾನಲ್ ಕ್ಯಾಮರಾ ಇದೆ ಎಂದು ಅತಿರೇಕವಾಗಿ ವರ್ತಿಸದೆ ತಮ್ಮೊಳಗಿನ ಪ್ರತಿಭೆಯನ್ನು ಮಾತ್ರ ಪ್ರದರ್ಶಿಸಬೇಕು ಎಂದು ಯುವ ಕ್ರಿಕೆಟರ್‌ಗಳಿಗೆ ಕಿವಿಮಾತು ಹೇಳಿದರು.

ಐಪಿಎಲ್ ನಿಯಮಾವಳಿ: ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿಯು ಐಪಿಎಲ್ ಮಾದರಿಯಲ್ಲಿ ನಡೆಯಲಿದ್ದು, ಐಪಿಎಲ್ ನಿಯಮಾವಳಿಗಳನ್ನು ಪಾಲಿಸಲಾಗುವುದು. ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಲಿದ್ದು, ಆಟಗಾರರಿಗೆ ಅನ್ಯಾಯವಾಗದಂತೆ ಗಮನ ಹರಿಸಲಾಗುವುದು. ಹಾಗೆಯೇ ಟಿ20 ಮಾತ್ರವಲ್ಲದೆ ಎಲ್ಲಾ ಬಗೆಯ ಫಾರ್ಮೆಟ್‌ಗಳಲ್ಲಿಯೂ ಉತ್ತಮ ಪ್ರದರ್ಶನ ನೀಡುವ ಮಟ್ಟಕ್ಕೆ ಬೆಳೆಯಬೇಕು. ಒಂದು ಕವರ್‌ಡ್ರೈವ್ ಬಾರಿಸುವುದನ್ನು ಉತ್ತಮವಾಗಿ ಕಲಿಯಲು 10 ಸಾವಿರ ಸಲ ಪ್ರಾಕ್ಟೀಸ್ ಮಾಡಬೇಕಾಗುತ್ತದೆ. ಹಾಗೆಯೇ ಪ್ರತಿಭೆಗಳು ಇಂತಹದ್ದೆ ನಗರದಲ್ಲಿ ಹುಟ್ಟುತ್ತವೆ ಎಂಬುದಿಲ್ಲ ಎಂದರು.

ಮೈಸೂರಲ್ಲಿ ಕ್ರಿಕೆಟ್‌ಗೆ ಆದ್ಯತೆ: ಮೈಸೂರಿನಲ್ಲಿ ಕ್ರಿಕೆಟ್‌ಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಜನಪ್ರಿಯಗೊಳ್ಳಲಿದೆ. ಕೆಎಸ್‌ಸಿಎ ಮೈಸೂರು ಜೋನ್ ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಿರುವ ಸ್ಟೇಡಿಯಂ ಸೇರಿದಂತೆ ನಾಲ್ಕು ಕ್ರಿಕೆಟ್ ಮೈದಾನಗಳಲ್ಲಿ ಸ್ಥಳೀಯ ಮಟ್ಟದ ಪಂದ್ಯಾವಳಿಗಳನ್ನು ಆಯೋಜನೆ ಮಾಡುತ್ತಿರುವುದು ಅಭಿನಂದನಾರ್ಹ ಎಂದು ಶ್ಲಾಘಿಸಿದರು. ಕೆಎಸ್‌ಸಿಎ ಮೈಸೂರು ಜೋನ್ ಸಂಚಾಲಕ ಶ್ರೀನಿವಾಸ್ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಗುರುವಾರ ಮೈಸೂರು ವಾರಿಯರ್ಸ್ ತಂಡದ ಪರಿಚಯ ಹಾಗೂ ತಂಡದ ಗೀತೆ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಭಾರತದ ಮಾಜಿ ವೇಗಿ ಮತ್ತು ಐಸಿಸಿ ಮ್ಯಾಚ್ ರೆಫರಿ ಜಾವಗಲ್ ಶ್ರೀನಾಥ್, ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, ಕೆಎಸ್‌ಸಿಎ ಮೈಸೂರು ವಲಯ ಸಂಚಾಲಕ ಪಿ.ಶ್ರೀನಿವಾಸ್ ಪ್ರಸಾದ್, ಮೈಸೂರು ವಾರಿಯರ್ಸ್ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತೀಸ್ ಎಂಡಿ ಅರ್ಜುನ್ ರಂಗ, ಮುಖ್ಯ ಕೋಚ್ ಆರ್‌ಎಕ್ಸ್ ಮುರಳೀಧರ್, ಸಹಾಯಕ ಕೋಚ್ ವಿಜಯ್ ಮಾಡ್ಯಾಳ್ಕರ್, ಬೌಲಿಂಗ್ ಕೋಚ್ ಆದಿತ್ಯ ಬಿ. ಸಾಗರ್, ನಾಯಕ ವೈಶಾಕ್ ವಿಜಯ್‌ಕುಮಾರ್ ಮತ್ತಿತರರಿದ್ದರು.

ಮೈಸೂರು ವಾರಿಯರ್ಸ್ ತಂಡ...

ವೈಶಾಕ್ ವಿಜಯ್ ಕುಮಾರ್(ನಾಯಕ), ಅರಬಿಂದ್ ಕುಮಾರ್ ರೈ, ರೋಹನ್ ಆರ್ ರೇವಣಕರ್, ಅಭಿಷೇಕ್ ಪ್ರಭಾಕರ್, ಯುವರಾಜ್ ಅರೋರಾ, ಲಿಖಿತ್ ಬನ್ನೂರು, ದೀಪಕ್ ದೇವಾಡಿಗ, ಸಂಜಯ್ ಅಶ್ವಿನ್ ಸಿ, ಲಂಕೇಶ್ ಕೆ ಎಸ್, ಗೌತಮ್ ಸಾಗರ್, ವಿಶಾಲ್ ಒನ್ನತ್, ಮಾಧವ್ ಪ್ರಕಾಶ್ ಬಜಾಜ್, ಮೋನಿಶ್ ರೆಡ್ಡಿ, ಕಾರ್ತಿಕ್ ಎಸ್ ಯು, ಕಾರ್ತಿಕೇಯ ಕೆ ಪಿ, ಲವಿಶ್ ಕೌಶಲ್, ರಿತೇಶ್ ಭಟ್ಕಳ್, ಚೇತನ್ ಎಲ್ ಆರ್, ಮನೋಜ್ ಭಾಂಡಗೆ, ದೇವದತ್ ಪಡಿಕಲ್ ಹಾಗೂ ಆರ್‌ಎಕ್ಸ್ ಮುರಳೀಧರ್.ಆರ್(ಮುಖ್ಯ ತರಬೇತುದಾರ), ವಿಜಯ್ ಮಡ್ಯಾಳ್ಕರ್(ಸಹಾಯಕ ತರಬೇತುದಾರ), ಆದಿತ್ಯ ಸಾಗರ್(ಬೌಲಿಂಗ್ ತರಬೇತುದಾರ), ಸುರೇಶ್ ಎಂ.ಆರ್.(ತಂಡದ ವ್ಯವಸ್ಥಾಪಕ).



ಭಾರತ ಕ್ರಿಕೆಟ್ ತಂಡದ ಮಾಜಿ ವೇಗದ ಬೌಲರ್ ಹಾಗೂ ಹಿರಿಯ ರಾದ ಜಾವಗಲ್ ಶ್ರೀನಾಥ್ ಅವರನ್ನು ನೋಡುತ್ತಾ ಬೆಳೆದಿದ್ದೇವೆ. ಅವರಂತೆ ಸ್ಥಿರ ಪ್ರದರ್ಶನ ನೀಡಲು ಪ್ರಯತ್ನ ಮಾಡುತ್ತೇವೆ. ವಿಶ್ವಾಸವಿಟ್ಟು ಮೈಸೂರು ವಾರಿಯರ್ಸ್ ತಂಡದ ನಾಯಕನನ್ನಾಗಿ ಆಯ್ಕೆ ಮಾಡಿರುವುದಕ್ಕೆ ಧನ್ಯವಾದಗಳು. ಎಲ್ಲಾ ವಿಭಾಗದಲ್ಲಿಯೂ ತಂಡ ಬಲಿಷ್ಠವಾಗಿದ್ದು, ಟ್ರೋಫಿ ಗೆಲ್ಲುವ ವಿಶ್ವಾಸವಿದೆ

– ವೈಶಾಕ್ ವಿಜಯ್ ಕುಮಾರ್, ಮೈಸೂರು ವಾರಿಯರ್ಸ್ ತಂಡದ ನಾಯಕ

ಮೈಸೂರು ಕ್ರಿಕೆಟ್ ಹಬ್...

ಕ್ರಿಕೆಟ್ ಅನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಕೆಎಸ್‌ಸಿಎ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿರುವ ಆರು ಜೋನ್‌ಗಳಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳಾಗಲಿವೆ. ವಿವಿಧ ವಯೋಮಾನದ ಆಧಾರದಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸುವ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗುವುದು. ಹಾಗೆಯೇ ಮೈಸೂರು ಕ್ರಿಕೆಟ್ ಹಬ್ ಆಗಿದ್ದು, ರಾಜ್ಯ ಮತ್ತು ರಾಷ್ಟ್ರೀಯ ತಂಡಕ್ಕೆ ಶ್ರೇಷ್ಠ ಆಟಗಾರರನ್ನು ನೀಡಿದೆ.

- ಸಂತೋಷ್ ಮೆನನ್, ಕಾರ್ಯದರ್ಶಿ, ಕೆಎಸ್‌ಸಿಎ

ಜೂ.20ರಿಂದ ಆರಂಭ...

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದಲ್ಲಿರುವ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದಲ್ಲಿ ಜೂ.20 ರಂದು ಮಧ್ಯಾಹ್ನ 2.30ಕ್ಕೆ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ 5ನೇ ಆವೃತ್ತಿಯ ಉದ್ಘಾಟನಾ ಪಂದ್ಯ ನಡೆಯಲಿದೆ. ಉದ್ಘಾಟನಾ ಕಾರ್ಯಕ್ರಮದ ಬಳಿಕ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ನಡುವೆ ಮೊದಲ ಪಂದ್ಯ ನಡೆದರೆ, ಸಂಜೆ 7.30ಕ್ಕೆ ಶಿವಮೊಗ್ಗ ಯೋಧಾಸ್ ಮತ್ತು ಮೈಸೂರು ವಾರಿಯರ್ಸ್ ನಡುವೆ ಪಂದ್ಯ ನಡೆಯಲಿದೆ. ಡಿಸ್ಟ್ರಿಕ್ಟ್ ಬೈ ಜೊಮ್ಯಾಟೋ ಆ್ಯಪ್‌ನಲ್ಲಿ ಪಂದ್ಯಗಳ ಟಿಕೆಟ್ ಲಭ್ಯವಿರಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಕಲಾಸಿ ಪಾಳ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಬಾಲನ್ (ತ+ಮ)	2+2 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಜಾರ್ಖಂಡ್ ರಾಜ್ಯಸಭಾ ಚುನಾವಣೆಯ ಫಲಿತಾಂಶ

ಎನ್‌ಡಿಎ ಬೆಂಬಲಿತ ಅಭ್ಯರ್ಥಿ ಗೆಲುವು!



ರಾಂಚಿ, ಜೂ.18– ಜಾರ್ಖಂಡ್‌ನಲ್ಲಿ ಇಂಡಿಯಾ ಒಕ್ಕೂಟದ ಆಡಳಿತವಿದ್ದರೂ ರಾಜ್ಯಸಭಾ ಚುನಾವಣೆಯಲ್ಲಿ NDA ಬೆಂಬಲಿತ ಅಭ್ಯರ್ಥಿ ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ಗೆ ಭಾರಿ ಹೊಡೆತ ಬಿದ್ದಿದೆ.

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಇಂಡಿಯಾ ಮೈತ್ರಿಕೂಟದ ಸದಸ್ಯರ ಸಂಖ್ಯೆ ಹೆಚ್ಚಿದ್ದರೂ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಳ್ ನಾಥ್‌ವಾನಿ ಗೆಲುವು ಸಾಧಿಸಿದ್ದಾರೆ.

ಇದು ಆಡಳಿತಾರೂಢ ಮೈತ್ರಿಕೂಟದಲ್ಲಿ ಅಡ್ಡಮತದಾನದ ಬಗ್ಗೆ ಊಹಾಪೋಹಗಳಿಗೆ ಕಾರಣವಾಗಿದೆ. ಹೇಮಂತ್ ಸೋರೆನ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಒಗ್ಗಟ್ಟಿನ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಅಭ್ಯರ್ಥಿ ಬೈದ್ಯನಾಥ್ ರಾಮ್ ಕೂಡ ಒಂದು ಸ್ಥಾನವನ್ನು ಗೆದ್ದರೆ, ಕಾಂಗ್ರೆಸ್ ಅಭ್ಯರ್ಥಿಯ ಸೋಲು ವಿರೋಧ ಪಕ್ಷಗಳ ಮೈತ್ರಿಕೂಟದ ಆಡಳಿತವಿರುವ ರಾಜ್ಯದಲ್ಲಿ NDAಯ ಪ್ರಗತಿಯನ್ನು ಸೂಚಿಸುತ್ತದೆ.

ಜಾರ್ಖಂಡ್‌ನಲ್ಲಿ ಎರಡು ಸ್ಥಾನಗಳಿಗೆ ರಾಜ್ಯಸಭಾ ಚುನಾವಣೆ ನಡೆಯಿತು. ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಳ್ ನಾಥ್‌ವಾನಿ 28 ಮತಗಳೊಂದಿಗೆ ಗೆಲುವು ಸಾಧಿಸಿದರು. ಜೆಎಂಎಂ ಅಭ್ಯರ್ಥಿ ಬೈದ್ಯನಾಥ್ ರಾಮ್ 31 ಮತಗಳೊಂದಿಗೆ ಗೆಲುವು ಸಾಧಿಸಿದರು. ಆದರೆ ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಝಾ 19 ಮತಗಳನ್ನು ಪಡೆದು ಸೋತರು. ಮೂರು ಮತಗಳನ್ನು ಅಮಾನ್ಯವೆಂದು ಘೋಷಿಸಲಾಯಿತು.

ಈ ಫಲಿತಾಂಶವನ್ನು JMM ನೇತೃತ್ವದ ಮತ್ತು ಕಾಂಗ್ರೆಸ್, RJD ಮತ್ತಿತರ ಪಕ್ಷಗಳ ಬೆಂಬಲದೊಂದಿಗೆ ಆಡಳಿತ ನಡೆಸುತ್ತಿರುವ INDIA ಬಣಕ್ಕೆ ಹಿನ್ನಡೆ ಎಂದು ಪರಿಗಣಿಸಲಾಗುತ್ತಿದೆ. ಈ ಫಲಿತಾಂಶವು ಆಡಳಿತ ಮೈತ್ರಿಕೂಟದ ಸ್ಥಿರತೆಗೆ ವ್ಯಾಪಕ ಪರಿಣಾಮಗಳನ್ನು ಬೀರಬಹುದು ಎಂದು ರಾಜಕೀಯ ವೀಕ್ಷಕರ ಅಭಿಪ್ರಾಯವಾಗಿದೆ.

ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜೆ

ಲಲಿತ ಮಹಲ್ ಮೈದಾನದಲ್ಲೇ ಭಕ್ತರ ವಾಹನ ನಿಲುಗಡೆ; ಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆ

ಮೈಸೂರು, ಜೂ.18(ಎಂಟಿವೈ)– ಪ್ರಸಕ್ತ ಸಾಲಿನ ಆಷಾಢ ಮಾಸದಲ್ಲಿ ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನಗಳಲ್ಲಿ ಬರುವ ಭಕ್ತರ ವಾಹನ ನಿಲುಗಡೆ ಹಾಗೂ ಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆಗೆ ಲಲಿತಮಹಲ್ ಪ್ಯಾಲೆಸ್ ಮೈದಾನವನ್ನು ಬಳಸಿಕೊಳ್ಳಲು ಜಿಲ್ಲಾಡಳಿತ ನಿರ್ಧರಿಸಿದೆ.

ಆಷಾಢ ಮಾಸದ ಶುಕ್ರವಾರದ ಪೂಜಾ ಮಹೋತ್ಸವಕ್ಕೆ ವಿವಿಧೆಡೆಯಿಂದ ಖಾಸಗಿ ವಾಹನಗಳಲ್ಲಿ ಬರುವ ಭಕ್ತರು ಹಾಗೂ ಪ್ರವಾಸಿಗರನ್ನು ಉಚಿತ ಬಸ್‌ಗಳಲ್ಲಿ ಕರೆದೊಯ್ಯಲು ಕಳೆದ ಐದು ವರ್ಷದಿಂದ ಲಲಿತಮಹಲ್ ಪ್ಯಾಲೆಸ್ ಮೈದಾನವನ್ನು ಬಳಸಿಕೊಳ್ಳಲಾಗುತ್ತಿತ್ತು. ಆದರೆ, ರಾಜವಂಶಸ್ಥರು ಎರಡು ತಿಂಗಳ ಹಿಂದಷ್ಟೇ ಲಲಿತಮಹಲ್ ಪ್ಯಾಲೆಸ್ ಮೈದಾನಕ್ಕೆ ಬೇಲಿ ಹಾಕಿ ತಮ್ಮ ಸುಪರ್ದಿಗೆ ಪಡೆದಿದ್ದರು. ಇದರಿಂದ ಈ ಸಾಲಿನ ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವಕ್ಕೆ ಬರುವ ಭಕ್ತರ ವಾಹನ ನಿಲುಗಡೆ ಮತ್ತು ಬೆಟ್ಟಕ್ಕೆ ಉಚಿತ ಬಸ್‌ಗಳ ವ್ಯವಸ್ಥೆಗೆ ಸ್ಥಳಾವಕಾಶ ಕೊರತೆ ಉಂಟಾಗಿತ್ತು. ಅಲ್ಲದೆ, ಜಿಲ್ಲಾಡಳಿತ ಹೊಸ ಸ್ಥಳ ಹುಡುಕುತ್ತಿರುವುದಾಗಿ ತಿಳಿದು ಬಂದಿತ್ತು. ಆದರೆ, ಇದೀಗ ಕಳೆದ ವರ್ಷದಂತೆ ಈ ಹಿಂದೆ ಇದ್ದ ಲಲಿತಮಹಲ್ ಪ್ಯಾಲೆಸ್ ಮೈದಾನದಿಂದಲೇ ಭಕ್ತರ ಖಾಸಗಿ ವಾಹನ ನಿಲುಗಡೆ ಮತ್ತು ಉಚಿತ ಬಸ್ ವ್ಯವಸ್ಥೆ ಕಲ್ಪಿಸಲು ಜಿಲ್ಲಾಡಳಿತ ನಿರ್ಧರಿಸಿದೆ ಎಂದು ಹೇಳಲಾಗಿದೆ.

ಲಕ್ಷಾಂತರ ಭಕ್ತರು, ಸಾವಿರಾರು ವಾಹನ ಗಳಲ್ಲಿ ಆಗಮಿಸುವುದರಿಂದ ಮೈಸೂರು ನಗರದೊಳಗೆ ಪ್ರವೇಶಿಸುವುದರಿಂದ ಟ್ರಾಫಿಕ್ ಜಾಮ್ ಉಂಟಾಗುವ ಸಾಧ್ಯತೆ ಇದೆ. ಇದನ್ನು ಮನಗಂಡು ಇದೀಗ ಲಲಿತಮಹಲ್ ಪ್ಯಾಲೆಸ್ ಮೈದಾನವನ್ನೇ ಬಳಸಿಕೊಳ್ಳಲು ಸಮ್ಮತಿಸಲಾಗಿದೆ. ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವ ಸಿದ್ಧತೆಗೆ ಸಂಬಂಧಿಸಿದ ಕಳೆದ ವಾರ ನಡೆದ ಪೂರ್ವಾಭಾವಿ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಕಳೆದ ವರ್ಷದಂತೆ ಲಲಿತಮಹಲ್ ಪ್ಯಾಲೆಸ್ ಮೈದಾನವನ್ನೇ ಈ ಬಾರಿಯೂ ಆಷಾಢ ಮಾಸದ ಶುಕ್ರವಾರದ ಪೂಜಾ ಮಹೋ ತ್ಸವಕ್ಕೆ ಭಕ್ತರನ್ನು ಉಚಿತ ಬಸ್‌ನಲ್ಲಿ ಕರೆದೊಯ್ಯಲು ಬಳಸಿಕೊಳ್ಳುವಂತೆ ಸೂಚಿಸಿದ್ದಾರೆ. ಲಲಿತಮಹಲ್ ಪ್ಯಾಲೆಸ್ ಮೈದಾನವನ್ನು ಹೊರತುಪಡಿಸಿದರೆ ಬೇರೆ ಯಾವ ಸ್ಥಳವೂ ಸೂಕ್ತವಲ್ಲದ ಕಾರಣ ಸದರಿ ಮೈದಾನ ಬಳಸಿಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ.


ಎಂಡಿಎ ಅಧೀನದಲ್ಲಿದೆ: ಲಲಿತ ಮಹಲ್ ಪ್ಯಾಲೆಸ್ ಮೈದಾನಕ್ಕೆ ರಾಜವಂಶಸ್ಥರು ಬೇಲಿ ಹಾಕಿಕೊಂಡಿದ್ದರೂ, ಅದರ ಮಾಲೀಕತ್ವ ಇನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದೆ. ಈ ಹಿಂದೆ ಲಲಿತಮಹಲ್ ಮೈದಾನವನ್ನು ಮುಡಾ ಮೈದಾನವೆಂದೇ ಕರೆಯಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಮೈದಾನದ ಮಾಲೀಕತ್ವದ ವಿವಾದ ಇನ್ನು ಬಗೆಹರಿಯದ ಕಾರಣ ಹಾಗೂ ಸಾರ್ವಜನಿಕರ ಹಿತಾಸಕ್ತಿ ಯಿಂದ ಈ ಮೈದಾನ ಬಳಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇರುವುದರಿಂದ ಲಲಿತ ಮಹಲ್ ಮೈದಾನವನ್ನು ಬಳಸಿಕೊಳ್ಳುವಂತೆ ಡಿಸಿ, ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ಆಷಾಢ ಪೂಜೆ: ಈ ವರ್ಷದ ಆಷಾಢ ಮಾಸದ ಪೂಜೆ ಜು.14ರ ಮಣ್ಣೆತ್ತಿನ ಅಮಾವಾಸ್ಯೆಯ ದಿನದಂದು ಆರಂಭ ವಾಗಲಿದ್ದು, ಚಾಮುಂಡಿ ಬೆಟ್ಟದಲ್ಲಿ ಆಷಾಢ ಮಾಸದ ಮೊದಲ ಶುಕ್ರವಾರ ಜು.17, ಎರಡನೆ ಶುಕ್ರವಾರ ಜು.24, ಮೂರನೇ ಶುಕ್ರವಾರ ಜು.31, ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವ ಆ.4 ಹಾಗೂ ಕೊನೆ ಶುಕ್ರವಾರ ಆ.7ರಂದು ಕೊನೆ ಶುಕ್ರ ವಾರದ ಪೂಜಾ ಮಹೋತ್ಸವ ಜರುಗ ಲಿದೆ. ಅದಕ್ಕಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸಿದ್ಧತೆ ಆರಂಭಿಸಿದೆ.



ಈ ಬಾರಿ 300 ರೂ. ದರದ ಟಿಕೆಟ್ ಇಲ್ಲ


ಆಷಾಢ ಮಾಸದ ನಾಲ್ಕು ಶುಕ್ರವಾರ ಹಾಗೂ ವರ್ಧಂತಿ ದಿನ ಚಾಮುಂಡಿ ಬೆಟ್ಟದ ದೇವಾಲಯಕ್ಕೆ ವಿಶೇಷ ಪ್ರವೇಶ ಪಡೆಯಲು ಈ ಬಾರಿ 2 ಸಾವಿರ ರೂ. ಟಿಕೆಟ್ ಹೊರತುಪಡಿಸಿ, ಬೇರೆ ಯಾವ ಟಿಕೆಟ್ ನೀಡಬಾರದೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಧರ್ಮದರ್ಶನ ಹಾಗೂ 2 ಸಾವಿರ ರೂ. ಟಿಕೆಟ್ ಪಡೆದವರಿಗೆ ಪ್ರತ್ಯೇಕ ಸಾಲು ವ್ಯವಸ್ಥೆ ಮಾಡಬೇಕು. ಕಳೆದ ಬಾರಿ ಇದ್ದ 300 ರೂ. ದರದ ಟಿಕೆಟ್ ರದ್ದು ಮಾಡಬೇಕೆಂಬ ಸಲಹೆ ವ್ಯಕ್ತವಾಗಿರುವುದಾಗಿ ತಿಳಿದು ಬಂದಿದೆ.



ಆಷಾಢ ಮಾಸದ ಶುಕ್ರವಾರದ ಪೂಜಾ ಮಹೋತ್ಸವಕ್ಕೆ ಖಾಸಗಿ ವಾಹನಗಳಲ್ಲಿ ಬರುವ ಭಕ್ತರ ವಾಹನ ನಿಲುಗಡೆ ಹಾಗೂ ಉಚಿತ ಬಸ್ ವ್ಯವಸ್ಥೆ ಮಾಡಲು ಲಲಿತಮಹಲ್ ಪ್ಯಾಲೆಸ್ ಮೈದಾನವನ್ನೇ ಬಳಸಲು ನಿರ್ಧರಿಸಲಾಗಿದೆ.

– ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು

ಪ್ರಮೋದಾದೇವಿ ಒಡೆಯರ್ ಸ್ಪಷ್ಟನೆ



ಮೈಸೂರು: ಆಷಾಢ ಮಾಸದಲ್ಲಿ ವಾಹನಗಳ ನಿಲುಗಡೆಗೆ ಸದರಿ ಭೂಮಿ ಬಳಸಿಕೊಳ್ಳಲು ಅನುಮತಿಗಾಗಿ ಜಿಲ್ಲಾಡಳಿತ ನನ್ನನ್ನು ಇದುವರೆಗೂ ಸಂಪರ್ಕಿಸಿಲ್ಲ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ತಾಲೂಕಿನ ಕಸಬಾ ಹೋಬಳಿಯ ಕುರುಬಾರಹಳ್ಳಿ ಗ್ರಾಮದ ಸರ್ವೇ ನಂ.4ರ ಸಂಪೂರ್ಣ ಭೂಮಿ ಮೈಸೂರು ರಾಜವಂಶಸ್ಥರ ಖಾಸಗಿ ಆಸ್ತಿಯಾಗಿದೆ ಎಂದು ಕರ್ನಾಟಕ ಹೈಕೋರ್ಟ್ (ರಿಟ್ ಪಿಟಿಷನ್ ಸಂಖ್ಯೆ 25592/2015) ತೀರ್ಪು ನೀಡಿದೆ.

ಹಾಗಾಗಿ ಈ ಭೂಮಿಯನ್ನು 'ಲಲಿತ ಮಹಲ್ ಮೈದಾನ' ಅಥವಾ 'ಮುಡಾ ಮೈದಾನ' ಎಂದು ಕರೆಯಲಾಗದು. ಅಲ್ಲದೆ, ಈ ರೀತಿ ಕರೆಯುವುದು ಸಾರ್ವಜನಿಕರನ್ನು ದಾರಿತಪ್ಪಿಸುವಂತದ್ದು. ಸದರಿ ಸರ್ವೇ ಸಂಖ್ಯೆಯ ಭೂಮಿಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಎಂಡಿಎ) ಸೇರಿದ್ದು ಎಂದು ಹೇಳುವುದು ಸರಿಯಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ವೈನ್ ಸ್ಟೋರ್‌ಗಳಲ್ಲಿ ಅಕ್ರಮ ಮದ್ಯ ಸೇವನೆಗಿಲ್ಲ ಯಾವ ಅಡ್ಡಿ–ಆತಂಕ!

'ಮೈಸೂರು ಮಿತ್ರ' ರಿಯಾಲಿಟಿ ಚೆಕ್‌ನಲ್ಲಿ ಅಕ್ರಮ ಬಯಲು

●ವೈನ್ಸ್ ಸ್ಟೋರ್‌ನವರಿಗೆ ಸಣ್ಣ ಅಂಜಿಕೆಯೂ ಇಲ್ಲ

●ಅಬಕಾರಿ ಇಲಾಖೆಯವರಿಗೆ ಇತ್ತ ಗಮನವೇ ಇಲ್ಲ

●ಸಚಿವ ಯತೀಂದ್ರ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲವೇ?

ಮೈಸೂರು, ಜೂ.18(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಅಗ್ನಿ ಅವಘಡ ಪ್ರಕರಣದ ನಂತರ ಅಕ್ರಮ ಮದ್ಯ ಪೂರೈಕೆ, ಸೇವನೆಗೆ ಕಡಿವಾಣ ಹಾಕಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅಬ್ಬರಿಸಿ ಬೊಬ್ಬರಿದಿದ್ದರು. ಆದರೆ 'ಮೈಸೂರು ಮಿತ್ರ' ಇಂದು ನಡೆಸಿದ ರಿಯಾಲಿಟಿ ಚೆಕ್‌ನಲ್ಲಿ ನಗರದ ಬಹುತೇಕ ವೈನ್‌ಸ್ಟೋರ್‌ಗಳಲ್ಲಿ ಮದ್ಯ ಮುಕ್ತವಾಗಿಯೇ ಮದ್ಯ ಸೇವಿಸಿ ನಶೆಯಲ್ಲಿ ತೇಲಾಡುತ್ತಿದ್ದರು.

ಅಬಕಾರಿ ಇಲಾಖೆಯ ಸಿಎಲ್ 2 ಲೈಸೆನ್ಸ್ ಹೊಂದಿರುವ ವೈನ್ ಸ್ಟೋರ್‌ಗಳಲ್ಲಿ ಪ್ಯಾಕ್ ಮಾಡಿರುವ ಮದ್ಯ ಮಾತ್ರ ಮಾರಾಟ ಮಾಡಬೇಕು. ವೈನ್ ಸ್ಟೋರ್‌ನಲ್ಲಿ ಮದ್ಯ ಸೇವನೆಗೆ ಕಟ್ಟುನಿಟ್ಟಿನ ನಿರ್ಬಂಧವಿದೆ. ಆದರೆ ಮೈಸೂರು ನಗರದ ಎಲ್ಲಾ ವೈನ್ಸ್ ಸ್ಟೋರ್‌ಗಳಲ್ಲಿ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗುತ್ತಿದೆ.

ಅಕ್ರಮವಾಗಿ ಮದ್ಯ ಸೇವನೆ ಹಾಗೂ ಮದ್ಯ ಮಾರಾಟ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸ್ವತಃ ಸಚಿವರೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರೂ ವೈನ್ ಸ್ಟೋರ್‌ಗಳು ಕೇರ್ ಮಾಡುತ್ತಿಲ್ಲ. ವೈನ್‌ಸ್ಟೋರ್ ಪಕ್ಕದಲ್ಲಿರುವ ಮಳಿಗೆಯಲ್ಲೇ ಮದ್ಯಪ್ರಿಯರು ಮದ್ಯ ಸೇವನೆ ಮಾಡುತ್ತಿರುವುದು ಕಂಡು ಬಂದಿತು.

ಇಂತಹ ಅಕ್ರಮ ವ್ಯವಹಾರವನ್ನು ಕದ್ದು ಮುಚ್ಚಿ ಮಾಡುವ ಕನಿಷ್ಠ ಸಣ್ಣ ಭಯ ಕೂಡ ವೈನ್ ಸ್ಟೋರ್‌ನವರಿಗೆ ಇಲ್ಲ. ರಾಜಾರೋಷವಾಗಿಯೇ ಈ ವ್ಯವಹಾರ ನಡೆಸುತ್ತಿದ್ದಾರೆ.

ತಮ್ಮ ಕರ್ತವ್ಯ ಲೋಪದಿಂದ ಅಗ್ನಿ ಅವಘಡದಲ್ಲಿ ಇಬ್ಬರು ಸಾವನ್ನಪ್ಪಿರುವ ಪ್ರಕರಣದಿಂದ ಅಬಕಾರಿ ಇಲಾಖೆಯವರು ಪಾಠ ಕಲಿತಂತಿಲ್ಲ. ಸಚಿವರು ಸೂಚನೆ ನೀಡಿದ್ದರೂ ಅಕ್ರಮಗಳಿಗೆ ಕಡಿವಾಣ ಹಾಕುವ ಸಣ್ಣ ಪ್ರಯತ್ನ ಕೂಡ ಮಾಡುತ್ತಿಲ್ಲ.



ವೈನ್‌ಸ್ಟೋರ್‌ಗಳಲ್ಲಿ ಮದ್ಯ ಸೇವಿಸುತ್ತಿರುವುದು

ಅಬಕಾರಿ ಡಿಸಿ ನಾಟ್ ರೀಚಬಲ್

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು 'ಮೈಸೂರು ಮಿತ್ರ' ಅಬಕಾರಿ ಡಿಸಿ ನಾಗರಾಜಪ್ಪ ಅವರನ್ನು ಸಂಪರ್ಕಿಸಿದಾಗ ಅವರು "ನಾಟ್ ರೀಚಬಲ್" ಆಗಿದ್ದರು. ಅಗ್ನಿ ಅವಘಡ ಪ್ರಕರಣದಲ್ಲಿ ಅಮಾನತು ತೂಗುಗತ್ತಿಯ ಆತಂಕದಲ್ಲಿರುವ ನಾಗರಾಜಪ್ಪ ಅವರು ಫೋನ್ ಆಫ್ ಮಾಡಿಕೊಂಡಿದ್ದಾರೆ.

ಇಂದು ಬೆಳಿಗ್ಗೆ ಫೋನ್ ಮಾಡಿದಾಗ, ವೈನ್ ಸ್ಟೋರ್‌ಗಳಲ್ಲಿ ಮದ್ಯ ಸೇವನೆ ಬಗ್ಗೆ ಪ್ರಶ್ನೆ ಕೇಳುತ್ತಿದ್ದಂತೆ ಯಾವುದೇ ಪ್ರತಿಕ್ರಿಯೆ ನೀಡದೆ ಫೋನ್ ಸಂಪರ್ಕ ಕಡಿತಗೊಳಿಸಿದರು. ತರುವಾಯ ಅವರು ಸಂಪರ್ಕಕ್ಕೇ ಸಿಗಲಿಲ್ಲ.

ಮೈಸೂರು ನಗರದಲ್ಲಿ 400 ಮದ್ಯ ಮಾರಾಟ ಲೈಸೆನ್ಸ್

ಮೈಸೂರು ನಗರದಲ್ಲಿ ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್ ಸೇರಿದಂತೆ ಸುಮಾರು 400 ಮದ್ಯ ಮಾರಾಟ ಲೈಸೆನ್ಸ್‌ಗಳಿವೆ.

●ಸಿಎಲ್ 2 ಲೈಸೆನ್ಸ್ ಹೊಂದಿರುವ ವೈನ್ ಸ್ಟೋರ್	104
●ಸಿಎಲ್ 9 ಲೈಸೆನ್ಸ್ ಹೊಂದಿರುವ ಬಾರ್ ಅಂಡ್ ರೆಸ್ಟೋರೆಂಟ್	103
●ಸಿಎಲ್ 7 ಲೈಸೆನ್ಸ್ ಹೊಂದಿರುವ ಸ್ಟಾರ್ ಹೋಟೆಲ್ ಹಾಗೂ ಇತರೆ ಹೋಟೆಲ್‌ಗಳು	109
●ಎಂಎಸ್‌ಐಎಲ್ ಮಾರಾಟ ಮಳಿಗೆಗಳು	11
●ರಿಕ್ರಿಯೇಷನ್ ಕ್ಲಬ್‌ಗಳು	19

ಪರಿಶೀಲನೆಗೆ 4 ವಿಶೇಷ ತಂಡ ರಚನೆ; ವಾರದಲ್ಲಿ ವರದಿ ಸಲ್ಲಿಕೆಗೆ ಆದೇಶ

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ, ಅಕ್ರಮ ಮದ್ಯ ಸೇವನೆ ಸೇರಿದಂತೆ ಇತರೆ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ನಾಲ್ಕು ವಿಶೇಷ ತಂಡಗಳನ್ನು ರಚನೆ ಮಾಡಲಾಗುತ್ತಿದೆ.

ಮೈಸೂರು ನಗರದ ಎಲ್ಲಾ ಹೋಟೆಲ್, ರೆಸ್ಟೋರೆಂಟ್, ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಈ ತಂಡಗಳು ಪರಿಶೀಲನೆ ನಡೆಸಲಿವೆ.

ಪರಿಶೀಲನೆ ವೇಳೆ ಕಾನೂನುಬಾಹಿರ ಚಟುವಟಿಕೆ ಕಂಡು ಬಂದರೆ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುವ ಅಥವಾ ದಂಡ ವಿಧಿಸುವ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದ್ದೇನೆ. ನಗರ ಹಾಗೂ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಪರಿಶೀಲನೆ ನಡೆಸಿದ ನಂತರ ಸಮಗ್ರ ವರದಿ ನೀಡಬೇಕೆಂದು ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದ್ದೇನೆ.

ಆರ್.ವೆಂಕಟೇಶ್ ಕುಮಾರ್, ಆಯುಕ್ತರು, ಅಬಕಾರಿ ಇಲಾಖೆ, ಬೆಂಗಳೂರು.

ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವೃತ್ತದಿಂದ ಸಿದ್ಧಾರ್ಥನಗರ ಹಳೇ ಡೇರಿವರೆಗಿನ ರಸ್ತೆ ಅಧ್ವಾನ

ಕಾಮಗಾರಿ ವಿಳಂಬದಿಂದ ನಾಗರಿಕರಿಗೆ ನರಕಯಾತನೆ: ಮಾಜಿ ಮೇಯರ್ ಸಂದೇಶ್ ಸ್ವಾಮಿ ಪಾಲಿಕೆಗೆ ಪತ್ರ



ಮೈಸೂರು, ಜೂ.18– ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವೃತ್ತದಿಂದ ಮೈಮುಲ್ ಹಳೇ ಡೇರಿವರೆಗಿನ ರಸ್ತೆ ಅವ್ಯವಸ್ಥೆ ಬಗ್ಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರು–ಬನ್ನೂರು ಮುಖ್ಯ ರಸ್ತೆ(ರಾಜ್ಯ ಹೆದ್ದಾರಿ)ಯ ದೇವೇಗೌಡ ವೃತ್ತದಿಂದ ಸಿದ್ಧಾರ್ಥ ಲೇಔಟ್‌ನ ಹಳೆ ಮೈಮುಲ್ ಡೇರಿವರೆಗೆ ದ್ವಿಪಥ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಆದರೆ, ಅಲ್ಲಿಂದ ನಜರ್‌ಬಾದ್‌ನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವೃತ್ತದ ವರೆಗಿನ ಕಾಮಗಾರಿ ವಿಳಂಬದಿಂದಾಗಿ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ನಿತ್ಯ 10 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ದೊಡ್ಡ ಹೊಂಡಗಳು ನಿರ್ಮಾಣವಾಗಿವೆ ವಾಹನ ಸವಾರರು ಸಂಚಾರಕ್ಕೆ ಹರಸಾಹಸ ಪಡುವಂತಾಗಿದೆ. ನಿತ್ಯ ಸಣ್ಣ–ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇವೆ. ಮಳೆ ಬಂದಾಗ ಗುಂಡಿಗಳಲ್ಲಿ ನೀರು ತುಂಬಿ ಸಂಚಾರಕ್ಕೆ ತೀವ್ರ ಅಡ್ಡಿಯಾಗುತ್ತಿದೆ. ಪಾದಚಾರಿಗಳು ಇಲ್ಲಿ ಓಡಾಡುವುದಂತೂ ಅಪಾಯಕಾರಿ ಎನ್ನುವಂತಾಗಿದೆ. ಈ ಬಗ್ಗೆ ಹಲವು ಬಾರಿ ಸ್ಥಳೀಯ ಅಧಿಕಾರಿಗಳಿಗೆ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ.

ನಗರದ ಬಹುತೇಕ ಭಾಗಗಳಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಇದೇ ರಸ್ತೆಯಲ್ಲಿ ತೆರಳಬೇಕು. ಈ ರಸ್ತೆಯಲ್ಲಿ ಶಾಲಾ–ಕಾಲೇಜುಗಳು, ಆಸ್ಪತ್ರೆಗಳೂ ಇರುವುದರಿಂದ ಸದಾ ವಾಹನ ದಟ್ಟಣೆ ಇರುತ್ತದೆ. ರಸ್ತೆಯ ದುಃಸ್ಥಿತಿ ಬಗ್ಗೆ ಅರಿವಿದ್ದರೂ ಸ್ಥಳೀಯ ಶಾಸಕರು ತ್ವರಿತ ಕಾಮಗಾರಿಗೆ ಕ್ರಮ ವಹಿಸುವಲ್ಲಿ ನಿರ್ಲಕ್ಷ್ಯ ಧೋರಣೆ ತಳೆದಿದ್ದಾರೆ. ನಗರ ಪಾಲಿಕೆಯು ತುರ್ತಾಗಿ ಆದ್ಯತೆ ಮೇರೆಗೆ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ತಪ್ಪಿದ್ದಲ್ಲಿ ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ಪಾಲಿಕೆ ಆಯುಕ್ತರಾದ ತಾವೇ ಜವಾಬ್ದಾರರಾಗುತ್ತೀರಿ. ಅಲ್ಲದೆ, ರಸ್ತೆ ದುಃಸ್ಥಿತಿಯಿಂದ ಆಕ್ರೋಶಗೊಂಡಿರುವ ಸಾರ್ವಜನಿಕರು ಹಾಗೂ ಸ್ಥಳೀಯ ನಿವಾಸಿಗಳ ತೀವ್ರ ಪ್ರತಿಭಟನೆಯನ್ನೂ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಎನ್. ಡಿ. ಲಕ್ಷ್ಮೀಪತಿ ರವರ ಮಗ, ಶ್ರೀ. ಎನ್. ಎಲ್. ಪ್ರಸಾದ್. ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಶ್ರೀರಾಂಪುರ 2ನೇ ಹಂತ, ಮಧುವನ ಗೃಹ ನಿರ್ಮಾಣ ಸಹಕಾರ ಸಂಘ / ಎಸ್. ಬಿ. ಎಂ ನೌಕರರ ಗೃಹ ನಿರ್ಮಾಣ ಲಿ. ಕಾಲೋನಿ, 5ನೇ ಬ್ಲಾಕ್‌ನಲ್ಲಿರುವ ಖಾಲಿ ನಿವೇಶನ ಸಂಖ್ಯೆ 2. ಇ–ಖಾತೆ ಪ್ರಕಾರ ಸ್ವತ್ತಿನ ಸಂಖ್ಯೆ: 18–7–748–02, ವಾರ್ಡ್ ನಂ.18, ಹಳೆಯ & ಅಸೆಸ್ಮೆಂಟ್ ನಂ. 02 ಬ್ಲಾಕ್ 05, [ಎಸ್.ಎ.ಎಸ್ ಪ್ರಕಾರ ವಾರ್ಡ್ ನಂ. 64, ಪಿಐಡಿ ಸಂಖ್ಯೆ: 212324] ಇದರಲ್ಲಿರತಕ್ಕ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ: ಅಸ್ತಿ/ ನಿವೇಶನ ಸಂಖ್ಯೆ03. ಪಶ್ಚಿಮಕ್ಕೆ: ಆಸ್ತಿ/ನಿವೇಶನ ಸಂಖ್ಯೆ 01, ಉತ್ತರಕ್ಕೆ : ಆಸ್ತಿ/ನಿವೇಶನ ಸಂಖ್ಯೆ10 ಮತ್ತು ದಕ್ಷಿಣಕ್ಕೆ : ರಸ್ತೆ. ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟಿದ್ದು, ನಿವೇಶನದ ಅಳತೆ ಪೂರ್ವ: ಪಶ್ಚಿಮ: 9 ಮೀಟರ್ ಹಾಗೂ ಉತ್ತರ–ದಕ್ಷಿಣ: 12 ಮೀಟರ್ ನಿವೇಶನದ ಒಟ್ಟು ಅಳತೆ 108 ಚದರ ಮೀಟರ್‌ಗಳು.

ಸಹಿ/– ಕೆಂಪರಾಜು ಕೆ.ಆರ್
ವಕೀಲರು, KAR/1926/2018
ನಂ. 4, ಕಾಳಿಕಾಂಬ ದೇವಸ್ಥಾನದ ಎದುರು,
ಚಾಮರಾಜನಗರ, 571313. ಮೊ. 9742860260
email: kemparaju786@gmail.com

ಕರ್ನಾಟಕ – ಸರ್ಕಾರ
(ಧಾರ್ಮಿಕ ದತ್ತಿ ಇಲಾಖೆ)
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಎಸ್‌ಎಸ್‌ಟಿ/ಪಿಆರ್/ಗಿ.ಕ./09/2026–27 ದಿನಾಂಕ: 16–06–2026

2026ನೇ ಸಾಲಿನ ಶ್ರೀಯವರ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳ ವಿವರ:

1	ದಿ: 23–06–2026 ಮಂಗಳವಾರ	ರಾತ್ರಿ: 8.00 ಗಂಟೆಗೆ	ವರಪೂಜಾ ಮಹೋತ್ಸವ
2	ದಿ: 24–06–2026 ಬುಧವಾರ	ಸಂಜೆ: 05–00 ಗಂಟೆಗೆ	"ಕಾಶಿಯಾತ್ರಾ ಮಹೋತ್ಸವ" ಮತ್ತು ಸಂಜೆ 6.45 ರಿಂದ 7–15 ಗಂಟೆಯೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ "ಧಾರಾ ಮಹೋತ್ಸವ"
3	ದಿ: 28–06–2026 ಭಾನುವಾರ ದಿ: 29–06–2026 ಸೋಮವಾರ ದಿ: 30–06–2026 ಮಂಗಳವಾರ	ಸಂಜೆ: 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ದಿನಾಂಕ : 25–06–2026 ರಿಂದ 30–06–2026ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಭಕ್ತ ಮಹಾಶಯರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಯವರ ಕೃಪೆಗೆ ಪಾತ್ರರಾಗಲು ಕೋರಿದೆ.
ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸಹಿ/– ಸಿ.ಜೆ.ಕೃಷ್ಣ, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು.
ಸಹಿ/– ಆರ್. ಐಶ್ವರ್ಯ ಕ.ಆ.ಸೇ, ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಸಹಿ/– ಲಕ್ಷ್ಮೀಕಾಂತ ರೆಡ್ಡಿ, ಜಿ.ಭಾ.ಆ.ಸೇ, ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಸಹಿ/– ಶರತ್ ಜಿ.ಭಾ.ಆ.ಸೇ, ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು.

ಚಾಮರಾಜನಗರ–ರಾಮಸಮುದ್ರ
ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಗುರುರಾಘವೇಂದ್ರ ಚಿತ್ರಮಂದಿರಕ್ಕೆ ಹೋಗುವ ರಸ್ತೆ, ಎಸ್.ಪಿ.ಆಫೀಸ್ ಹಿಂಭಾಗ, ಚೆನ್ನಿಪುರದಮೋಳೆ, ಚಾಮರಾಜನಗರ–571313
E-mail: udachngr@gmail.com ದೂರವಾಣಿ ಮತ್ತು ಫ್ಯಾಕ್ಸ್ :08226–223166, +918226–295066
ಸಂಖ್ಯೆ:ಚಾರಾನಅಪ್ರಾ/ಟೆಂಡರ್–01/2026–27 ದಿನಾಂಕ :18–06–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ನಗರಸಭಾ ವ್ಯಾಪ್ತಿಯ ನಗರಸಭೆ ವಾರ್ಡ್ ನಂ.4ರ ಬೀಡಿ ಕಾಲೋನಿಯಲ್ಲಿರುವ ಅಜೀಜ್ ಸೇರ್ ಉದ್ಯಾನವನ ಅಭಿವೃದ್ಧಿ ಪಡಿಸುವ ಕಾಮಗಾರಿ ಅಂದಾಜುಮೊತ್ತ ರೂ.44.00ಲಕ್ಷಗಳು (ಜಿ.ಎಸ್.ಟಿ ಒಳಗೊಂಡಂತೆ). ಅರ್ಹ ನೋಂದಾಯಿತ ಗುತ್ತಿಗೆದಾರರುಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಪರತ್ತಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರಸಂ	ಕಾಮಗಾರಿ ವಿವರ	ಇ.ಎಂ.ಡಿ (ರೂ.ಗಳಲ್ಲಿ)
01	ಚಾಮರಾಜನಗರ ಜಿಲ್ಲೆ, ಚಾಮರಾಜನಗರ ನಗರಸಭಾ ವ್ಯಾಪ್ತಿಯ ನಗರಸಭೆ ವಾರ್ಡ್ ನಂ.4ರ ಬೀಡಿ ಕಾಲೋನಿಯಲ್ಲಿರುವ ಅಜೀಜ್ ಸೇರ್ ಉದ್ಯಾನವನ ಅಭಿವೃದ್ಧಿ ಪಡಿಸುವ ಕಾಮಗಾರಿ.	ರೂ. 88,000/–

01. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಚಾಲ್ತಿಗೆ ಬರುವ ದಿನಾಂಕ:20–06–2026.
02. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:09–07–2026ರ 17:30ಗಂಟೆಯವರೆಗೆ
03. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:10–07–20260 17:30 ಗಂಟೆಯವರೆಗೆ
04. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ:20–07–2026ರ 17:30ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– (ಮಹಮ್ಮದ್ ಅಸ್ಗರ್ (ಮುನ್ನ)
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ.

ಸಹಿ/– (ಹೆಚ್ ವಿ ಸೀಮಾ)
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ
ಚಾಮರಾಜನಗರ.

ಸಂ:ವಾಸಾಸಂಇ:ಚಾನಗರ:188:2026–27

ಕರ್ನಾಟಕ ಸರ್ಕಾರ
ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್‌ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ –570018
ಸಹಾಯವಾಣಿ ಸಂಖ್ಯೆ: 0821–2001737
ka.hootagalli.cmc@gmail.com
ಸಂ:ನಸಹೂ/ಆಶಾ/ಕಛೇರಿ ವಾಹನ/ಸಿ.ಆರ್–01/2026–27 ದಿ: 11.06.2026

ಟೆಂಡರ್ ಪ್ರಕಟಣೆ

ಕೆಟಿಪಿಪಿ 2000ರ ನಿಯಮದನ್ವಯ ಹೂಟಗಳ್ಳಿ ನಗರಸಭೆಯ ಪೌರಾಯುಕ್ತರ ಕಛೇರಿ ವಾಹನಕ್ಕೆ ವಾಹನ ಚಾಲಕನನ್ನು ಹೊರಗುತ್ತಿಗೆ ಆಧಾರಲ್ಲಿ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದೆ. ಅದರಂತೆ ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆಗಳು ದಿನಾಂಕ:20.06.2026ರ ಸಂಜೆ 4.00 ಘಂಟೆಯೊಳಗೆ ಈ ಕಛೇರಿಗೆ ಅರ್ಜಿ ಸಲ್ಲಿಸಿ ನಿಗಧಿತ ಶುಲ್ಕ ಪಾವತಿಸಿ ಟೆಂಡರ್ ನಮೂನೆಯನ್ನು ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಅಂಗೀಕರಿಸುವ ಅಥವ ತಿರಸ್ಕರಿಸುವ ಅಧಿಕಾರ ನಗರಸಭೆ ಆಡಳಿತಕ್ಕೆ ಸೇರಿರುತ್ತದೆ. ಅಂದಾಜು ಮೊತ್ತ:ರೂ.2,85,045/–, ಇಎಂಡಿ: ರೂ.7127/–. ಟೆಂಡರ್ ಫಾರಂ ಶುಲ್ಕ: ರೂ.500+18% ಜಿಎಸ್‌ಟಿ

ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ
DIPR/DDMYS/324/KSMCA/233/2026-27

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಶ್ರೀ ಡಿ.ಎಂ. ಲಿಂಗರಾಜು ಬಿನ್ ದುಂಡುಮಾದೇಗೌಡ, ವಾಸ ನಂಬರ್ 27, ಅಕ್ಕೂರು ಗ್ರಾಮ, ತಲಕಾಡು ಹೋಬಳಿ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ, ರವರ ಪರವಾಗಿ ನಾನು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ. ಈ ನೋಟೀಸಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಯಾಂದಹಳ್ಳಿ ಗ್ರಾಮದಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಂಘದವರು 121. 122/1 & 2, 123/1 & 2. 124/1 & 2. 125 ಮತ್ತಿತರ ಜಮೀನುಗಳಲ್ಲಿ ನಿರ್ಮಿಸಿರುವ ಜೆ. ಎಸ್.ಎಸ್. ನಗರ, ಎರಡನೇ ಹಂತದ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 1048 ವಿಸ್ತೀರ್ಣ ಪೂರ್ವ ಪಶ್ಚಿಮ 24–00 ಮೀಟರ್ ದಕ್ಷಿಣೋತ್ತರ 15–00 ಮೀಟರ್‌ಗಳು ಒಟ್ಟು 360 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನವು ಬಿ. ಎನ್. ಬೆಟ್‌ಕೆರೂರ್ ಬಿನ್ ಎನ್. ಬಿ. ಬೆಟ್‌ಕೆರೂರ್‌ರವರಿಗೆ ಮಂಜೂರಾಗಿದ್ದು ಗೃಹ ನಿರ್ಮಾಣ ಸಂಘದವರಿಂದ ದಿನಾಂಕ 26–09–2012 ರಂದು ನೊಂದಾಯಿತ ಶುದ್ಧ ಕ್ರಯಪತ್ರ ರಿಜಿಸ್ಟರ್ ಆಗಿದ್ದು ಅವರ ಮಾಲೀಕತ್ವ ಮತ್ತು ಸ್ವಾಧೀನಾನುಭವಕ್ಕೆ ಒಳಪಟ್ಟಿದ್ದು, ನಂತರ ಸದರಿ ಬಿ. ಎನ್. ಬೆಟ್‌ಕೆರೂರ್‌ರವರು ಅವರ ಮಗಳಾದ ಶ್ರೀಮತಿ ಸುನೀತ ಬೆಟ್‌ಕೆರೂರ್‌ರವರಿಗೆ ಷೆಡ್ಯೂಲ್ ಸ್ವತ್ತನ್ನು ದಿನಾಂಕ 30–10–2013ರ ನೊಂದಾಯಿತ ದಾನಪತ್ರದ ಮೂಲಕ ಕೊಟ್ಟಿದ್ದು, ನಂತರ ಶ್ರೀಮತಿ ಸುನೀತ ಬೆಟ್‌ಕೆರೂರ್ ರವರು ಷೆಡ್ಯೂಲ್ ನಿವೇಶನ ಸಂಖ್ಯೆ 1048 ನ್ನು ಎ.ಆರ್. ಗಂಗಾಧರ್ ಬಿನ್ ಎ.ಸಿ. ರುದ್ರಪ್ಪರವರಿಗೆ ದಿನಾಂಕ 29–02–2016ರ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಸ್ವಾಧೀನ ವಹಿಸಿದ್ದು ಷೆಡ್ಯೂಲ್ ಸ್ವತ್ತಿನ ಖಾತೆ ಹಾಲಿ ಮೈಸೂರು ತಾಲ್ಲೂಕು, ಮೊಸನಬಾಯನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಎ.ಆರ್. ಗಂಗಾಧರ್‌ರವರ ಹೆಸರಿನಲ್ಲಿ ಇ–ಖಾತೆ ದಾಖಲಾಗಿದ್ದು, ಎ.ಆರ್. ಗಂಗಾಧರ್‌ರವರ ಮಾಲೀಕತ್ವ ಮತ್ತು ಸ್ವಾಧೀನಾನುಭವಕ್ಕೆ ಒಳಪಟ್ಟಿರುತ್ತದೆ. ನನ್ನ ಕಕ್ಷಿದಾರರು ಸದರಿ ಷೆಡ್ಯೂಲ್‌ನಲ್ಲಿ ವಿವರಿಸಿರುವ ನಿವೇಶನ ಸಂಖ್ಯೆ 1048ನ್ನು ಎ.ಆರ್. ಗಂಗಾಧರ್‌ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಮೌಖಿಕ ಕರಾರು ಆಗಿರುತ್ತದೆ. ಆದ್ದರಿಂದ ಷೆಡ್ಯೂಲ್ ನಿವೇಶನದ ಮೇಲೆ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ ಇದ್ದಲ್ಲಿ, ಅಥವಾ ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಬಾಜುದಾರರ ಅಥವಾ ಬೇರೆ ಯಾರದಾದರೂ ಯಾವುದೇ ತಕರಾರು ಇದ್ದಲ್ಲಿ, ಏಳು ದಿನದ ಒಳಗಾಗಿ ನಿಮ್ಮ ಲಿಖಿತ ತಕರಾರನ್ನು ನಮ್ಮ ವಿಳಾಸಕ್ಕೆ ನೀಡತಕ್ಕದ್ದು. ನಮ್ಮ ಕಕ್ಷಿದಾರರಿಗೆ ಕ್ರಯಪತ್ರ ನೋಂದಣಿಯಾದ ನಂತರ ಯಾವುದೇ ರೀತಿಯ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ವರಣಾ ಹೋಬಳಿ, ಯಾಂದಹಳ್ಳಿ ಗ್ರಾಮದಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಂಘದವರು ನಿರ್ಮಿಸಿರುವ ಜೆ. ಎಸ್. ಎಸ್. ನಗರ, ಎರಡನೇ ಹಂತದ ಬಡಾವಣೆಯಲ್ಲಿರುವ ಮೊಸನಬಾಯನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಟ್ಟ ನಿವೇಶನ ಸಂಖ್ಯೆ 1048 ಇ–ಸ್ವತ್ತು ಪಿ.ಐ.ಡಿ. ನಂಬರ್ 152200414058023463 ವಿಸ್ತೀರ್ಣ ಪೂರ್ವ ಪಶ್ಚಿಮ 24–00 ಮೀಟರ್ ದಕ್ಷಿಣೋತ್ತರ 15–00 ಮೀಟರ್‌ಗಳು ಒಟ್ಟು 360 ಚದುರ ಮೀಟರ್‌ಗಳುಳ್ಳ ಖಾಲಿ ನಿವೇಶನ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: 1070 ಮತ್ತು 1071ನೇ ನಂಬರ್ ನಿವೇಶನಗಳು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 1049 ನೇ ನಂಬರ್ ನಿವೇಶನ, ದಕ್ಷಿಣಕ್ಕೆ: 1047 ನೇ ನಂಬರ್ ನಿವೇಶನ.

ದಿನಾಂಕ : 17–06–2026,
ಸ್ಥಳ : ತಿ.ನರಸೀಪುರ

ಸಹಿ/– ಕೆ.ಎಸ್.ಶಂಭುಲಿಂಗಸ್ವಾಮಿ,
ವಕೀಲರು, ವಿವೇಕಾನಂದನಗರ, ತಿ.ನರಸೀಪುರ ಪಟ್ಟಣ,
ಮೈಸೂರು ಜಿಲ್ಲೆ. ಮೊಬೈಲ್ : 9964481547

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಂ. ಸಿಇಎಸ್‌ಟಿ(4):ಸಿಆರ್: 08: 2026–27 ಆಡಳಿತ ವಿಭಾಗ
ದಿನಾಂಕ: 16–06–202

ಅಧಿಸೂಚನೆ

ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು, 2011 ರ ರೀತ್ಯಾ ಮೈಸೂರು ಮಹಾನಗರ ಪಾಲಿಕೆಗೆ ಮಂಜೂರಾಗಿರುವ "ಪೌರಕಾರ್ಮಿಕರ ಹುದ್ದೆ" ಗಳ ಪೈಕಿ ನೇರ ನೇಮಕಾತಿಯಡಿ ಖಾಲಿ ಇರುವ "ಪೌರಕಾರ್ಮಿಕ" ಹುದ್ದೆಗಳಿಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2022 ರ ರೀತ್ಯಾ "ಪೌರಕಾರ್ಮಿಕ" ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಆದೇಶ ಸಂಖ್ಯೆ: 1572124/ ಡಿಎಂಎ/ ಇಎಸ್‌ಟಿ3 / ಜಿಆರ್‌ಪಿಡಿ /5/2024, ದಿನಾಂಕ: 13–01–2026 ರಲ್ಲಿ ಮೈಸೂರು ಮಹಾನಗರ ಪಾಲಿಕೆಗೆ 50 ಪೌರಕಾರ್ಮಿಕರ ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಿರುತ್ತಾರೆ. ಆದರಂತೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ : 07–08–2017 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ವಿಳಾಸ
ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ	22–06–2026	ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–570004
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	21–07–2026	

ನಗರ ಸ್ಥಳೀಯ ಸಂಸ್ಥೆಯ ಹೆಸರು	ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ	ಭರ್ತಿ ಮಾಡಲು ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ	ನಿಗಧಿಪಡಿಸಲಾದ ಕನಿಷ್ಠ ವಿದ್ಯಾರ್ಹತೆ/ ಅರ್ಹತೆಗಳು
ಮೈಸೂರು ಮಹಾನಗರ ಪಾಲಿಕೆ	ಪೌರಕಾರ್ಮಿಕ (ರೂ. 27,000–46,675)	50	• ವಿದ್ಯಾರ್ಹತೆ ಅನ್ವಯಿಸುವುದಿಲ್ಲ • ಕನ್ನಡ ಮಾತನಾಡಲು ಬಲ್ಲವರಾಗಿರಬೇಕು. • ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ : 07–08–2017 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರಪಾವತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮಾತ್ರ ಅರ್ಹರಿರುತ್ತಾರೆ. •ಅರ್ಜಿ ಸಲ್ಲಿಸಲು ಸರ್ಕಾರ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 18 ವರ್ಷ ಪೂರ್ಣಗೊಂಡಿದ್ದು, ಗರಿಷ್ಠ ವಯೋಮಿತಿ 55 ವರ್ಷ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಡಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ ಸಿಆಸುಇ : 12 : ಸೆಹಿಮ : 2023, ಬೆಂಗಳೂರು, ದಿನಾಂಕ : 08–03–2023 ರನ್ವಯ ಸಮತಳ ಮೀಸಲಾತಿಯನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ: 02 : ಸೆಹಿಮ: 2026, ದಿನಾಂಕ : 13–05–2026 ರನ್ವಯ ಲಂಬ ಹಾಗೂ ಒಳ ಮೀಸಲಾತಿ ಅನುಸರಿಸಿ ರೋಸ್ಟರ್ ಬಿಂದುಗಳನ್ನು ವರ್ಗೀಕರಿಸಿರುವ ವಿವರ ಈ ಕೆಳಕಂಡಂತಿದೆ.

ಮೀಸಲಾತಿ		ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಯೋ.ನಿ.	ಕ.ಮಾ.ಅ.	ಅಂ.ವಿ.	ತೃ.ಲಿಂ.	ಒಟ್ಟು
ಪ.ಜಾ.	ಎ	02	–	01	–	–	–	–	–	03
	ಬಿ	01	–	02	–	–	–	–	–	03
	ಸಿ	–	01	01	–	–	–	–	–	02
ಪ.ಪಂ.		01	–	01	–	–	–	–	–	02
ಪ್ರ–1		01	01	–	–	–	–	–	–	02
ಪ್ರ–2(ಎ)		02	02	02	–	01	–	–	–	07
ಪ್ರ–2(ಬಿ)		–	02	–	–	–	–	–	–	02
ಪ್ರ–3(ಎ)		01	–	–	–	01	–	–	–	02
ಪ್ರ–3(ಬಿ)		–	–	01	–	–	–	–	01	02
ಸಾ.ಅ.		–	10	05	05	–	02	03	–	25
ಒಟ್ಟು		08	16	13	05	02	02	03	01	50

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಮೈಸೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ/ಹೆಬ್ಬೆಟ್ಟಿನ ಗುರುತು ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಸಂಬಂಧಪಟ್ಟ ಶಾಖಾ ಮುಖ್ಯಸ್ಥರಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರಿಗೆ ದಿನಾಂಕ: 21–07–2026 ರ ಸಂಜೆ 5–30 ಗಂಟೆಯೊಳಗೆ ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು. ಅಂಚೆ ಮೂಲಕ ಅಥವಾ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅವಧಿ / ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ: ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಾಲಿಕೆ ವೆಬ್‌ಸೈಟ್ http://www.mysurucity.mrc.gov.in ಪಾಲಿಕೆ ಕೇಂದ್ರ ಕಚೇರಿಯಿಂದ ಪಡೆಯಬಹುದಾಗಿದೆ.

ಸ್ಥಳ : ಮೈಸೂರು
ದಿನಾಂಕ : 16–06–2026

ಸಹಿ/– ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು,
ಮೈಸೂರು ಮಹಾನಗರ ಪಾಲಿಕೆ, ಮೈಸೂರು